
# “ಭಾರತ – ಅದರ ಸಮಸ್ಯೆ ಹಾಗೂ ಪರಿಹಾರ”



ಅಖಿಲ ಭಾರತ ಪತ್ರಿಕೆ

ಆಗಸ್ಟ್ – 2013



*"A prayer, a master act, a king idea can link man's strength to a transcendent Force."*

**- Sri Aurobindo**

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**

## ಪರಿವಿಡಿ

### “ಭಾರತ – ಅದರ ಸಮಸ್ಯೆ ಹಾಗೂ ಪರಿಹಾರ”

**(ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಬರಹಗಳ ಸಂಕಲನ)**

**ಭಾಗ – I**

**ಅನು : ದಿ॥ ಎಂ. ಕೇಶವ ಭಟ್ಟ**

**ರಾಷ್ಟ್ರ ಶಕ್ತಿಯ ಮೂಲ**

ಆಧ್ಯಾತ್ಮಿಕತೆ – ಸಾಮರ್ಥ್ಯಪೂರ್ಣ ಚೈತ್ಯಪ್ರವೃತ್ತಿ 5
ಸಮೃದ್ಧಿಯಿಂದ ಕೂಡಿದ ಸೃಜನಶೀಲತೆ – ಚೈತನ್ಯದ ಯಥೇಷ್ಟತೆ 5
ಭಾರತ – ಧರ್ಮ ಹಾಗೂ ಶಾಸ್ತ್ರಗಳ ಭೂಮಿ 6
ಭಾರತ – ಅತಿರೇಕವಾದವುಗಳಲ್ಲಿ ರಾಜೀ ಮಾಡುವ ಭೂಮಿ 6
ಭಾರತದ ಅವನತಿಗೆ ಕಾರಣ 8

**ಅನು : ಡಾ. ಕೆ.ಎಸ್. ಆಮೂರ**

**ಬದಲಾವಣೆಗಾಗಿ ಕೂಗು**

ಸಾಮಾಜಿಕ ಸುಧಾರಣೆಯ ಆವಶ್ಯಕತೆ 8
ಸಂಪೂರ್ಣ ಸತ್ಯದತ್ತ ಮರಳಿ ಹೋಗುವುದರ ಆವಶ್ಯಕತೆ 10
ಜಾತಿಪದ್ಧತಿ ಅವನತಿ ಹೊಂದುವುದನ್ನು ಸರಿಪಡಿಸುವುದು 11
ಭಾರತೀಯ ಸಮಾಜವಾದದ ನೆರವೇರಿಕೆ 12

**ಭಾರತದ ವೀರೋಚಿತ ಮನೋಧರ್ಮವನ್ನು ಜಾಗ್ರತಗೊಳಿಸುವುದು**

ಭಾರತ ಮಾತಾ 14
ಭಾರತದ ಆತ್ಮ ಏಕೈಕವಾಗಿದೆ 16
ಸಂಸ್ಕೃತಿಯ ಆಕ್ರಮಣಕಾರಿ ಆದರೆ ಯೋಚನಾರಹಿತವಲ್ಲದ ಪ್ರತಿಭಟನೆ 17
ಬಲದ ಆವಶ್ಯಕತೆ 19
ಭಗವದ್ಗೀತೆ, ನಮ್ಮ ಮುಖ್ಯ ರಾಷ್ಟ್ರೀಯ ಆಸ್ತಿ 20
ಜನ ಜಂಗುಳಿಯ ಮಟ್ಟದಲ್ಲಿ ಅಹಿಂಸೆಯ ತತ್ವವನ್ನು ಅನ್ವಯಿಸುವುದನ್ನು ಕುರಿತು 20
ದೇಶಭಕ್ತಿಯ ಭಾವನೆ ಹಾಗೂ ಯೋಗ 21
ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವ ಇವುಗಳ ನಿಜವಾದ ಮೂಲ 21
ಪ್ರಾರ್ಥನೆ ಮಾಡಿರಿ ಹಾಗೂ ದೈವೀ ಸತ್ಯದ ಜೊತೆಗಿರಿ 23

**ರಾಷ್ಟ್ರೀಯ ಜೀವನವನ್ನು ಜಾಗ್ರತಗೊಳಿಸುವುದು**

ಪಾರ್ಥಸಾರಥಿ ಅಯ್ಯಂಗಾರ ಅವರಿಗೆ ಶ್ರೀ ಅರವಿಂದರು 13–7–1911 ರಂದು ಬರೆದ ಪತ್ರದಿಂದ ಆಯ್ದ ಭಾಗಗಳು 23
ಭಾರತಕ್ಕೆ ಆದರ್ಶಪ್ರಾಯವಾದ ಸರಕಾರದ ರೂಪ 25
ಪಕ್ಷರಹಿತ ಸರಕಾರ 27
ಪ್ರಜ್ಞೆಯನ್ನು ಪಕ್ಷದಾಚೆಗೆ ಎಳೆದುಕೊಳ್ಳಿರಿ 28
ಪರಸ್ಪರರಲ್ಲಿ ಗೌರವ ಹಾಗೂ ಸಹಿಷ್ಣುತೆ ಇರುವ ಸಂಯುಕ್ತ ರಾಜ್ಯಾಡಳಿತದ ಆವಶ್ಯಕತೆ 28
ಭಾರತೀಯ ರೀತಿಯಲ್ಲಿ ಪ್ರಜಾಪ್ರಭುತ್ವದ ಮನೋಧರ್ಮವನ್ನು ಮೈಗೂಡಿಸಿಕೊಳ್ಳುವುದು 29
ಶ್ರೀಸಾಮಾನ್ಯರಲ್ಲಿ ರಾಜಕೀಯ ಭಾವನೆಯನ್ನು ಜಾಗ್ರತಗೊಳಿಸುವುದು 29
ವಿಕೇಂದ್ರೀಕರಣ ಮತ್ತು ಹಳ್ಳಿಯ ಜೀವನ 30
ರಾಷ್ಟ್ರೀಯ ವಿಚಾರದೊಂದಿಗೆ ಹಳ್ಳಿಯ ಜೀವನವನ್ನು ಪುನರ್ಸಂಘಟಿಸುವುದು 32
ಹಳ್ಳಿ ಮತ್ತು ಪ್ರೇಮದ ಕಾರಂಜಿಗಳು ಬತ್ತಿಹೋಗುವಿಕೆ 33
ಬಡತನದ ಎರಡು ಮುಖಗಳು 33

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಮಧ್ಯಮ ವರ್ಗದವರನ್ನು ಪರಿವರ್ತಿಸಬೇಕಾದ ಆವಶ್ಯಕತೆ 35
ಔದ್ಯೋಗಿಕ ಹಾಗೂ ಸಾಮಾಜಿಕ ಜೀವನವನ್ನು ಪುನರ್ರಚಿಸುವುದು 36
ಬಂಡವಾಳಶಾಹಿ ಹಾಗೂ ತೆರಿಗೆ ವಿಧಿಸುವುದು 37
ಏಪ್ರಿಲ್ 16, 1949 38

**ಅನು : ಶ್ರೀ ವೀರೇಂದ್ರ ಸಿಂಪಿ**

ವಾಕ್ ಸ್ವಾತಂತ್ರ್ಯ, ಸತ್ಯದ ಹಾಗೂ ನಿಷ್ಕಾಪಟ್ಯದ ಆದರ್ಶ 39
ಸಾಮಾನ್ಯ ಮನುಷ್ಯನ ಅಭಿರುಚಿಯನ್ನು ಅತಿ ಲಾಲನೆ ಮಾಡುವ ಮಾಧ್ಯಮ 41
ಅಭಿರುಚಿಯನ್ನು ಕೀಳುಮಟ್ಟಕ್ಕೆ ಇಳಿಸುವಿಕೆ ಮತ್ತು ಕಲಾತ್ಮಕ ಗ್ರಹಿಕೆ 41
ಸೌಂದರ್ಯಾಭಿರುಚಿಯನ್ನು ಜಾಗ್ರತಗೊಳಿಸುವುದು 43

**ಅನು : ಡಾ. ಕೆ.ಎಸ್. ಆಮೂರ**

**ಏಕತೆಯ ಸಮಸ್ಯೆ ಮತ್ತು ಪರಿಹಾರ**

ರಾಷ್ಟ್ರೀಯ ಭಾಷೆಯಾಗಿ ಏಕತೆಯನ್ನುಂಟು ಮಾಡಬಹುದಾದ ಸಂಸ್ಕೃತ ಭಾಷೆ 44
ರಾಷ್ಟ್ರಗೀತೆಯಾಗಿ 'ವಂದೇ ಮಾತರಮ್' ಇರುವುದನ್ನು ಕುರಿತು 45
ರಾಷ್ಟ್ರೀಯ ಪ್ರಜ್ಞೆಯ ಆವಶ್ಯಕತೆ 46
ಏಕತೆಯ ಆವಶ್ಯಕತೆ ಮತ್ತು ಅದಕ್ಕಾಗಿ ಮಾರ್ಗ 47
ಹಿಂದೂ–ಮುಸ್ಲಿಮರ ಸಮಸ್ಯೆ 48
ಮಹಮ್ಮದೀಯರ ಪ್ರಾತಿನಿಧ್ಯ 50
ಹಿಂದೂ ರಾಷ್ಟ್ರೀಯತೆ ಮತ್ತು ಭಾರತದ ಏಕತೆ 51
ಎಲ್ಲ ಧಾರ್ಮಿಕ ಮತಾಂಧತೆ ಮಿಥ್ಯೆಯಾದದ್ದು 53
ಧಾರ್ಮಿಕ ಮತಾಂತರ ಕುರಿತು 54

## ಭಾರತ – ಅದರ ಸಮಸ್ಯೆ ಹಾಗೂ ಪರಿಹಾರ

### ಭಾಗ – I

(ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಬರಹಗಳಿಂದ ಆಯ್ದ ಭಾಗಗಳು)

ದೇಶವನ್ನು ಅದರ ತೊಂದರೆಯಿಂದ ಹೊರಗೆಳೆದು ತೆಗೆಯಲು ಕೈಕೊಳ್ಳಬೇಕಾದುದೇನು?

ಶ್ರೀ ಅರವಿಂದರು ಎಲ್ಲ ತೊಂದರೆಗಳನ್ನು ಪೂರ್ವಭಾವಿಯಾಗಿ ಕಂಡುಕೊಂಡಿದ್ದಾರೆ ಮತ್ತು ಅವುಗಳಿಗೆ ಪರಿಹಾರ ಒದಗಿಸಿದ್ದಾರೆ. ಇದೀಗ ಅವರ ಜನ್ಮ ಶತಾಬ್ದಿಯನ್ನು ಆಚರಿಸುವ ಹಂತಕ್ಕೆ ಬಂದಿದ್ದೇವೆ.* ಅದನ್ನು ದೈವಿಕವಾಗಿ ಏರ್ಪಡಿಸಲಾಗಿದೆ ಎಂದು ತೋರಿಬರುತ್ತಿದೆ.

* ಈ ಸಂದೇಶ ಶ್ರೀಮಾತೆಯವರು ಶ್ರೀ ಅರವಿಂದರ ಜನ್ಮ ಶತಾಬ್ದಿ ವರ್ಷವಾಗಿದ್ದ 1972 ರಲ್ಲಿ ಕೊಟ್ಟದ್ದಾಗಿದೆ. (ಸಂ)



ಏಕೆಂದರೆ ಅವರ ಬೋಧನೆಯನ್ನು ದೇಶದಾದ್ಯಂತ ಪ್ರಸಾರ ಮಾಡಲು ಇದು ಒಂದು ಅದ್ಭುತ ಅವಕಾಶವಾಗಿದೆ: ಬೋಧನೆ, ಪ್ರಾಯೋಗಿಕ ಬೋಧನೆ, ಭಾರತವನ್ನು ಕುರಿತು, ಅದನ್ನು ಸಂಘಟಿಸುವುದನ್ನು ಕುರಿತು, ಅದರ ಮಣಿಹ ಕುರಿತು ಬೋಧನೆ ಇದೆಲ್ಲವನ್ನು ದೇಶದಾದ್ಯಂತ ತಿಳಿಸಿಕೊಡಬಹುದಾಗಿದೆ, ಅದನ್ನು ಸ್ವಲ್ಪ ಹೆಚ್ಚಿನ ಸಂಘಟನೆಯ ಮೂಲಕ ಕೈಕೊಳ್ಳಬಹುದಾಗಿದೆ.

**(15/405)** **– ಶ್ರೀಮಾತೆ**

*

### ಈ ತಿಂಗಳಿನ ಪ್ರಮುಖ ದಿನ

### ಅಗಸ್ಟ 15

ಭಾರತದ ಸ್ವಾತಂತ್ರ್ಯ ದಿನ (ಅಗಸ್ಟ 15, 1947) ಶ್ರೀ ಅರವಿಂದರ ಎಪ್ಪತ್ತೈದನೆಯ ಜನ್ಮದಿನದೊಂದಿಗೆ ಏಕಕಾಲಿಕವಾಗಿತ್ತು. ಅವರು ಆ ಸಮಯದಲ್ಲಿ ದೇಶಕ್ಕೆ ಕೊಟ್ಟ ಸಂದೇಶವನ್ನು ಆಕಾಶವಾಣಿ ಪ್ರಸಾರ ಮಾಡಿತ್ತು. ಅದರಲ್ಲಿ ಅವರು "ನಾನು ಈ ಏಕಕಾಲೀನತೆಯನ್ನು ಅನುದ್ದಿಷ್ಟ ಆಕಸ್ಮಿಕ ಎಂದು ಭಾವಿಸುವುದಿಲ್ಲ, ಆದರೆ ಅದು ನನ್ನ ಹೆಜ್ಜೆಗಳಿಗೆ ಮಾರ್ಗದರ್ಶನ ಮಾಡುವ ದೈವೀಶಕ್ತಿಯ ಅನುಮೋದನೆ (sanction) ಮತ್ತು ನಾನು ಯಾವ ಕಾರ್ಯದಿಂದ ಜೀವನವನ್ನು ಪ್ರಾರಂಭಿಸಿದೆನೋ ಅದರ ಪೂರ್ತಿ ಫಲಪ್ರದತೆಯ ಪ್ರಾರಂಭ" ಎಂದು ಹೇಳಿದ್ದರು.

ಶಿಷ್ಯನೊಬ್ಬನಿಗೆ ಬರೆದ ಪತ್ರದಲ್ಲಿ ಶ್ರೀ ಅರವಿಂದರು ಹೇಳಿದ್ದು ಹೀಗಿದೆ: "ಅಗಸ್ಟ 15 ಸಾಮಾನ್ಯವಾಗಿ ನನಗೆ ಸಾಧನೆಯಲ್ಲಿ ಇಲ್ಲವೆ ಜೀವನದಲ್ಲಿ ತಿರುವು ನೀಡುವ ಸಮಯ ಇಲ್ಲವೆ ಅಸಾಧಾರಣವಾದ ದಿನ – ಇತರರಿಗಾಗಿ ಅದು ಅಪರೋಕ್ಷವಾಗಿ ಮಾತ್ರ ಹಾಗಿದೆ."

ಆಶ್ರಮದ ಕ್ರೀಡಾಂಗಣದಲ್ಲಿ ಅಗಸ್ಟ 15, 1956 ರಂದು ಶ್ರೀಮಾತೆಯವರು ಹೇಳಿದ್ದು ಹೀಗಿದೆ: "ಅಗಸ್ಟ 15 ಶ್ರೀ ಅರವಿಂದರ ಜನ್ಮ ದಿನ ಹಾಗಾಗಿ ಆ ದಿನಾಂಕಕ್ಕೆ ಪೃಥ್ವಿಯ ಜೀವನದಲ್ಲಿ, ಭೌತಿಕ ದೃಷ್ಟಿಕೋನದಿಂದ ಪ್ರಧಾನ ಮಹತ್ವವಿದೆ."

ಅಗಸ್ಟ 15, 1959 ರಲ್ಲಿ ಶ್ರೀಮಾತೆಯವರು ಶಿಷ್ಯನೊಬ್ಬನಿಗೆ ಬರೆದ ಪತ್ರದಲ್ಲಿ ಹೇಳಿದ್ದು ಹೀಗಿದೆ: "ಮತ್ತು ಈಗ, ಇಂದು ಮತ್ತೆ ನಾನು ನಿನಗೆ ಬರೆದು ತಿಳಿಸುತ್ತಿದ್ದೇನೆ, ಏಕೆಂದರೆ ಇದು ಶ್ರೇಷ್ಠ ಕ್ಷಮಾದಾನ (amnesty)ದ ದಿನ ಇಂದು ಗತಕಾಲದ ಎಲ್ಲ ದೋಷಗಳನ್ನು ಅಳಿಸಿ ಹಾಕಲಾಗುತ್ತದೆ."

ಈ ದಿನದ ಪ್ರಾಮುಖ್ಯತೆ ಹೀಗಿದೆ. ಆಶ್ರಮದಲ್ಲಿಯ ನಾಲ್ಕು ದರ್ಶನ ದಿನಗಳಲ್ಲಿ ಈ ದಿನವೂ ಒಂದು.

*

## ರಾಷ್ಟ್ರ ಶಕ್ತಿಯ ಮೂಲ
## ಆಧ್ಯಾತ್ಮಿಕತೆ – ಸಾಮರ್ಥ್ಯಪೂರ್ಣ ಚೈತ್ಯಪ್ರವೃತ್ತಿ

ಆಧ್ಯಾತ್ಮಿಕತೆ ಭಾರತೀಯ ಮನಸ್ಸಿನ ಬೀಗದ ಕೈ. ಅನಂತದ ಭಾವನೆ ಅದಕ್ಕೆ ಸ್ವಾಭಾವಿಕವಾಗಿದೆ. ಮೊದಲಿನಿಂದಲೂ ಭಾರತ – ಅದರ ತಾರ್ಕಿಕ ಯುಗಗಳಲ್ಲಿ ಇದ್ದ ಹಾಗೆಯೇ ಅಜ್ಞಾನ ಹೆಚ್ಚುತ್ತಿರುವ ಯುಗಗಳಲ್ಲಿಯೂ ಕೂಡ ಜೀವನವನ್ನು ಏಕೈಕ ಪ್ರಕಾಶದಲ್ಲಿ ನೋಡಲಾಗುವುದಿಲ್ಲ, ಏಕೈಕ ಸಾಮರ್ಥ್ಯದ ಬಾಹ್ಯ ರೂಪಗಳಲ್ಲಿ ಜೀವಿಸಲಾಗುವುದಿಲ್ಲ ಎಂಬ ಅಂತರ್ದೃಷ್ಟಿಯನ್ನು ಎಂದೂ ಕಳೆದುಕೊಂಡಿರಲಿಲ್ಲ. ಅನಾದಿ ಕಾಲದಿಂದ ಈ ಅಂತರ್ದೃಷ್ಟಿ ಮತ್ತು ಆಚರಣೆ ಭಾರತದಲ್ಲಿ ಇದ್ದುದರಿಂದ ಅಲ್ಲಿ ಆಧ್ಯಾತ್ಮಿಕತೆ, ಸಾಮರ್ಥ್ಯಪೂರ್ಣ ಚೈತ್ಯಪ್ರವೃತ್ತಿ, ಅನಂತದೊಡನೆ ಕೈ ಕೈ ಮಿಲಾಯಿಸುವಿಕೆಗೆ ಹಾಗೂ ವಶಪಡಿಸಿಕೊಳ್ಳುವಿಕೆಗೆ ಹಾತೊರೆತ, ನಿರ್ಮೂಲ ಮಾಡಲಾಗದ ಧಾರ್ಮಿಕ ಭಾವನೆ, ಆದರ್ಶ, ಯೋಗ, ಕಲೆ ಮತ್ತು ತತ್ತ್ವಜ್ಞಾನಗಳತ್ತ ಸತತ ಹೊರಳುವಿಕೆ ಇವೆಲ್ಲ ಆಳವಾಗಿ ಬೇರುಬಿಟ್ಟಿದ್ದವು.

**(20/6–7)** **– ಶ್ರೀ ಅರವಿಂದರು**

*

## ಸಮೃದ್ಧಿಯಿಂದ ಕೂಡಿದ ಸೃಜನಶೀಲತೆ – ಚೈತನ್ಯದ ಯಥೇಷ್ಟತೆ

... ನಮ್ಮ ಪರ್ವತ ಶಿಖರಗಳು ಕನಸಿನ ಕಲ್ಪನೆಯಂತೆ ಮೋಡಗಳಿಂದ ಹೇಗೆ ಎದ್ದುಬರಲಾರವೋ ಹಾಗೆಯೇ ಸ್ವಯಂ ಆಧ್ಯಾತ್ಮಿಕತೆಯೂ ಕೂಡ ಈ ಭೂಮಿಯಲ್ಲಿ ತಳಹದಿಯಿಲ್ಲದೆ ಬರಲಾರದು. ಭಾರತದ ಗತ ವೈಭವವನ್ನು ಪರಿಶೀಲಿಸಿದಾಗ ನಮಗೆ ಮೊದಲು ಕಂಗೊಳಿಸುವುದೇನೆಂದರೆ ಅದರ ಅದ್ಭುತ ಚೈತನ್ಯ, ಅದರ ಅಕ್ಷಯ ಜೀವಶಕ್ತಿ, ಜೀವನಾನಂದ ಶಕ್ತಿ, ಕಲ್ಪನಾತೀತವೆನಿಸುವ ಸಮೃದ್ಧ ಸೃಜನಶೀಲತೆ. ಕನಿಷ್ಠಪಕ್ಷ ಮೂರು ಸಾವಿರ ವರ್ಷಗಳಿಂದ – ನಿಜ ಹೇಳುವುದಾದರೆ ಅದಕ್ಕೂ ಹಿಂದಿನಿಂದಲೇ – ಭಾರತವು ಸಮೃದ್ಧವಾಗಿ ಹಾಗೂ ನಿರಂತರವಾಗಿ, ತಡೆಯಿಲ್ಲದೆ, ಶಕ್ತಿಗುಂದದೆ, ಅಕ್ಷಯ ಬಹುಮುಖತೆಯಿಂದ ಗಣರಾಜ್ಯಗಳನ್ನು, ರಾಜ್ಯ ಸಾಮ್ರಾಜ್ಯಗಳನ್ನು, ತತ್ವದರ್ಶನಗಳನ್ನು, ವಿಶ್ವೋತ್ಪತ್ತಿ ಸಿದ್ಧಾಂತಗಳನ್ನು, ಶಾಸ್ತ್ರ ವಿಜ್ಞಾನಗಳನ್ನು, ಪಂಥಗಳನ್ನು, ಕಲೆಗಳನ್ನು, ಕಾವ್ಯಗಳನ್ನು, ಸರ್ವ ಪ್ರಕಾರಗಳ ಸ್ಮಾರಕಗಳನ್ನು, ರಾಜಪ್ರಾಸಾದಗಳನ್ನು, ಗುಡಿಗೋಪುರಗಳನ್ನು, ಲೋಕೋಪಯೋಗಿ ಕಾರ್ಯಗಳನ್ನು, ಸಮುದಾಯಗಳನ್ನು, ಸಮಾಜಗಳನ್ನು, ಧಾರ್ಮಿಕ ವ್ಯವಸ್ಥೆಗಳನ್ನು, ವಿಧಿಗಳನ್ನು, ಸಂಹಿತೆಗಳನ್ನು, ಕ್ರಿಯಾ ವಿಧಾನಗಳನ್ನು, ಭೌತಿಕ ವಿಜ್ಞಾನಗಳನ್ನು, ಚೈತ್ಯ ವಿಜ್ಞಾನಗಳನ್ನು, ಯೋಗ ಪದ್ಧತಿಗಳನ್ನು, ರಾಜಕೀಯ ಹಾಗೂ ಆಡಳಿತ ಪ್ರಣಾಲಿಕೆಗಳನ್ನು, ಆಧ್ಯಾತ್ಮಿಕ ಕಲೆಗಳನ್ನು, ಲೌಕಿಕ ಕಲೆಗಳನ್ನು, ವೃತ್ತಿಗಳನ್ನು, ಉದ್ದಿಮೆಗಳನ್ನು, ಕುಶಲಕಲಾ ಕರ್ಮಗಳನ್ನು ಸೃಜಿಸುತ್ತಲೇ ಬಂದಿದೆ. ಹೇಳುತ್ತಾ ಹೋದರೆ ಈ ಪಟ್ಟಿಗೆ ಕೊನೆಯೇ ಇರಲಾರದು. ಒಂದೊಂದು ಶಾಖೆಯಲ್ಲೂ ಸಮೃದ್ಧವಾಗಿ ಕಾರ್ಯ ನಡೆದಿದೆ.



**(20/7–8)** **– ಶ್ರೀ ಅರವಿಂದರು**

*

## ಭಾರತ – ಧರ್ಮ ಹಾಗೂ ಶಾಸ್ತ್ರಗಳ ಭೂಮಿ

ಭಾರತ ಸರ್ವ ಪ್ರಧಾನವಾಗಿ ಧರ್ಮಭೂಮಿಯಾಗಿತ್ತು, ಶಾಸ್ತ್ರಭೂಮಿ–ಯಾಗಿತ್ತು. ಅದು ಪ್ರತಿಯೊಂದು ಮಾನವ ಕ್ರಿಯೆಯ ಮತ್ತು ವಿಶ್ವ ಕ್ರಿಯೆಯ ಅಂತಃಸತ್ವವನ್ನು ಇಲ್ಲವೆ ಅಂತರ್ನಿಯಮವನ್ನು ಎಂದರೆ ಅದರ ಧರ್ಮವನ್ನು ಅನ್ವೇಷಿಸಿತು, ಧರ್ಮವನ್ನು ಒಮ್ಮೆ ಕಂಡುಕೊಂಡ ಮೇಲೆ ವಸ್ತುಸ್ಥಿತಿಯಲ್ಲೂ, ಜೀವನದ ನಿಯಮದಲ್ಲೂ ಧರ್ಮದ ಪ್ರಯೋಗವನ್ನು ವಿಶದವಾಗಿಯೂ, ಸವಿಸ್ತರ ವಿಧಿಯಾಗಿಯೂ ರೂಪಿಸಲು ಶ್ರಮಿಸಿತು. ಭಾರತದ ಮೊದಲ ಯುಗವು ಆತ್ಮದರ್ಶನದಿಂದ ಪ್ರಕಾಶಮಾನವಾಗಿತ್ತು, ಎರಡನೆಯ ಯುಗವು ಧರ್ಮದರ್ಶನವನ್ನು ಪೂರ್ಣಗೊಳಿಸಿತು. ಅದರ ಮೂರನೆಯ ಯುಗವು ಶಾಸ್ತ್ರದ ಮೊದಲ ಸರಳತರ ಶಾಸ್ತ್ರ ಸೂತ್ರೀಕರಣವನ್ನು ವಿವರವಾಗಿ ವಿಸ್ತರಿಸಿತು, ಆದರೆ ಯಾವುದೂ ಏಕಾಂತಿಕವಾಗಿರಲಿಲ್ಲ, ಮೂರೂ ತತ್ವಗಳು ಸದಾ ಸನ್ನಿಹಿತವಾಗಿದ್ದವು.

**(20/8)** **– ಶ್ರೀ ಅರವಿಂದರು**

*

## ಭಾರತ – ಅತಿರೇಕವಾದವುಗಳಲ್ಲಿ ರಾಜೀ ಮಾಡುವ ಭೂಮಿ

ಬದುಕಿನಲ್ಲಿ ಸಮೃದ್ಧ ಜೀವನಾದರ್ಶ ಹಾಗೂ ದಾರಿದ್ರ್ಯದ ಜೀವನಾದರ್ಶ, ರಾಜ ವೈಭವದ ತುತ್ತತುದಿಯವರೆಗೂ, ಸಂತೃಪ್ತ ದಿಗಂಬರ ಸ್ಥಿತಿಯ ತುತ್ತತುದಿಯವರೆಗೂ ಅನುಷ್ಠಾನಕ್ಕೆ ಬಂದಿದ್ದವು. ಅದರ ಸಹಜ ಪ್ರೇರಣೆಗಳು ಸಾಕಷ್ಟು ಸ್ಪಷ್ಟವಾಗಿಯೂ, ದಿಟ್ಟವಾಗಿಯೂ ಇದ್ದುದರಿಂದ, ಅದು ತಾನೇ ನೆಚ್ಚಿಕೊಂಡಿದ್ದ ವಿಚಾರಗಳಿಂದ ಹಾಗೂ ತನ್ನದೇ ಜೀವನ, ರೀತಿನೀತಿಗಳಿಂದ ಆ ಪ್ರೇರಣೆಗಳು ಮರೆಯಾಗಲು ಸಾಧ್ಯವಿರಲಿಲ್ಲ. ಭಾರತ ತನ್ನ ರಾಜಕೀಯ ಆವಶ್ಯಕತೆಗಳಿಂದಾಗಿ ಹಾಗೂ ಪರಿಸ್ಥಿತಿಗಳಿಂದಾಗಿ ಕೊನೆಯ ರಾಜಸತ್ತಾತತ್ವಕ್ಕೆ

ಮಿತಿಮೀರಿದ ಪ್ರಾಧಾನ್ಯಕೊಟ್ಟು 'ರಾಜಾ ಪ್ರತ್ಯಕ್ಷ ದೇವತಾ' ಎಂದು ಘೋಷಿಸಿ, ತನ್ನ ಪುರಾತನ ಗಣತಂತ್ರಾತ್ಮಕ ನಗರ ರಾಜ್ಯಗಳೂ, ಸ್ವತಂತ್ರ ಸಂಯುಕ್ತ ರಾಜ್ಯಗಳೂ ಕೇಂದ್ರದಿಂದ ಹೊರಹಾಕುವ ಪ್ರವೃತ್ತಿಗೆ ತೀರಾ ಅನುಕೂಲವೆಂಬ ಕಾರಣದಿಂದ ಅವುಗಳನ್ನು ತೊಡೆದು ಹಾಕುವುದು ಅನಿವಾರ್ಯವಾದುದೇನೋ ನಿಜ, ಆದಕಾರಣ ಪ್ರಜಾಪ್ರಭುತ್ವ ತತ್ವವನ್ನು ಅಭಿವೃದ್ಧಿಪಡಿಸಿಕೊಳ್ಳಲು ಭಾರತ ಶಕ್ತವಾಗಿರಲಿಲ್ಲ ಎಂಬುದೂ ನಿಜ; ಹಾಗಿದ್ದರೂ ಭಾರತದಲ್ಲಿ ಪ್ರಜಾಪ್ರಭುತ್ವದ ಕಲ್ಪನೆಯಂತೂ ಇದ್ದೇ ಇತ್ತು. ಈ ಕಲ್ಪನೆಯನ್ನು ಭಾರತ ಗ್ರಾಮದಲ್ಲಿ, ಪರಿಷತ್ತಿನಲ್ಲಿ, ನಗರ ಪಾಲಿಕೆಯಲ್ಲಿ, ಜಾತಿಯೊಳಗೂ ಸಹ ಪ್ರಯೋಗದಲ್ಲಿ ತಂದಿತ್ತು. ಜನತೆಯಲ್ಲಿ ದೈವೀಶಕ್ತಿಯುಂಟೆಂದು ಘೋಷಿಸಿದ ದೇಶಗಳಲ್ಲಿ ಭಾರತವೇ ಪ್ರಥಮ ದೇಶ. ರಾಜನು ತನ್ನ ಅಧಿಕಾರ ಶಿಖರದಲ್ಲಿದ್ದಾಗ "ಮಹಾರಾಜಾ, ನೀನು ಪ್ರಜಾವರ್ಗದ ಪ್ರಧಾನ ಸೇವಕನಲ್ಲದೆ ಬೇರೇನು?" ಎಂದು ಕೂಗಿ ಹೇಳುವುದಕ್ಕೂ ಭಾರತವು ಶಕ್ತವಾಗಿತ್ತು. ಅದರ ಎಣಿಕೆಯಂತೆ ನಿರಾತಂಕವಾದ ಆಧ್ಯಾತ್ಮಿಕ ಅರಾಜಕತೆಯೇ ಸ್ವರ್ಣಯುಗ. ಅದರ ಮಿತಿಮೀರಿದ ಆಧ್ಯಾತ್ಮಿಕ ಪ್ರವೃತ್ತಿಯು ಐಂದ್ರಿಯ ಜೀವನವನ್ನೂ ಅದರ ಸುಖಾನುಭವಗಳನ್ನೂ ಚಿರಕಾಲದಿಂದ ರೂಪಿಸುತ್ತಾ ಬರಲು ತಡೆಗಟ್ಟಾಗಿರಲಿಲ್ಲ: ಈ ವಿಚಾರದಲ್ಲಾದರೂ ಅದು ಐಂದ್ರಿಯ ವಿವರದ ಪರಮ ಸಮೃದ್ಧಿಯನ್ನೂ, ಐಂದ್ರಿಯಾನುಭವದ ಅಗಾಧತೆಯನ್ನೂ, ತೀವ್ರತೆಯನ್ನೂ ಬಯಸಿತ್ತು. ವಸ್ತುಸ್ಥಿತಿ ಹೀಗಿದ್ದರೂ, ಪರಸ್ಪರವಾಗಿ ತೀರಾ ವಿರುದ್ಧವಾದ ತತ್ವಗಳ ಈ ಅನ್ವೇಷಣೆಯು ಅವ್ಯವಸ್ಥೆಯಲ್ಲಿ ಪರಿಣಮಿಸಿರಲಿಲ್ಲ ಎಂಬ ಸಂಗತಿಯನ್ನು ಗಮನಿಸಬೇಕು, ಸುಖ–ಭೋಗಾನುಭವದ ಪರಾಕಾಷ್ಠೆಯ ಯುಗದಲ್ಲೂ ಅಂತಹ ಪ್ರಗತಿಯಿಂದಾಗಿ ಯುರೋಪಿನಲ್ಲಿ ಅನೇಕ ಬಾರಿ ಕಂಡುಬಂದ ವಿಶೃಂಖಲ ಭ್ರಷ್ಟಾಚಾರಕ್ಕೆ ಸಮಾನವಾದ ಪರಿಸ್ಥಿತಿ ಇಲ್ಲಿ ಗೋಚರಿಸಿಲ್ಲ. ಏಕೆಂದರೆ ಭಾರತೀಯ ಮನೋವೃತ್ತಿಯು ಆಧ್ಯಾತ್ಮಿಕನಿಷ್ಠ ಮನೋವೃತ್ತಿ ಮಾತ್ರವಲ್ಲ, ನೀತಿನಿಷ್ಠ ಮನೋವೃತ್ತಿ ಮಾತ್ರವಲ್ಲ, ಅದು ಬುದ್ಧಿ ವಿಚಾರನಿಷ್ಠವೂ ಹೌದು. ಬುದ್ಧಿ–ವಿಚಾರದ ನಿಯಮ, ಸೌಂದರ್ಯದ ಲಯಗತಿ ಇವೆರಡೂ ಅವ್ಯವಸ್ಥೆಗೆ ವಿರೋಧಿಗಳು. ಪ್ರತಿಯೊಂದು ಅತಿರೇಕದಲ್ಲಿಯೂ ಭಾರತೀಯ ಚಿಕಿತ್ಸಕ ಪ್ರವೃತ್ತಿಯು ಆ ಅತಿರೇಕದಲ್ಲಿ ಒಂದು ವಿಧಿಯನ್ನು, ಅದರ ಪ್ರಯೋಗದಲ್ಲಿ ಒಂದು ನಿಯಮವನ್ನು, ಮಾನದಂಡವನ್ನು ಹಾಗೂ ಬಂಧನವನ್ನು ಅಪೇಕ್ಷಿಸುತ್ತದೆ.

**(20/11–12)** **– ಶ್ರೀ ಅರವಿಂದರು**

*



## ಭಾರತದ ಅವನತಿಗೆ ಕಾರಣ

ಭಾರತೀಯರಲ್ಲಿ ಹೆಚ್ಚಿನ ಜನರು ತಮ್ಮ ಸರ್ವಸ್ವವನ್ನು ನಿಜಕ್ಕೂ ಧರ್ಮಮಯವಾಗಿ ಮಾಡಿದ್ದರೆ ನಾವಿಂದು ಈ ಸ್ಥಿತಿಯಲ್ಲಿ ಇರುತ್ತಿರಲಿಲ್ಲ. ಅವರ ಸಾರ್ವಜನಿಕ ಜೀವನವು ತೀರಾ ಧರ್ಮವಿರುದ್ಧವಾಗಿ, ಅಹಂತಾಪೂರ್ಣವಾಗಿ, ಸ್ವಾರ್ಥಾನ್ವೇಷಕವಾಗಿ, ವಿಷಯನಿಷ್ಠವಾಗಿ ಬೆಳೆದುದೇ ಅದಕ್ಕೆ ಕಾರಣ. ಒಂದುಕಡೆ ನಾವು ಮಿತಿಮೀರಿದ ಧರ್ಮನಿಷ್ಠೆಯನ್ನು ಕೈಕೊಂಡು, ಎಂದರೆ ವ್ರತಾಚರಣೆ, ನಿಯಮ, ನಿತ್ಯಗಟ್ಟಲೆಯ ವಿಧಿ, ಯಾಂತ್ರಿಕ ಪೂಜೆಗಳಲ್ಲಿ ಮಿತಿಮೀರಿದ ಬಹಿರಾಚಾರಪ್ರಿಯತೆಯನ್ನೂ, ಇನ್ನೊಂದು ಕಡೆ ತೀರಾ ಲೋಕ ವಿಮುಖವಾದ ವೈರಾಗ್ಯಪರತೆಯನ್ನು ಕೈಕೊಂಡು ಅಡ್ಡದಾರಿ ಹಿಡಿದಿರುವುದು ನಿಜವಾಗಿರ–ಬಹುದು; ಇದರಿಂದಾಗಿ ಪರಮ ಮೇಧಾವಿಗಳು ವಿಕರ್ಷಿತರಾದರು, ಪುರಾತನ ಕಾಲದ ಋಷಿಗಳಂತೆ ಸಮಾಜದ ಆಧ್ಯಾತ್ಮಿಕ ಆಶ್ರಯರಾಗಿಯೂ, ಅದಕ್ಕೆ ಪ್ರಬೋಧಕ ಜೀವದಾಯಕರಾಗಿಯೂ ನಿಲ್ಲುವುದರ ಬದಲಾಗಿ, ಸಮಾಜಕ್ಕೆ ನಷ್ಟಪ್ರಾಯರಾದರು. ಆದರೆ ಆಧ್ಯಾತ್ಮಿಕ ಪ್ರೇರಣೆಯ ವ್ಯಾಪಕತೆಯೂ, ವಿಶಾಲತೆಯೂ ಕ್ಷೀಣಿಸಿದುದೇ, ಬುದ್ಧಿವಿಚಾರ ಕ್ರಿಯೆಯೂ, ವಿಚಾರ ಸ್ವಾತಂತ್ರ್ಯವೂ ಕುಗ್ಗಿಹೋದುದೇ, ಮಹೋನ್ನತ ದರ್ಶನಗಳ ಅಭಾವವೇ ಜೀವನೋತ್ಸಾಹದ ನಷ್ಟವೇ ಇದಕ್ಕೆಲ್ಲ ಮೂಲಕಾರಣ.

**(20/39)** **– ಶ್ರೀ ಅರವಿಂದರು**

*

## ಬದಲಾವಣೆಗಾಗಿ ಕೂಗು
### ಸಾಮಾಜಿಕ ಸುಧಾರಣೆಯ ಆವಶ್ಯಕತೆ

ಸಾಂಪ್ರದಾಯಿಕರಾದವರ ನಿಲುವನ್ನು ಕಂಡು ಆಶ್ಚರ್ಯವಾಗುತ್ತದೆ. ಅವರು ಅಸ್ತಿತ್ವದಲ್ಲಿ ಇರುವುದನ್ನೆಲ್ಲ ದೈವೀಕರಣಗೊಳಿಸಲು ಶ್ರಮಿಸುತ್ತಾರೆ. ಹಿಂದೂ ಸಮಾಜ ವಿಶಿಷ್ಟ ವ್ಯವಸ್ಥೆಗಳನ್ನು ಹಾಗೂ ರೂಢಿಗಳನ್ನು ಹೊಂದಿದೆ, ಅವು ಕೇವಲ ರೂಢಿಗತವಾಗಿ ಬಂದವುಗಳಾಗಿವೆ, ಅವು ಪ್ರಾಚೀನ ಕಾಲದಲ್ಲಿ ಅಸ್ತಿತ್ವದಲ್ಲಿದ್ದವು ಎಂಬುದಕ್ಕೆ ಮತ್ತು ಅವು ಭವಿಷ್ಯತ್ತಿನಲ್ಲಿ ಏಕೆ ಉಳಿದುಕೊಳ್ಳಬೇಕು ಎಂಬುದಕ್ಕೆ ಪ್ರಮಾಣವಿಲ್ಲ. ಪ್ರಾಚೀನತೆಯಾಗಲಿ ಇಲ್ಲವೆ ಆಧುನಿಕತೆಯಾಗಲಿ ಸತ್ಯವನ್ನು ಇಲ್ಲವೆ ಉಪಯುಕ್ತತೆಯನ್ನು ಪರೀಕ್ಷೆಗೊಳಪಡಿಸುವುದಕ್ಕೆ ಸಾಧನಗಳಾಗಲಾರವು. ಎಲ್ಲ ಋಷಿಗಳು ಗತಕಾಲಕ್ಕೆ ಸೇರಿದವರಾಗಿಲ್ಲ, ಅವತಾರಗಳು ಇನ್ನೂ ಬರುತ್ತಲಿವೆ, ಅಲೌಕಿಕ ಜ್ಞಾನದ ನೀಡಿಕೆ ಮುಂದುವರಿಯುತ್ತಿದೆ. ...

ನಮ್ಮಲ್ಲಿ ರೂಢಿಗಳನ್ನು ಬುದ್ಧಿಶಕ್ತಿಯಿಲ್ಲದೆ ರಕ್ಷಣೆ ಮಾಡಿಕೊಂಡು ಬರುವುದಕ್ಕೆ ಇದೇ ರೀತಿಯ ಸಮರ್ಥನೆ ಇದೆ. ಆದರೆ ರಕ್ಷಣೆ ಮಾಡುವ ರೀತಿಗಳು ಹಲವಾರು ಇರುವುದರಿಂದ ಅವುಗಳಲ್ಲಿ ಯಾವುದು ಸಾರ್ವಭೌಮ ರೀತಿಯಲ್ಲಿ ನಿರ್ಣಾಯಕವಾದ ರೀತಿಯಲ್ಲಿದೆ ಎಂಬುದು ನನಗೆ ತಿಳಿದಿಲ್ಲ. ರೂಢಿ ಒಂದು ಶಿಷ್ಟಾಚಾರ, ಮರ್ಯಾದೆ ನೀಡುವಿಕೆ, ಅದನ್ನು ಎಲ್ಲ ಸಂಭಾವಿತ ಹಾಗೂ ಗೌರವಾನ್ವಿತ ಜನರು ಪಾಲಿಸುತ್ತಾರೆ. ಆದರೆ ಈಗ ಮುಂದುವರಿಸಿಕೊಂಡು ಹೋಗದೆ ಇದ್ದ ಬಹಳ ಹಿಂದಿನ ಕಾಲದ ರೂಢಿಗಳು ಹಾಗೆಯೇ ಇದ್ದವು. ಅವುಗಳನ್ನು ಈಗ ಪುನರುಜ್ಜೀವನಗೊಳಿಸಿದರೆ ಬಹಳ ಕಠಿಣ ರೀತಿಯಲ್ಲಿ ನಿರುತ್ಸಾಹಕ್ಕೊಳಗಾಗುತ್ತವೆ ಮತ್ತು ಬಹಳಷ್ಟು ಸಂದರ್ಭಗಳಲ್ಲಿ ಶಿಕ್ಷೆಗೆ ಒಳಗಾಗುತ್ತವೆ. ಹಾಗೆಯೇ, ಈಗ ವಿರೋಧಕ್ಕೆ ಹಾಗೂ ಅಡೆತಡೆಗೆ ಒಳಗಾಗಿರುವ ಭವಿಷ್ಯತ್ತಿನ ರೂಢಿಗಳು ಇವೆ. – ಭವಿಷ್ಯತ್ತೂ ಕೂಡ, ಅದಕ್ಕೂ ಕಡಿಮೆಯಲ್ಲದ ರೀತಿಯಲ್ಲಿ ಗತಕಾಲ ಜೀವನದಲ್ಲಿ ಹೊಸ ಪ್ರಕಾರಗಳನ್ನು ತಯಾರು ಮಾಡುತ್ತದೆ, ಅವು ಪ್ರಸ್ತುತ ಸಮಯದಲ್ಲಿ ಕಾನೂನಿನ ನಿಂದನೆಯನ್ನು ತಪ್ಪಿಸಿಕೊಳ್ಳಲಾರವು ಎಂದು ನಂಬಲು ನಾನು ಸಿದ್ಧನಿದ್ದೇನೆ. ಬಹಳ ಕಾಲದಿಂದ ಮುಂದುವರಿಸಿಕೊಂಡು ಬಂದಿದ್ದ ರೂಢಿಗಳು, ಅವುಗಳ ಕಾಲದಲ್ಲಿ, ಸಾರ್ಮಭೌಮ ರೀತಿಯಲ್ಲಿ ಉಪಯುಕ್ತವಾಗಿದ್ದವು, ಅಂತಹ ರೂಢಿಗಳಲ್ಲಿ ಬಹು ಪತಿತ್ವ ಹಾಗೂ ಕುಲದೇವತಾ ಪದ್ಧತಿ ಕೂಡ ಇದ್ದವು. ಗತಕಾಲದ ಉಪಯುಕ್ತತೆಯನ್ನು ನಾವು ನಿರ್ಲಕ್ಷಿಸಬಾರದು, ಆದರೆ ವರ್ತಮಾನ ಕಾಲದಲ್ಲಿ ಹಾಗೂ ಭವಿಷ್ಯತ್ತಿನಲ್ಲಿ ಉಪಯುಕ್ತವಾಗುವವುಗಳಿಗೆ ಆದ್ಯತೆ ನೀಡುವುದನ್ನು ಅರಸುತ್ತೇವೆ.

ಸಂಪ್ರದಾಯಸ್ಥರು ಹಾಗೂ ಸುಧಾರಕರು ತಮ್ಮನ್ನು ವಿವರಗಳಲ್ಲಿ ಕಳೆದುಕೊಳ್ಳುತ್ತಾರೆ, ಆದರೆ ತತ್ವಗಳು ವಿವರಗಳನ್ನು ನಿರ್ಧರಿಸುತ್ತವೆ.

ಕಲಿಯುಗ ವಿನಾಶದ ಹಾಗೂ ಪುನರ್ಜನ್ಮದ ಯುಗ, ಇನ್ನುಮುಂದೆ ರಕ್ಷಿಸಲಾಗದ ಹಳೆಯದಕ್ಕೆ ನಿರಾಶೆಯಿಂದ ಅಂಟಿಕೊಳ್ಳುವಂತಿಲ್ಲ. ... ರಕ್ಷಿಸಲಾಗಿದ್ದುದು ಕೇವಲ ತಾತ್ಕಾಲಿಕ ವೇದಿಕೆ, ಅದನ್ನು ನಾವು ಬದಲಾವಣೆಯ ಸಮುದ್ರದ ದಂಡೆಗಳ ಮೇಲೆ ನಿರ್ಮಿಸಿದ್ದೇವೆ, ಅದಕ್ಕೆ ಹೆಚ್ಚು ಸ್ಥಿರವಾದ ವಾಸಸ್ಥಳದ ಆವಶ್ಯಕತೆ ಇದೆ. ಅದು ಕೂಡ ಒಂದು ದಿನ ಸಮುದ್ರದ ತರಂಗಗಳಿಂದ ವಿಪರೀತ ನಾಶಕ್ಕೊಳಗಾಗಿ ಮುರಿದು ಬೀಳಬೇಕು,



ಒಳಗೆಳೆದುಕೊಳ್ಳುವ ನೀರಿನಲ್ಲಿ ಮುಳುಗಿಹೋಗಬೇಕು. ಆ ವಿನಾಶಕ್ಕಾಗಿ ಕಾಲ ಸನ್ನಿಹಿತವಾಗಿದೆಯೆ? ಅದು ಬಂದಿದೆ ಎಂದು ನಮಗನಿಸುತ್ತದೆ. ಆ ನೀರುಗಳ ಭಾರೀ ಸದ್ದನ್ನು ಕೇಳಿರಿ, ಅದು ಆಕ್ರಮಣದ ಸದ್ದಿಗಿಂತ ಹೆಚ್ಚು ಭೀಕರವಾದದ್ದು, ಅದನ್ನು ಕೇಳಿರಿ – ಆ ನಿಧಾನವಾದ, ದುಗುಡಕ್ಕೊಳಗಾದ, ಪಶ್ಚಾತ್ತಾಪ ರಹಿತ ನಿರ್ವೀರ್ಯತೆಯನ್ನು ಗುರುತಿಸಿರಿ, – ಕೊರೆದುಕೊಂಡು ಹೋಗುತ್ತಿರುವ, ಕಿರುಗುಟ್ಟುತ್ತಿರುವ, ಹೊಡೆತಗಳಿಂದ ಅಲುಗಾಡುತ್ತಿರುವ, ಮುರಿದು ಬೀಳುತ್ತಿರುವ, ಮೌನದಿಂದ ಇಲ್ಲವೆ ಎರಚಾಟುತ್ತ ಮುಳುಗುತ್ತಿರುವ, ಒಮ್ಮೆಗೆ ಇಲ್ಲವೆ ಸ್ವಲ್ಪ ಸ್ವಲ್ಪವಾಗಿ ಆ ಹೆದ್ದೆರೆಗಳ ಹುದುಗಿನಲ್ಲಿ ನಮ್ಮ ತೇಪೆಯ ಮೇಲೆ ತೇಪೆ ಹಾಕಿದ, ಹೊಂದಾಣಿಕೆಯಿಲ್ಲದ, ಕುಸಿದು ಬೀಳುತ್ತಿರುವ ವಿನ್ಯಾಸವನ್ನು ಗಮನಿಸಿರಿ. ಹೊಸ ರಚನೆಗಾಗಿ ಕಾಲ ಸನ್ನಿಹಿತವಾಗಿದೆಯೆ? ಸನ್ನಿಹಿತವಾಗಿದೆ ಎಂದು ನಾವು ಹೇಳುತ್ತೇವೆ. ಮನುಕುಲದ ಚಟುವಟಿಕೆ, ಕಾತರತೆ, ಅತ್ತಿತ್ತ ಸಾಗುವ ಅವರಸದ ಚಲನೆ, ತೀವ್ರಗತಿಯ ಶೋಧ, ಅರಸುವಿಕೆ, ಅಗಿಯುವಿಕೆ, ಸ್ಥಾಪಿಸುವಿಕೆ ಇವೆಲ್ಲವನ್ನು ಗಮನಿಸಿರಿ – ದಟ್ಟವಾಗಿ ಮೇಲೆದ್ದು ಬರುತ್ತಿರುವ, ಒಬ್ಬರ ಹಿಂದೆ ಒಬ್ಬರಂತೆ ಹೆಜ್ಜೆ ಇಡುತ್ತಿರುವ ಅವತಾರಗಳನ್ನು, ಶ್ರೇಷ್ಠ ವಿಭೂತಿ ಪುರುಷರನ್ನು ನೋಡಿರಿ. ಇವು ಕುರುಹುಗಳಲ್ಲವೆ, ಮತ್ತು ಅವು ಕಾಳಿಯ ಸತ್ಯಯುಗವನ್ನು ಸ್ಥಾಪಿಸಲು ಶ್ರೇಷ್ಠ ಅವತಾರ ಬರುವುದನ್ನು ನಮಗೆ ಹೇಳುತ್ತಿರುವುದಿಲ್ಲವೆ?

**(12/50–56)** **– ಶ್ರೀ ಅರವಿಂದರು (1912)**

*

## ಸಂಪೂರ್ಣ ಸತ್ಯದತ್ತ ಮರಳಿ ಹೋಗುವುದರ ಆವಶ್ಯಕತೆ

ಪ್ರಾಚೀನ ಕಾಲದ ಹಿಂದುತ್ವ ಜೀವನದಲ್ಲಿ ನೆರವೇರಿಕೆಯನ್ನು ಭಗವಂತನಲ್ಲಿ ಕಂಡುಕೊಳ್ಳುವುದನ್ನು ಗುರಿಯಾಗಿರಿಸಿಕೊಂಡಿತ್ತು. ಆಧುನಿಕ ಹಿಂದುತ್ವ ಜೀವನದಿಂದ ಪಾರಾಗಿ ಭಗವಂತನೆಡೆಗೆ ಸಾಗುವುದನ್ನು ಗುರಿಯಾಗಿರಿಸಿಕೊಂಡಿದೆ. ನಮ್ಮ ಸಮಾಜ ಪರಿಪೂರ್ಣಗೊಳ್ಳುವಂತೆ ಮತ್ತು ದೇಶ ಜೀವಿಸುವಂತೆ ಮಾಡಬೇಕಾದರೆ ನಾವು ಮೊದಲಿನ ಹಾಗೂ ಹೆಚ್ಚು ಸತ್ಯವಾದುದರತ್ತ ಹೊರಳಿ ಹೋಗಬೇಕು. ಜೀವನ ಸನ್ಯಾಸಕ್ಕಾಗಿ ಕಾದುಕೊಂಡಿರುವಂತೆ ನಾವು ಮಾಡಬಾರದು, ಆದರೆ ಸನ್ಯಾಸ ಜೀವನಕ್ಕೆ ಒಂದು ತಯಾರಿ ಸ್ವರೂಪದಲ್ಲಿರಬೇಕು. ಪಟ್ಟಣದಲ್ಲಿರುವ ಭಗವಂತನಿಂದ ಅರಣ್ಯದಲ್ಲಿರುವ ಭಗವಂತನತ್ತ ಓಡಿ ಹೋಗುವುದರ ಬದಲಾಗಿ, ಪ್ರಭು ಲೀಲೆಯಲ್ಲಿ ನಮಗೆ ಕೊಟ್ಟ ಪಾತ್ರಕ್ಕಾಗಿ ನಾವು

ನಮ್ಮ ಆತ್ಮಗಳಲ್ಲಿರುವ ಪರ್ವತ ಸದೃಶ ಏಕಾಂತದಲ್ಲಿ ಮುಳುಗು ಹಾಕಬೇಕು, ಅಲ್ಲಿ ಆ ಪಾತ್ರವನ್ನು ಪೋಷಿಸಿಕೊಂಡು ಬರುವುದಕ್ಕಾಗಿ ಜ್ಞಾನ, ಸಂತೋಷ ಹಾಗೂ ಆಧ್ಯಾತ್ಮಿಕ ಚೈತನ್ಯಗಳನ್ನು ಕಂಡುಕೊಳ್ಳಬೇಕು. ನಮಗೆ ಆ ಬಲ ದೊರೆತರೆ ನಾವು ನಿರ್ಮಾಣ ಮಾಡುವ ಯಾವುದೇ ಸಮಾಜ ಅಮರ ಜೀವನದ ಹುಟ್ಟುಗುಣದಿಂದ ತುಂಬಿಕೊಳ್ಳಬೇಕು ಮತ್ತು ಅನಿವಾರ್ಯವೆನ್ನುವಂತೆ ಪರಿಪೂರ್ಣತೆಯತ್ತ ಚಲಿಸಬೇಕು. ...ಯುರೋಪಿನ ಸಮಾಜ ಇಲ್ಲಿಯವರೆಗೆ ಆಧಾರವಾಗಿ ಇಟ್ಟುಕೊಂಡು ಬಂದಿರುವ ವ್ಯಕ್ತಿಗತ ಸ್ವಾರ್ಥ, ಸಾಮೂಹಿಕ ಸ್ವಾರ್ಥ ಇವುಗಳ ಆ ತತ್ವವನ್ನು ಭವಿಷ್ಯತ್ತು ನಿರಾಕರಿಸುವುದೆಂಬ ಒಂದು ವಿಷಯ ನನಗೆ ಸ್ಪಷ್ಟವಾಗಿ ತೋರಿಬರುತ್ತದೆ. ನವೀಕರಣಗೊಂಡ ನಮ್ಮ ಪದ್ಧತಿ ವ್ಯಕ್ತಿಗತ ಸ್ವಾರ್ಥ ತ್ಯಾಗ ಮತ್ತು ಭ್ರಾತೃತ್ವದ ಸಂಘಟನೆ ಇವುಗಳ ಆಧಾರ ಪಡೆದಿರುತ್ತದೆ – ಆ ಪದ್ಧತಿ ಕ್ರಿಶ್ಚಿಯನ್ ಧರ್ಮ, ಇಸ್ಲಾಮ ಮತ್ತು ಹಿಂದುತ್ವಗಳಿಗೆ ಸಾಮಾನ್ಯವಾಗಿರುವ ತತ್ವಗಳನ್ನು ಹೊಂದಿರುತ್ತದೆ.

**(12/58)** – **ಶ್ರೀ ಅರವಿಂದರು** (1912)

*

## ಜಾತಿಪದ್ಧತಿ ಅವನತಿ ಹೊಂದುವುದನ್ನು ಸರಿಪಡಿಸುವುದು

ಮಾನವ ಸಂಸ್ಥೆಗಳು ಅವನತಿ ಹೊಂದುವುದು, ತಮ್ಮ ಜೀವಸತ್ವವನ್ನು ಕಳೆದುಕೊಳ್ಳುವುದು, ಶಿಥಿಲವಾಗುವುದು ಅವುಗಳ ಸ್ವಭಾವವಾಗಿರುತ್ತದೆ ಮತ್ತು ಶಿಥಿಲವಾಗುವುದರ ಮೊದಲ ಚಿಹ್ನೆ ನಮ್ಯತೆಯನ್ನು ಕಳೆದುಕೊಳ್ಳುವುದು ಮತ್ತು ಅವುಗಳ ಬಗ್ಗೆ ಕಲ್ಪನೆ ಮಾಡಿಕೊಂಡಿದ್ದಾಗಿನ ಸಾರಭೂತ ಮನೋಧರ್ಮವನ್ನು ಮರೆತುಬಿಟ್ಟಿರುವುದಾಗಿದೆ. ಜಾತಿಪದ್ಧತಿ ಅವನತಿ ಹೊಂದಿರುವುದರಲ್ಲಿ ಯಾವ ಸಂಶಯವೂ ಇಲ್ಲ. ಆಧ್ಯಾತ್ಮಿಕ ಗುಣಲಕ್ಷಣಗಳಿಂದ ಜಾತಿಯನ್ನು ನಿರ್ಧರಿಸುವ ಗುಣಲಕ್ಷಣಗಳು ಒಮ್ಮೆ ಅತ್ಯವಶ್ಯವಾಗಿದ್ದವು, ಈಗ ಗೌಣವಾಗಿಬಿಟ್ಟಿವೆ ಮತ್ತು ಮಹತ್ವವಿಲ್ಲದವಾಗಿವೆ ಮತ್ತು ಕೇವಲ ಪ್ರಾಪಂಚಿಕ ವೃತ್ತಿಯನ್ನು, ಹುಟ್ಟನ್ನು ಪರೀಕ್ಷೆಗೊಳಪಡಿಸಿ ಜಾತಿಯನ್ನು ನಿರ್ಧರಿಸಲಾಗುತ್ತದೆ. ಈ ಬದಲಾವಣೆಯ ಮೂಲಕ ಅದು ಹಿಂದುತ್ವದ ಮೂಲಭೂತ ಪ್ರವೃತ್ತಿಯ ವಿರುದ್ಧ ತನ್ನನ್ನಿರಿಸಿಕೊಂಡಿದೆ, ಹಾಗಾಗಿ ಅದರ ಅರ್ಥದ ಹೆಚ್ಚಿನ ಭಾಗವನ್ನು ಕಳೆದುಕೊಂಡಿದೆ. ಆಧ್ಯಾತ್ಮಿಕವಾದುದರ ಮೇಲೆ ಒತ್ತುಕೊಡುವುದು ಮತ್ತು ಪ್ರಾಪಂಚಿಕವಾದದ್ದನ್ನು ಗೌಣವಾಗಿರಿಸುವುದು ಹಿಂದುತ್ವದ ಪ್ರವೃತ್ತಿಯಾಗಿದೆ.



ಜಾತಿಯ ಉದ್ಧಟತನದ ಮನೋವೃತ್ತಿಯು, ಪ್ರತ್ಯೇಕತೆ ಮತ್ತು ಹೆಚ್ಚುಗಾರಿಕೆಗಳಿಂದಾಗಿ ಕರ್ತವ್ಯದ ಮನೋಧರ್ಮದ ಬದಲಾಗಿ, ತನ್ನ ಪ್ರಾಬಲ್ಯ ಮೆರೆಸತೊಡಗಿದೆ. ಮತ್ತು ಈ ಬದಲಾವಣೆ ದೇಶವನ್ನು ದುರ್ಬಲಗೊಳಿಸಿದೆ ಮತ್ತು ಅದು ನಮ್ಮ ಸದ್ಯದ ಸ್ಥಿತಿಗೆ ಕುಗ್ಗಿಸುವುದಕ್ಕೆ ಸಹಾಯಮಾಡಿದೆ. ಈ ದಾರಿಗೆಡಿಸುವಿಕೆಗಳು ಸರಿಯಾಗುವುದನ್ನು ನೋಡಲು ನಾವು ಇಷ್ಟಪಡುತ್ತೇವೆ. ಆಧುನಿಕ ಕಾಲದ ಬದಲಾದ ಪರಿಸ್ಥಿತಿಗಳಲ್ಲಿ ಜಾತಿಯ ಸಂಸ್ಥೆ ಪರಿವರ್ತನೆ ಹೊಂದಬೇಕು ಮತ್ತು ಅದರ ಸಾರಭೂತ ಹಾಗೂ ಶಾಶ್ವತ ಉದ್ದೇಶದ ನೆರವೇರಿಕೆ ಕಂಡುಕೊಳ್ಳಬೇಕು. ಬದಲಾಗುವುದನ್ನು ತಿರಸ್ಕರಿಸಿದರೆ ಅದು ಕೇವಲ ಸಾಮಾಜಿಕ ಅವಶೇಷವಾಗುತ್ತದೆ ಮತ್ತು ಚೂರು ಚೂರಾಗಿ ಹೋಗುತ್ತದೆ. ಅದು ತನ್ನನ್ನು ಪರಿವರ್ತನೆಗೆ ಒಳಪಡಿಸಿದರೆ, ಅದಿನ್ನೂ ನಾಗರಿಕತೆ ನೆರವೇರಿಕೆ ಕಂಡುಕೊಳ್ಳುವುದರಲ್ಲಿ ಹೆಚ್ಚಿನ ಪಾತ್ರವನ್ನು ವಹಿಸಬಹುದು.

**(7/684)** – **ಶ್ರೀ ಅರವಿಂದರು** (Sept. 21, 1907)

*

ರಕ್ಷಣೋಪಾಯಗಳೊಂದಿಗೆ ಜಾತಿಯು ಸಮಾಜದ ಸಂಘಟನೆಗೆ ಮತ್ತು ಸಂರಕ್ಷಣೆಗೆ ಪ್ರಶಂಸನೀಯ ಸಾಧನ, ಆದರೆ ಅದು ರಾಜಕೀಯ ಅರ್ಥ ಪಡೆದಿಲ್ಲ ಮತ್ತು ಅಂತಹ ಅರ್ಥ ಪಡೆಯುವುದಕ್ಕೆ ಅನುವುಮಾಡಿಕೊಡಬಾರದು.

**(7/779)** – **ಶ್ರೀ ಅರವಿಂದರು**

*

## ಭಾರತೀಯ ಸಮಾಜವಾದದ ನೆರವೇರಿಕೆ

ಸಮಾಜವಾದ ಯುರೋಪಿಯನ್ ವಿಚಾರವಲ್ಲ, ಅದು ಸಾರದಲ್ಲಿ ಏಶಿಯಾ ಖಂಡಕ್ಕೆ, ವಿಶೇಷವಾಗಿ ಭಾರತಕ್ಕೆ ಸೇರಿದ್ದಾಗಿದೆ. ಸಮಾಜದ ಆರ್ಥಿಕ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಪ್ರಾಚೀನ ಕಾಲದ ಏಶಿಯಾ ಖಂಡದ ಪ್ರಯತ್ನವೇ ಸಾರದಲ್ಲಿ ಯುರೋಪಿನ ಸಮಾಜವಾದವಾಗಿದೆ, ಆ ಪರಿಹಾರ ಮನುಷ್ಯನಿಗೆ ವಿರಾಮ ಮತ್ತು ಶಾಂತಿ ಇವುಗಳನ್ನು ಕೊಡುವುದರಿಂದ ಅವನು ಕ್ಷೋಭೆಗೊಳಗಾಗದೆ ತನ್ನ ಉಚ್ಚತರ ಆತ್ಮವನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಾಧ್ಯವಾಗುವುದು. ಸಮಾಜವಾದವಿಲ್ಲದೆ ಪ್ರಜಾಪ್ರಭುತ್ವ ತನ್ನ ನೆರವೇರಿಕೆಯನ್ನು ಎಂದೂ ಕಂಡುಕೊಳ್ಳದ ಒಂದು ಪ್ರವೃತ್ತಿಯಾಗಿ ಉಳಿದುಕೊಳ್ಳುತ್ತದೆ, ಅದು ಜನ

ಸಮೂಹದ ಮೇಲೆ ಕುಲೀನ ಸತ್ತೆಗೆ ಸೇರಿದ, ಧನಿಕ ವರ್ಗದ ಕೆಲವರ ಆಳಿಕೆಯಾಗಿ ಉಳಿದುಕೊಳ್ಳುತ್ತದೆ, ಅವರಿಗೆ ಜನ ಸಮೂಹ ಒಪ್ಪಿಗೆ ಇಲ್ಲವೆ ಮತಗಳನ್ನು ನೀಡಿರಬಹುದು ಇಲ್ಲವೆ ಕುಶಲಕರ್ಮಿಗಳ ವರ್ಗಗಳು ಇತರರ ಮೇಲೆ ನಡೆಸುವ ನಿರಂಕುಶಾಧಿಕಾರದ ಆಳಿಕೆಯಾಗಿರಬಹುದು. ಸಮಾಜವಾದ–ವನ್ನಾಧರಿಸಿದ ಪ್ರಜಾಪ್ರಭುತ್ವ ಮಾತ್ರ ನಿಜವಾದ ಪ್ರಜಾಪ್ರಭುತ್ವ, ಏಕೆಂದರೆ ಅದಿಲ್ಲದೆ ನಾವು ಸಮಾನತೆ ಪಡೆಯಲಾರೆವು, ಕಾರ್ಯಗಳಲ್ಲಿ ಸಾಮರಸ್ಯದಿಂದ ಕೂಡಿದ ವಿತರಣೆ ಇರಲಾರದು, ಜನ ಸಮೂಹದ ಪ್ರತಿಯೊಂದು ಭಾಗ ಎಲ್ಲರ ಒಳ್ಳೆಯದಕ್ಕಾಗಿ ಇರಬೇಕು, ತನ್ನದೇ ಪ್ರತ್ಯೇಕ ಆಸಕ್ತಿಗಳಿಗಾಗಿ ಹೆಣಗುತ್ತಿರಬಾರದು, ಇದು ಇಡೀ ಮಾನವ ಕುಲಕ್ಕೆ ತನ್ನ ಅತ್ಯುತ್ತಮ ಚೈತನ್ಯಗಳನ್ನು ತನ್ನದೇ ಉಚ್ಚತರ ಅಭಿವೃದ್ಧಿಗೆ ಅವಶ್ಯವಾದ ಪರಿಸ್ಥಿತಿಗಳನ್ನು ಉಂಟು ಮಾಡಿಕೊಡುವುದು. ಆ ಪರಿಸ್ಥಿತಿಗಳನ್ನು ಸಿದ್ಧಿಸಿಕೊಳ್ಳುವುದು ಹಿಂದೂ ನಾಗರಿಕತೆಯ ಗುರಿಯಾಗಿದೆ ಮತ್ತು ಜಾತಿಪದ್ಧತಿಯ ಮೂಲ ಉದ್ದೇಶ ಕೂಡ ಆಗಿದೆ. ಹಿಂದುತ್ವ ನೆರವೇರಿಕೆ ಕಂಡುಕೊಳ್ಳುವುದು ಮಾನವ ನಾಗರಿಕತೆಯ ಅತ್ಯುಚ್ಚ ಪ್ರವೃತ್ತಿಗಳು ನೆರವೇರಿಕೆ ಕಂಡುಕೊಂಡಂತೆ, ಮತ್ತು ಅದು ತನ್ನ ಹರವಿನಲ್ಲಿ ಆಧುನಿಕ ಜೀವನದ ಬದುಕುವ ಕ್ರಿಯೆಗೆ ಅತ್ಯವಶ್ಯವಾದ ಪ್ರಚೋದನೆಗಳನ್ನು ಒಳಗೊಂಡಿರುತ್ತದೆ. ಅದು ಸಮಾಜವಾದ ಹಾಗೂ ಪ್ರಜಾಪ್ರಭುತ್ವಗಳನ್ನು ಶುದ್ಧೀಕರಣ ಕ್ರಿಯೆಗೆ ಒಳಪಡಿಸುತ್ತ, ಸಾಧನ ಸ್ವರೂಪದ ಆರ್ಥಿಕವಾಗಿ ಸರಿಹೊಂದಿಸುವಿಕೆಗಳ ಮೇಲೆ ಅತಿಯಾಗಿ ಒತ್ತು ನೀಡದೆ, ಒಳಗೊಂಡಿರುತ್ತದೆ. ಅದು ಸಮಾಜವಾದ ಮತ್ತು ಪ್ರಜಾಪ್ರಭುತ್ವಗಳಿಗೆ ತಮ್ಮ ದೃಷ್ಟಿ ಹೆಚ್ಚು ಸತತವಾಗಿ, ಸ್ಪಷ್ಟವಾಗಿ ಮಾನವತೆಯ ಗುರಿಯಾದ ನೈತಿಕತೆ, ಬೌದ್ಧಿಕತೆ, ಆಧ್ಯಾತ್ಮಿಕತೆ ಇವುಗಳ ಪರಿಪೂರ್ಣತೆಯ ಮೇಲೆ ನೆಟ್ಟಿರುವುದನ್ನು ಕಲಿಸಿಕೊಡುತ್ತದೆ.

**(7/684–85)** **– ಶ್ರೀ ಅರವಿಂದರು**

ಸಿದ್ಧಿಸಿಕೊಂಡ ವೇದಾಂತ ಮಾತ್ರ ಸಮುದಾಯ ಸ್ವಾಮ್ಯವಾದಿ (ಕಮ್ಯೂನಿಷ್ಟ) ಸಮುದಾಯಕ್ಕೆ ವ್ಯಾವಹಾರಿಕ ಆಧಾರವಾಗುತ್ತದೆ. ಅದು ಕ್ರಿಶ್ಚಿಯನ್‌ರು, ಮುಸ್ಲಿಮರು ಹಾಗೂ ಪೌರಾಣಿಕ ಹಿಂದುತ್ವ ಕನಸುಕಂಡ ಸಾಧು–ಸಂತರ ರಾಜ್ಯವಾಗಿರುತ್ತದೆ.

**(12/465)** **– ಶ್ರೀ ಅರವಿಂದರು**

*



## ಭಾರತದ ವೀರೋಚಿತ ಮನೋಧರ್ಮವನ್ನು ಜಾಗ್ರತಗೊಳಿಸುವುದು

### ಭಾರತ ಮಾತಾ

ಭಾರತ ಈ ಭೂಮಿಯ ಮಣ್ಣು, ನದಿಗಳು ಮತ್ತು ಪರ್ವತಗಳು ಇವುಗಳಿಂದ ಕೂಡಿದ್ದಷ್ಟೇ ಅಲ್ಲ, ಇಲ್ಲವೆ ಇಲ್ಲಿ ವಾಸಿಸುವವರ ಸಾಮೂಹಿಕ ಹೆಸರೂ ಅಲ್ಲ. ಭಾರತ ಜೀವಂತವಿರುವ ಸತ್ತೆ. ಶಿವ ಪರಮಾತ್ಮನಷ್ಟೇ ಸಜೀವವಾಗಿದೆ ಎಂದು ಹೇಳಬಹುದು. ಶಿವ ದೇವನಾಗಿರುವ ಹಾಗೆ ಭಾರತ ದೇವಿಯಾಗಿದೆ, ಆ ದೇವಿ ಇಷ್ಟಪಟ್ಟರೆ ಮಾನವ ರೂಪದಲ್ಲಿ ಪ್ರಕಟವಾಗಬಲ್ಲಳು.

**(13/380)** **– ಶ್ರೀಮಾತೆ**

ಪ್ರತಿಯೊಬ್ಬ ವ್ಯಕ್ತಿಯಲ್ಲಿ ಅವನ ನಿಜವಾದ ಆತ್ಮ ಚೈತ್ಯಸತ್ತೆ ಇರುವ ಹಾಗೆ, ಅದು ಹೆಚ್ಚು ಕಡಿಮೆ ಬಾಹ್ಯದಲ್ಲಿ ಅವನ ಅದೃಷ್ಟದ ಮೇಲೆ ಆಳಿಕೆ ನಡೆಸುವ ಹಾಗೆ ಪ್ರತಿಯೊಂದು ದೇಶಕ್ಕೆ ಒಂದು ಚೈತ್ಯಸತ್ತೆಯಿರುತ್ತದೆ, ಅದು ಅದರ ನಿಜವಾದ ಸತ್ತೆ, ಪರದೆಯ ಹಿಂದೆ ಇದ್ದುಕೊಂಡು ಅದರ ಅದೃಷ್ಟಕ್ಕೆ ಎರಕ ನೀಡುತ್ತದೆ, ಅದು ದೇಶದ ಆತ್ಮ, ರಾಷ್ಟ್ರೀಯ ಪ್ರತಿಭೆ, ಜನರ ಅಮೂರ್ತ ಚೇತನ, ರಾಷ್ಟ್ರದ ಅಭೀಪ್ಸೆಯ ಕೇಂದ್ರ, ರಾಷ್ಟ್ರದ ಜೀವನದಲ್ಲಿ ಸುಂದರ, ಉದಾತ್ತ, ಶ್ರೇಷ್ಠ ಹಾಗೂ ಉದಾರವಾದ ಎಲ್ಲದರ ಉಗಮಸ್ಥಾನ. ನಿಜವಾದ ದೇಶಭಕ್ತರು ಅದರ ಸಾನ್ನಿಧ್ಯದ ಬಗ್ಗೆ ಸ್ಪರ್ಶವೇದ್ಯ ನೈಜತೆಯ ಭಾವನೆ ತಂದುಕೊಳ್ಳುತ್ತಾರೆ. ಮತ್ತು ಅದನ್ನು ಪ್ರೀತಿಸುವವರೆಲ್ಲರೂ 'ಭಾರತಮಾತೆ' ಎಂದು ಕರೆಯುತ್ತಾರೆ, ಆ ದೇವಿಗೆ ತಮ್ಮ ದೇಶದ ಯೋಗಕ್ಷೇಮಕ್ಕಾಗಿ ದಿನ ನಿತ್ಯ ಪ್ರಾರ್ಥನೆ ಸಲ್ಲಿಸುತ್ತಾರೆ. ದೇಶದ ನಿಜವಾದ ಆದರ್ಶವನ್ನು, ಜಗತ್ತಿನಲ್ಲಿ ಅದರ ನಿಜವಾದ ಮಹಿಹವನ್ನು ಸಂಕೇತಿಸುವವಳು ಹಾಗೂ ಮೈದಾಳುವವಳು ಆ ದೇವಿಯೇ ಆಗಿದ್ದಾಳೆ.

"ಮಾತೆ ದುರ್ಗಾ, ಸಿಂಹವಾಹಿನಿಯೆ, ಶಕ್ತಿದಾಯಿನಿಯೆ, ನಿನ್ನ ದೈವೀ ಸಾಮರ್ಥ್ಯದ ಭಾಗಗಳಿಂದ ಜನಿಸಿಬಂದ ನಾವು, ಭಾರತದ ತರುಣರಾದ ನಾವು ನಿನ್ನ ಈ ದೇವಾಲಯದಲ್ಲಿ ಕುಳಿತಿದ್ದೇವೆ. ಓ ಮಾತೆ, ಕೇಳು, ಪೃಥ್ವಿಯ ಮೇಲೆ ಅವತರಣ ಮಾಡಿ ಬಾ. ಭಾರತ ಭೂಮಿಯಲ್ಲಿ ನಿನ್ನನ್ನು ಪ್ರಕಟಗೊಳಿಸು."

"ದುರ್ಗಾಮಾತೆಯೆ, ಶಕ್ತಿ, ಪ್ರೇಮ ಹಾಗೂ ಜ್ಞಾನಗಳನ್ನು ನೀಡುವವಳೆ, ನಿನ್ನ ಮಹತ್ತರ ಬಲದಲ್ಲಿ ನೀನು ಭಯಾನಕಳಾಗಿರುವಿ, ಮಾತೆ ನೀನು ಸುಂದರಳೂ, ಭೀಕರಳೂ ಆಗಿರುವಿ. ಜೀವನದ ಹಾಗೂ ಭಾರತದ ಸಮರದಲ್ಲಿ ನಿನ್ನಿಂದ ನಿಯೋಜಿತರಾದ ಯೋಧರು ನಾವು, ನಮ್ಮ ಹೃದಯಕ್ಕೆ, ಮನಸ್ಸಿಗೆ ದೈತ್ಯ

ಚೈತನ್ಯವನ್ನು ಕೊಡು, ನಮ್ಮ ಆತ್ಮಕ್ಕೆ ಹಾಗೂ ಬುದ್ಧಿಮತ್ತೆಗೆ ದೇವನ ಗುಣಲಕ್ಷಣವನ್ನು ಹಾಗೂ ಜ್ಞಾನವನ್ನೂ ನೀಡು."

"ದುರ್ಗಾಮಾತೆಯೆ, ಜಗತ್ತಿನಲ್ಲಿ ಅತ್ಯಂತ ಉದಾರ ಮನುಕುಲವಿದ್ದ ಭಾರತ ದೇಶ ಅಂಧಕಾರದಲ್ಲಿ ಮುಳುಗಿ ಬಿದ್ದುಕೊಂಡಿದೆ. ಮಾತೆ, ನೀನು ಪೂರ್ವ ದಿಕ್ಕಿನ ಕ್ಷಿತಿಜದ ಮೇಲೆ ಎದ್ದು ಬರುತ್ತಿರುವಿ, ಅಂಧಕಾರವನ್ನು ಚದುರಿಸುತ್ತ ಅರುಣೋದಯ ನಿನ್ನ ದೈವೀ ಅಂಗಗಳ ಹೊಳಪಿನಿಂದ ಬರುತ್ತದೆ. ನಿನ್ನ ದೈವೀ ಪ್ರಕಾಶವನ್ನು ಹರಡಿಬಿಡು, ಅಂಧಕಾರವನ್ನು ನಾಶಮಾಡು."

"ದುರ್ಗಾಮಾತೆಯೆ, ನಾವು ನಿನ್ನ ಮಕ್ಕಳು, ನಿನ್ನ ದೈವೀಕೃಪೆ ಹಾಗೂ ಪ್ರಭಾವಗಳ ಮೂಲಕ ಶ್ರೇಷ್ಠ ಕಾರ್ಯಕ್ಕೆ, ಶ್ರೇಷ್ಠ ದೈವೀ ಆದರ್ಶಕ್ಕೆ ಯೋಗ್ಯರಾಗುತ್ತೇವೆ, ನಮ್ಮ ಅಲ್ಪತನವನ್ನು, ಸ್ವಾರ್ಥವನ್ನು ಮತ್ತು ಭಯವನ್ನು ನಾಶಮಾಡು."

"ದುರ್ಗಾಮಾತೆಯೆ, ನೀನು ಕಾಳೀದೇವಿ, ಕೈಯಲ್ಲಿ ಖಡ್ಗವನ್ನು ಹಿಡಿದಿರುವಿ, ಅಸುರನನ್ನು ಸಂಹರಿಸುತ್ತೀ, ದೇವಿಯೆ, ನಮ್ಮೊಳಗೆ ವಾಸಿಸುತ್ತಿರುವ ಶತ್ರುಗಳನ್ನು ಕರುಣಾರಹಿತ ಕೂಗಿನೊಂದಿಗೆ ಕೊಂದುಹಾಕುವಿಯಲ್ಲವೆ, ಯಾರೂ ಅಲ್ಲಿ ಜೀವಸಹಿತ ಉಳಿದುಕೊಳ್ಳದಂತಾಗಲಿ, ನಾವು ಪರಿಶುದ್ಧರೂ, ಕಳಂಕರಹಿತರೂ ಆಗುವಂತಾಗಲಿ, ಇದು ನಮ್ಮ ಪ್ರಾರ್ಥನೆ, ಓ ಮಾತೆ, ನಿನ್ನನ್ನು ಪ್ರಕಟಪಡಿಸು."

"ದುರ್ಗಾಮಾತೆಯೆ, ಭಾರತ ಸ್ವಾರ್ಥಪರತೆಯಲ್ಲಿ, ಭಯಭೀತವಾಗಿ ಮತ್ತು ಆಲಸ್ಯಕ್ಕೊಳಗಾಗಿ ಕೆಳಮಟ್ಟದಲ್ಲಿ ಬಿದ್ದುಕೊಂಡಿದೆ. ನಮ್ಮನ್ನು ಶ್ರೇಷ್ಠರನ್ನಾಗಿ ಮಾಡು, ನಮ್ಮ ಪ್ರಯತ್ನಗಳು ಶ್ರೇಷ್ಠವಾಗುವಂತೆ, ನಮ್ಮ ಹೃದಯಗಳು ವಿಶಾಲವಾಗುವಂತೆ, ನಮ್ಮ ನಿರ್ಧಾರಕ್ಕೆ ನಾವು ನಿಜವಾಗಿರುವಂತೆ ಮಾಡು. ಇನ್ನು ಮುಂದೆ ನಾವು ಚಿಕ್ಕದಾದುದನ್ನು, ಚೈತನ್ಯರಹಿತತೆಯನ್ನು, ಆಲಸ್ಯಕ್ಕೊಳಗಾಗುವುದನ್ನು ಬಯಸದಂತಾಗಲಿ."

ದುರ್ಗಾಮಾತೆಯೆ, ಯೋಗದ ಸಾಮರ್ಥ್ಯವನ್ನು ವಿಸ್ತರಿಸು, ನಾವು ಆರ್ಯರ ಸಂತಾನ, ಕಳೆದುಹೋದ ಬೋಧನೆ, ಚಾರಿತ್ರ್ಯ, ಬೌದ್ಧಿಕ ಬಲ, ನಂಬಿಕೆ ಮತ್ತು ಭಕ್ತಿ, ವೈರಾಗ್ಯದ ಶಕ್ತಿ, ನಿರಾಡಂಬರತೆಯ, ನಿಜವಾದ ಜ್ಞಾನದ ಸಾಮರ್ಥ್ಯ ಇವೆಲ್ಲವನ್ನು ನಮ್ಮಲ್ಲಿ ಅಭಿವೃದ್ಧಿಪಡಿಸು, ಅದೆಲ್ಲವನ್ನು ಜಗತ್ತಿನ ಮೇಲೆ ದಯಪಾಲಿಸು. ಮಾನವ ಕುಲಕ್ಕೆ ಸಹಾಯ ಮಾಡಲು ಓ ಜಗನ್ಮಾತೆಯೆ, ನಿನ್ನನ್ನು ತೋರಿಸು, ದುಷ್ಟವಾದ ಎಲ್ಲವನ್ನೂ ನಿವಾರಿಸು.



"ದುರ್ಗಾಮಾತೆಯೆ, ಅಂತರಂಗದೊಳಗಿರುವ ವೈರಿಯನ್ನು ಕೊಂದುಹಾಕು, ಎಲ್ಲ ಅಡೆತಡೆಗಳನ್ನು ಎಲ್ಲ ಕಡೆಗೂ ಬೇರು ಸಹಿತ ಕಿತ್ತುಹಾಕು. ಉದಾತ್ತ, ವೀರ್ಯವತ್ತಾದ, ಬಲಿಷ್ಠ ಭಾರತೀಯ ಮನುಕುಲ ಪ್ರೇಮ ಮತ್ತು ಏಕತೆ, ಸತ್ಯ ಹಾಗೂ ಬಲ, ಕಲೆ ಹಾಗೂ ಸಾಹಿತ್ಯ, ಶಕ್ತಿ ಹಾಗೂ ಜ್ಞಾನ ಇವೆಲ್ಲವುಗಳಲ್ಲಿ ಪರಮೋಚ್ಚವಾದದ್ದು, ಅದು ತನ್ನ ಪವಿತ್ರ ಅರಣ್ಯ ಪ್ರದೇಶಗಳಲ್ಲಿ, ಫಲವತ್ತಾದ ಹೊಲಗಳಲ್ಲಿ, ಆಕಾಶದೆತ್ತರದ ಬೆಟ್ಟಗಳಲ್ಲಿ, ಶುದ್ಧ ಪ್ರವಾಹವಿರುವ ನದಿಗಳ ದಂಡೆಗಳಲ್ಲಿ ಎಲ್ಲ ಕಾಲಕ್ಕೂ ವಾಸಿಸುವಂತಾಗಲಿ. ದುರ್ಗಾಮಾತೆಯ ಅಡಿದಾವರೆಗಳಲ್ಲಿ ಇದು ನಮ್ಮ ಪ್ರಾರ್ಥನೆ, ಮಾತೆಯೆ ನಿನ್ನನ್ನು ಪ್ರಕಟಿಸು."

ದುರ್ಗಾಮಾತೆಯೆ, ನಿನ್ನ ಯೌಗಿಕ ಬಲದಲ್ಲಿ ನಮ್ಮ ದೇಹಗಳಲ್ಲಿ ಪ್ರವೇಶಿಸು. ನಾವು ನಿನ್ನ ಉಪಕರಣಗಳಾಗುತ್ತೇವೆ, ದುಷ್ಟವಾದದ್ದನ್ನೆಲ್ಲ ಸಂಹಾರ ಮಾಡುವ ಖಡ್ಗವಾಗುತ್ತೇವೆ, ಅಜ್ಞಾನವನ್ನು ನಿವಾರಿಸುವ ದೀಪವಾಗುತ್ತೇವೆ. ಓ ಮಾತೆಯೆ, ನಿನ್ನ ತರುಣ ಮಕ್ಕಳ ಈ ಹಾತೊರೆತವನ್ನು ನೆರವೇರಿಸಿ ಕೊಡು. ಪ್ರಭುವಾಗು, ಉಪಕರಣವನ್ನು ಚಲಾಯಿಸು, ಖಡ್ಗವನ್ನು ಹಿಡಿದೆತ್ತಿಕೊಂಡು ದುಷ್ಟವಾದದ್ದನ್ನು ಸಂಹಾರಮಾಡು, ದೀಪವನ್ನು ಮೇಲೆತ್ತಿ ಹಿಡಿದು ಜ್ಞಾನದ ಪ್ರಕಾಶವನ್ನು ಹರಡು, ನಿನ್ನನ್ನು ಪ್ರಕಟಗೊಳಿಸು.*

**(12/42–44)** – **ಶ್ರೀಮಾತೆ** (Aug. 1952)

*

## ಭಾರತದ ಆತ್ಮ ಏಕೈಕವಾಗಿದೆ

ಭಾರತದ ಆತ್ಮ ಮಾತ್ರ ಆ ದೇಶವನ್ನು ಏಕಗೊಳಿಸಬಲ್ಲದು.

ಭಾರತದ ಪ್ರಾಂತಗಳು ಗುಣಲಕ್ಷಣದಲ್ಲಿ, ಪ್ರವೃತ್ತಿಗಳಲ್ಲಿ ಸಂಸ್ಕೃತಿ ಮತ್ತು ಭಾಷೆಗಳಲ್ಲಿ ಭಿನ್ನವಾಗಿರುವಂತೆ ಬಾಹ್ಯದಲ್ಲಿ ಕಂಡುಬರುತ್ತವೆ ಮತ್ತು ಅವುಗಳನ್ನು ಕೃತ್ರಿಮವಾಗಿ ಏಕತ್ರಗೊಳಿಸುವುದು ಅನರ್ಥಕಾರಕ ಪರಿಣಾಮಗಳನ್ನುಂಟು ಮಾಡಬಹುದು.

ಆದರೆ ಭಾರತದ ಆತ್ಮ ಏಕೈಕವಾಗಿದೆ, ಆಧ್ಯಾತ್ಮಿಕ ಸತ್ಯ, ಸೃಷ್ಟಿಯ ಸಾರಭೂತ ಏಕತೆ ಮತ್ತು ಜೀವನದ ದೈವೀಮೂಲ ಇವೆಲ್ಲವುಗಳತ್ತ ಅದರ ಅಭೀಪ್ಸೆ

* ಶ್ರೀ ಅರವಿಂದರು ಬಂಗಾಲಿ ಭಾಷೆಯಲ್ಲಿ ರಚಿಸಿದ್ದ ದುರ್ಗಾ ಸ್ತೋತ್ರವನ್ನು ನಲಿನಿಕಾಂತ ಗುಪ್ತ ಇಂಗ್ಲೀಷ ಭಾಷೆಯಲ್ಲಿ ಅನುವಾದ ಮಾಡಿದ್ದರು.

ಗಾಢವಾಗಿದೆ ಮತ್ತು ಈ ಅಭೀಪ್ಸೆಯೊಂದಿಗೆ ಏಕವಾಗುವುದರ ಮೂಲಕ ಇಡೀ ದೇಶ ಏಕತೆಯನ್ನು ಮರಳಿ ಪಡೆಯಬಹುದು, ಉಚ್ಚತರ ಮನಸ್ಸಿದ್ದವರಿಗೆ ಆ ಏಕತೆ ಎಂದೂ ನಿಂತು ಹೋಗಿಲ್ಲ.

**(13/368)** – **ಶ್ರೀಮಾತೆ**

**ಪ್ರಶ್ನೆ :** *ನಿಮ್ಮ ಒಂದು ಸಂದೇಶದಲ್ಲಿ ಹೇಳಿದ್ದು ಹೀಗಿದೆ: "ಭಾರತಕ್ಕೆ ಒಂದು ಅತಿ ಮುಖ್ಯವಾದ ಸಮಸ್ಯೆ ಎಂದರೆ ಅದು ತನ್ನ ಆತ್ಮವನ್ನು ಕಂಡುಕೊಂಡು ಅದನ್ನು ಪ್ರಕಟಿಸಬೇಕಾಗಿದೆ."*

*ಭಾರತ ತನ್ನ ಆತ್ಮವನ್ನು ಕಂಡುಕೊಳ್ಳುವುದು ಹೇಗೆ?*

**ಶ್ರೀಮಾತೆ :** ನಿನ್ನ ಚೈತ್ಯಸತ್ತೆಯ ಬಗ್ಗೆ ಅರಿವನ್ನು ತಂದುಕೋ. ನಿನ್ನ ಚೈತ್ಯಸತ್ತೆ ಗಾಢವಾಗಿ ಭಾರತದ ಆತ್ಮದಲ್ಲಿ ಆಸಕ್ತಿ ತಾಳಲಿ ಮತ್ತು ಅದಕ್ಕಾಗಿ ಅಭೀಪ್ಸೆ ಪಡಲಿ. ಸೇವೆ ಸಲ್ಲಿಸುವ ಮನೋಧರ್ಮದೊಂದಿಗೆ ನೀನು ನಿಷ್ಕಪಟನಾಗಿದ್ದರೆ ಯಶಸ್ವಿಯಾಗುವಿ.

**(13/378)** – **ಶ್ರೀಮಾತೆ** (June 15, 1970)

*

## ಸಂಸ್ಕೃತಿಯ ಆಕ್ರಮಣಕಾರಿ ಆದರೆ ಯೋಚನಾರಹಿತವಲ್ಲದ ಪ್ರತಿಭಟನೆ

ಪ್ರತಿಭಟನೆಯ ಆವಶ್ಯಕತೆ ಉಂಟಾಗುತ್ತದೆ, ಅದು ಬಲವತ್ತರವಾದ, ಆಕ್ರಮಣಕಾರಿ ಪ್ರತಿಭಟನೆ ಆಗಿದ್ದಾಗ ಆಧುನಿಕ ಕಾಲದ ಹೋರಾಟದಲ್ಲಿ ಪರಿಣಾಮಕಾರಿಯಾಗಬಹುದು. ಆದರೆ ಇಲ್ಲಿ ನಮ್ಮನ್ನು ವಿರುದ್ಧವಾದ ರೀತಿಯಲ್ಲಿ ಮನಸ್ಸಿನ ತಿರುವು ಇರುವ ಮತ್ತು ಅದರ ಸುಸ್ಪಷ್ಟವಾದ, ಅಡೆತಡೆ ಉಂಟುಮಾಡುವ ಮನೋಭಾವದೊಂದಿಗೆ ನಮ್ಮನ್ನು ಬೆಳೆಸಲಾಗಿದೆ ಎಂಬುದನ್ನು ಕಂಡುಕೊಳ್ಳುತ್ತೇವೆ. ಏಕೆಂದರೆ ನಿಷ್ಕ್ರಿಯ ಪ್ರತಿಭಟನೆಯನ್ನು ಇಷ್ಟಪಡುವ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮತ್ತು ಯಾವ ಬಗೆಯ ಆಕ್ರಮಣವನ್ನು ಅದರಲ್ಲಿ ಇರಿಸುತ್ತಾರೋ ಅದು ಅಸಭ್ಯವಾದ, ಯೋಚನಾರಹಿತವಾದ ಸಾಂಸ್ಕೃತಿಕ ಅಂಧಾಭಿಮಾನದ್ದಾಗಿರುತ್ತದೆ, ಅವರ ಪ್ರಕಾರ ನಮ್ಮಲ್ಲಿದ್ದುದೆಲ್ಲ ನಮಗೆ ಒಳ್ಳೆಯದಾಗಿದೆ ಏಕೆಂದರೆ ಅದು ಭಾರತೀಯವಾದದ್ದಾಗಿದೆ ಇಲ್ಲವೆ ಭಾರತದಲ್ಲಿ ಇದ್ದುದೆಲ್ಲ ಅತಿ ಒಳ್ಳೆಯದು, ಏಕೆಂದರೆ ಅದು ಋಷಿಗಳ ಸೃಷ್ಟಿಯಾಗಿದೆ. ನಂತರದ ಎಲ್ಲ ಅಂದಗೆಟ್ಟ ಮತ್ತು



ಅಸ್ತವ್ಯಸ್ತವಾದ ಬೆಳವಣಿಗೆಯನ್ನು, ದುರುಪಯೋಗ ಮಾಡಿದ, ತಪ್ಪು ರೀತಿಯಲ್ಲಿ ಅನ್ವಯ ಮಾಡಿದ ಮತ್ತು ಬಹಳಷ್ಟುಸಲ ನಮ್ಮ ಸಂಸ್ಕೃತಿಯನ್ನು ನಕಲಿಯಾಗುವಂತೆ ನಿರ್ಮಾಣ ಮಾಡಿದವರೆಲ್ಲರನ್ನು ಬಿಟ್ಟುಕೊಡಲಾಗಿದೆ ಎಂಬಂತಿದೆ. ಇಲ್ಲಿರುವ ಪ್ರಶ್ನೆಯೇನೆಂದರೆ ನಿಷ್ಕ್ರಿಯ ಪ್ರತಿಭಟನೆಗೆ ಪರಿಣಾಮಕಾರಿ ಮೌಲ್ಯವಿದೆಯೆ ಎಂಬುದು. ಅದಕ್ಕೆ ಯಾವ ಮೌಲ್ಯವೂ ಇಲ್ಲ ಎಂದು ನನಗನಿಸುತ್ತದೆ, ಏಕೆಂದರೆ ಅದು ವಿಷಯಗಳೊಂದಿಗೆ ಹೊಂದಾಣಿಕೆಯಲ್ಲಿಲ್ಲ ಮತ್ತು ಅದು ವಿಫಲಗೊಳ್ಳುವುದು ವಿಧಿ ಲಿಖಿತ ಎಂಬಂತಿದೆ. ಅದು ಹಟಮಾರಿತನದಿಂದ ನಿಶ್ಚಲವಾಗಿ ಕುಳಿತುಕೊಳ್ಳಲು ಪ್ರಯತ್ನ ಮಾಡುವ ರೀತಿಯದಾಗಿದೆ, ಅದು ಹಾಗಿರುವಾಗ ಜಗತ್ತಿನ ದೈವೀಶಕ್ತಿಯಷ್ಟೇ ಅಲ್ಲ ಭಾರತದ ದೈವೀಶಕ್ತಿಯೂ ಕೂಡ ತನ್ನ ಮಾರ್ಗದಲ್ಲಿ ತೀವ್ರಗತಿಯಿಂದ ಸಾಗುತ್ತಿದೆ. ಅದು ನಮ್ಮ ಹಾಳು ಮಾಡುವ ಹಾಗೂ ಅಸಮರ್ಥ ಕೈಗಳಲ್ಲಿ ಬೆಳೆದಿರುವುದರಿಂದ ಕೊನೆಯ ಪೈಸೆಯವರೆಗೆ ಗತಕಾಲದ ಸಂಸ್ಕೃತಿಯ ಬಂಡವಾಳದ ಮೇಲೆ ಮಾತ್ರ ಜೀವಿಸುವ, ಕೊರತೆ ನೀಗಿಸುವ ನಿರ್ಧಾರವಾಗಿದೆ. ಆದರೆ ನಮ್ಮ ಬಂಡವಾಳವನ್ನು ಹೊಸ ಲಾಭಗಳಿಗೆ ಉಪಯೋಗಿಸದೆ ಕೇವಲ ಅದರ ಮೇಲೆ ಜೀವಿಸುವುದು ದಿವಾಳಿಯಾಗುವುದರಲ್ಲಿ, ದಾರಿದ್ರ್ಯದಲ್ಲಿ ಮುಕ್ತಾಯಗೊಳ್ಳುವುದಾಗಿದೆ. ಗತಕಾಲದ್ದನ್ನು ಚಲಾವಣೆಯಲ್ಲಿರುವಂತೆ, ಖರ್ಚು ಮಾಡುವುದಕ್ಕಾಗಿ ಚಾಲನೆಯಲ್ಲಿರುವ ಬಂಡವಾಳವನ್ನು ಭವಿಷ್ಯತ್ತಿನ ಹೆಚ್ಚಿನ ಪ್ರಮಾಣದ ಲಾಭಕ್ಕಾಗಿ, ಸಂವೇದನೆಗಾಗಿ, ಅಭಿವೃದ್ಧಿಗಾಗಿ ಉಪಯೋಗಿಸಬೇಕು, ಆದರೆ ಗಳಿಸುವುದಕ್ಕಾಗಿ (ಬಂಡವಾಳವನ್ನು) ಬಿಡುಗಡೆ ಮಾಡಬೇಕು, ಸ್ವಲ್ಪ ಪ್ರಮಾಣದಲ್ಲಿ ಬಿಟ್ಟುಕೊಡಬೇಕು, ಅದರಿಂದಾಗಿ ನಾವು ಹೆಚ್ಚು ಶ್ರೀಮಂತರಾಗಿ ಬೆಳೆಯುವುದು, ಜೀವಿಸುವುದು ಸಾಧ್ಯವಾಗುವುದು – ಅದು ಅಸ್ತಿತ್ವದ ವಿಶ್ವಂಭರ ನಿಯಮ. ಹಾಗಿಲ್ಲದೆ ಹೋದರೆ, ನಮ್ಮೊಳಗಿನ ಜೀವನ ಸ್ಥಗಿತಗೊಳ್ಳುತ್ತದೆ, ಜಡತ್ವದಲ್ಲಿ ನಾಶವಾಗುತ್ತದೆ. ಅದು ಭಾರತದ ಸೃಜನಾತ್ಮಕ ಕ್ಷಮತೆ ಧರ್ಮ ಹಾಗೂ ತತ್ವಜ್ಞಾನಗಳಲ್ಲಿ ಶಂಕರ, ರಾಮಾನುಜ, ಮಧ್ವ ಹಾಗೂ ಚೈತನ್ಯರೊಂದಿಗೆ ಕೊನೆಗೊಂಡಿತೆಂದೂ ಸಾಮಾಜಿಕ ರಚನಾತ್ಮಕ ಕ್ರಿಯೆ ರಘುನಂದನ ಮತ್ತು ವಿದ್ಯಾರಣ್ಯರೊಂದಿಗೆ ಕೊನೆಗೊಂಡಿತೆಂದೂ ಭಾವಿಸುವುದಾಗಿದೆ. ಅದು ಕಲೆ ಹಾಗೂ ಕಾವ್ಯದಲ್ಲಿ ಖಾಲಿ ಮತ್ತು ಸೃಜನಾತ್ಮಕವಲ್ಲದ ಶೂನ್ಯದಲ್ಲಿ ಇಲ್ಲವೆ ವ್ಯಯವಾಗಿ ಹೊದ ರೂಪಗಳ ಮತ್ತು ಉದ್ದೇಶಗಳ ಸುಂದರವಾದ ಆದರೆ ವ್ಯರ್ಥ, ನಿರ್ಜೀವ ಪುನರಾವರ್ತನೆಯಲ್ಲಿ ವಿಶ್ರಾಂತಿ ಪಡೆಯುವುದಾಗಿದೆ. ಅದು ಮುರಿದು ಬೀಳುತ್ತಿರುವ ಸಾಮಾಜಿಕ ರೂಪಗಳಿಗೆ ಅಂಟಿಕೊಳ್ಳುವುದಾಗಿದೆ, ನಮ್ಮ

ಪ್ರಯತ್ನಗಳಿದ್ದಾಗ್ಯೂ ಆ ರೂಪಗಳ ಮುರಿದುಬೀಳುವಿಕೆ ಮುಂದುವರಿಯುತ್ತದೆ, ಅವುಗಳ ಕುಸಿತದಲ್ಲಿ ಚೂರು ಚೂರಾಗುವ ಅಪಾಯ ತರುತ್ತದೆ.

**(20/75–76)** **– ಶ್ರೀ ಅರವಿಂದರು**

*

## ಬಲದ ಆವಶ್ಯಕತೆ

ಬರಿದಾದ ಬಲ, ಶೂನ್ಯ ಚೈತನ್ಯಗಳು ನಮ್ಮಲ್ಲಿವೆ, ಹಾಗೆಯೇ ಅವುಗಳೊಂದಿಗೆ ಉಳಿದೆಲ್ಲ ವಸ್ತು–ವಿಷಯಗಳು ನಮ್ಮಲ್ಲಿವೆ. ನಾವು ಶಕ್ತಿಯನ್ನು ಕೈಬಿಟ್ಟಿದ್ದೇವೆ, ಮತ್ತು ಆ ಕಾರಣದಿಂದಾಗಿ ಶಕ್ತಿ ನಮ್ಮ ಕೈಬಿಟ್ಟಿದೆ. ನಮ್ಮ ಹೃದಯಗಳಲ್ಲಿ, ಮಿದುಳುಗಳಲ್ಲಿ, ತೋಳುಗಳಲ್ಲಿ ಜಗನ್ಮಾತೆ ಇಲ್ಲ.

**(6/80)** **– ಶ್ರೀ ಅರವಿಂದರು**

ಹೆಚ್ಚು ಆಳವಾಗಿ ನೋಡಿದಾಗ ಒಂದು ವಿಷಯದ ಕೊರತೆ ಇರುವುದು ನಮಗೆ ಹೆಚ್ಚಾಗಿ ಕಂಡುಬರುತ್ತದೆ, ಉಳಿದೆಲ್ಲ ವಿಷಯಗಳನ್ನು ಸಂಪಾದಿಸುವುದಕ್ಕಿಂತ ಮೊದಲು ಅದನ್ನು ದೊರಕಿಸಬೇಕು, ಅದು ಬಲ – ಭೌತಿಕ ಬಲ, ಮಾನಸಿಕ ಬಲ, ನೈತಿಕ ಬಲ, ಅವೆಲ್ಲವುಗಳಿಗಿಂತಲೂ ಹೆಚ್ಚಾಗಿ ಬರಿದಾಗದ, ನಾಶವಾಗದ ಹಾಗೂ ಎಲ್ಲ ಬಲಗಳ ಮೂಲವಾದ ಆಧ್ಯಾತ್ಮಿಕ ಬಲ ನಮ್ಮಲ್ಲಿದ್ದರೆ ಉಳಿದೆಲ್ಲವೂ ನಮಗೆ ಸುಲಭವಾಗಿ, ಸ್ವಾಭಾವಿಕವಾಗಿ ಕೂಡಿಕೊಳ್ಳುತ್ತದೆ. ಬಲದ ಅಭಾವವಿದ್ದಾಗ, ನಾವು ಕನಸಿನಲ್ಲಿದ್ದ ಜನರ ಹಾಗಿರುತ್ತೇವೆ, ಅವರಿಗೆ ಕೈಗಳಿರುತ್ತವೆ, ಆದರೆ ಅವರು ಹಿಡಿದುಕೊಳ್ಳಲಾರರು, ಹೊಡೆಯಲಾರರು, ಅವರಿಗೆ ಕಾಲುಗಳಿರುತ್ತವೆ, ಆದರೆ ಅವರು ಓಡಲಾರರು.

**(6/82)** **– ಶ್ರೀ ಅರವಿಂದರು** (1905)

ಭಾರತ ಜೀವಂತವಾಗಿ ಉಳಿಯಬೇಕಾದರೆ ಅದಕ್ಕೆ ಮತ್ತೆ ತಾರುಣ್ಯ ತಂದುಕೊಡಬೇಕು. ರಭಸದಿಂದ ಬರುವ ಚೈತನ್ಯದ ಹೆದ್ದೆರೆಗಳಿರುವ ಪ್ರವಾಹವನ್ನು ಅದರಲ್ಲಿ ಸುರಿಯಬೇಕು, ಅದರ ಆತ್ಮ ಪುರಾತನ ಕಾಲದಲ್ಲಿದ್ದ ಹಾಗಾಗಬೇಕು, ಉಬ್ಬರ, ವಿಸ್ತರಣೆಗಳಿರುವ ಅಪಾರ ಸಾಮರ್ಥ್ಯ ಅದರಲ್ಲಿರಬೇಕು, ಸಂಕಲ್ಪಕ್ಕೆ ತಕ್ಕಂತೆ ಸ್ಥಿರ ಇಲ್ಲವೆ ಪ್ರಕ್ಷುಬ್ಧವಾಗುವ ಕ್ರಿಯೆಯ ಇಲ್ಲವೆ ಶಕ್ತಿಯ ಸಮುದ್ರದಂತಾಗಬೇಕು.

**(6/83)** **– ಶ್ರೀ ಅರವಿಂದರು** (1905)



ಸದ್ಯದ ಸಮಯದಲ್ಲಿ ವಿಶೇಷವಾಗಿ ಭಾರತಕ್ಕೆ ಅವಶ್ಯವಾದದ್ದೆಂದರೆ ಆಕ್ರಮಣಕಾರಕ ಸದ್ಗುಣಗಳು, ಮೇಲ್ಮುಖವಾಗಿರುವ ಆದರ್ಶದ ಮನೋಭಾವ, ದಿಟ್ಟತನದ ಸೃಷ್ಟಿ, ನಿರ್ಭಯದಿಂದ ಕೈಕೊಳ್ಳುವ ಪ್ರತಿರೋಧ, ಧೈರ್ಯದಿಂದ ಕೈಕೊಳ್ಳುವ ಆಕ್ರಮಣ, ನಮ್ಮಲ್ಲಿ ನಿಷ್ಕ್ರಿಯ ತಾಮಸಿಕ ಮನೋಭಾವ ಈಗಾಗಲೆ ಅತಿಯಾಗಿ ತುಂಬಿಕೊಂಡಿದೆ.

**(7/487)** **– ಶ್ರೀ ಅರವಿಂದರು** (June 7, 1907)

*

## ಭಗವದ್ಗೀತೆ, ನಮ್ಮ ಮುಖ್ಯ ರಾಷ್ಟ್ರೀಯ ಆಸ್ತಿ

ನಿಸ್ವಾರ್ಥ, ಧೈರ್ಯ, ಮುಕ್ತ ಹಾಗೂ ಉದಾರವಾದ ಚಟುವಟಿಕೆ ಇವೆಲ್ಲವೂ ನೀತಿಶಾಸ್ತ್ರದ ತಿರುಳೆಂದು ಗೀತೆಯಲ್ಲಿ ಬೋಧಿಸಿದ್ದು ನಿಸ್ಸಂಶಯವಾಗಿ ಸತ್ಯವಾಗಿದೆ. ಆ ಬೋಧನೆಯನ್ನು ಯಾವ ದೇಶದಲ್ಲೂ ಉದಾರವಲ್ಲದ್ದು, ಅಪರಾಧಿ ಮನೋಭಾವದ್ದು ಇಲ್ಲವೆ ನೈತಿಕತೆಯನ್ನು ವಿಧ್ವಂಸಗೊಳಿಸುವಂತಹದು ಎಂದು ಕಡೆಗಣಿಸಲಾಗಿಲ್ಲ, ಅದರ ತತ್ವಜ್ಞಾನ ಕೇವಲ ವಿಶ್ವಾತೀತವಾದದ್ದು, ಮತ್ತು ಜೀವಿಸಲು ಸಾಧ್ಯವಿಲ್ಲದ್ದು ಎಂದಾದರೆ ತಿಳಿವಳಿಕೆಯಿದ್ದ ಮನುಷ್ಯನಿಗೆ ಅದರ ಯಾವ ಮೌಲ್ಯವೂ ಇರುವುದಿಲ್ಲ. ಗೀತೆಯ ಬೋಧನೆಯ ಮೇಲೆ ಹಾಗೂ ಆ ಗ್ರಂಥವನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳುವುದರ ಮೇಲೆ, ಬಹಳಷ್ಟು ಎಡೆಗಳಲ್ಲಿ, ಸಂಶಯದ ಛಾಪ(brand)ನ್ನು ಇರಿಸಲು ಅರಸುವವರ ವಿರುದ್ಧ ನಾವು ಬಲವತ್ತರವಾಗಿ ಪ್ರತಿಭಟಿಸುತ್ತೇವೆ – ಗೀತೆ ನಮ್ಮ ರಾಷ್ಟ್ರೀಯ ಆಸ್ತಿ, ನಮ್ಮ ಭವಿಷ್ಯತ್ತಿಗಾಗಿರುವ ಭರವಸೆ; ಕಲಂಕಿತರಾಗುವಂತೆ, ಅಡೆತಡೆಗಳಿಗೊಳಗಾಗುವಂತೆ ಮಾಡುವ ನೈತಿಕ ದುರ್ಬಲತೆಯಿಂದ ಜನರು ಶುದ್ಧೀಕರಣಗೊಳ್ಳುವಂತೆ ಮಾಡುವ ಶ್ರೇಷ್ಠ ಶಕ್ತಿ.

**(8/453)** **– ಶ್ರೀ ಅರವಿಂದರು**

*

## ಜನ ಜಂಗುಳಿಯ ಮಟ್ಟದಲ್ಲಿ ಅಹಿಂಸೆಯ ತತ್ವವನ್ನು ಅನ್ವಯಿಸುವುದನ್ನು ಕುರಿತು

ಆಧ್ಯಾತ್ಮಕ್ಕೆ ಸೇರಿದ್ದನ್ನು ಸಾಮಾನ್ಯ ಜೀವನಕ್ಕೆ ಅನ್ವಯಿಸಲು ಗಾಂಧಿ ಬಯಸುತ್ತಾರೆ ಎಂದು ನನಗನಿಸುತ್ತದೆ. ಅಹಿಂಸೆ ಆಧ್ಯಾತ್ಮಿಕ ಮನೋಧರ್ಮದ್ದು ಮತ್ತು ಅದರ ಆಚರಣೆ ಸಂಪೂರ್ಣವಾಗಿ ಅರ್ಥವಾಗುವಂತಿದೆ ಮತ್ತು ಅದಕ್ಕೆ

ಅದರದೇ ನಿಲುವಿದೆ. ಅದನ್ನು ನೀವು ಪೂರ್ತಿಯಾಗಿ ಒಪ್ಪಿಕೊಳ್ಳದೆ ಇರಬಹುದು, ಆದರೆ ನೈಜತೆಯಲ್ಲಿ ಅದಕ್ಕೆ ಅದರದೇ ನಿಲುವಿದೆ. ಅದನ್ನು ನೀವು ಆಧ್ಯಾತ್ಮಿಕ ಜೀವನದಲ್ಲಿ ಜೀವಿಸಬಹುದು, ಆದರೆ ಜೀವನದ ಎಲ್ಲ ಕ್ಷೇತ್ರಗಳಿಗೆ ಅನ್ವಯಿಸುವುದು ಅಸಂಗತವಾಗುತ್ತದೆ.

(Evening Talks, Jan. 16, 1939) – **ಶ್ರೀ ಅರವಿಂದರು**

*

## ದೇಶಭಕ್ತಿಯ ಭಾವನೆ ಹಾಗೂ ಯೋಗ

ದೇಶಭಕ್ತಿಯ ಭಾವನೆಗಳು ನಮ್ಮ ಯೋಗದೊಂದಿಗೆ ಸರಿಹೋಗದ ವಿಷಯಗಳೇನಲ್ಲ – ಮನುಷ್ಯ ತನ್ನ ಮಾತೃಭೂಮಿಯ ಬಲಕ್ಕಾಗಿ ಸಮಗ್ರತೆಗಾಗಿ ಸಂಕಲ್ಪ ಮಾಡುವುದು ಬಹಳ ನ್ಯಾಯಯುತವಾದ ಭಾವನೆ, ಅದು ಪ್ರಗತಿ ಸಾಧಿಸುವಂತಾಗಲಿ, ಸಂಪೂರ್ಣ ಸ್ವಾತಂತ್ರ್ಯದಲ್ಲಿ, ತನ್ನ ಸತ್ತೆಯ ಸತ್ಯದಲ್ಲಿ ಹೆಚ್ಚು ಹೆಚ್ಚಾಗಿ ಪ್ರಕಟವಾಗುವಂತಾಗಲಿ ಎಂಬುದು ಒಳ್ಳೆಯ ಹಾಗೂ ಉದಾರವಾದ ಸಂಕಲ್ಪ, ಅದು ನಮ್ಮ ಯೋಗಕ್ಕೆ ಹಾನಿಕಾರಕವಾಗುವುದಿಲ್ಲ.

ಮನುಷ್ಯ ಉತ್ತೇಜಿತನಾಗಬಾರದು, ಅಪಕ್ವರೀತಿಯಲ್ಲಿ ಕ್ರಿಯೆಯಲ್ಲಿ ಮುಳುಗಿ ಹೋಗಬಾರದು, ಅವನು ಪ್ರಾರ್ಥನೆ ಮಾಡಬಲ್ಲ ಮತ್ತು ಮಾಡಬೇಕು, ಅಭೀಪ್ಸೆ ಪಡಬೇಕು, ಸತ್ಯಕ್ಕೆ ಜಯದೊರಕಲಿ ಎಂದು ಸಂಕಲ್ಪ ಮಾಡಬೇಕು ಮತ್ತು ಅದೇ ಕಾಲಕ್ಕೆ ತನ್ನ ದೈನಂದಿನ ಕರ್ತವ್ಯಗಳನ್ನು ನಿರ್ವಹಿಸುತ್ತ ಹೋಗಬೇಕು. ಕೈಕೊಳ್ಳಬೇಕಾದ ಕ್ರಿಯೆಯನ್ನು ಕುರಿತು ತಪ್ಪು ಗ್ರಹಿಕೆ ಮಾಡಿಕೊಳ್ಳದಂತೆ ಸೂಚನೆ ಬರುವುದನ್ನು ಅಚಂಚಲತೆಯಿಂದ ಕಾದುನೋಡಬೇಕು.

**(13/356)** – **ಶ್ರೀಮಾತೆ** (Oct. 27, 1962)

*

## ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವ ಇವುಗಳ ನಿಜವಾದ ಮೂಲ

ಭಾರತದ ಮಣಿಹ ಮಾನವ ಕುಲಕ್ಕೆ ಮಾನವ ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವ ಇವುಗಳನ್ನು ಮರಳಿ ತೋರಿಸಿಕೊಡುವುದಾಗಿದೆ. ಮನುಷ್ಯ ತನ್ನ ಆತ್ಮದಲ್ಲಿ ಮುಕ್ತನಾಗಿದ್ದಾಗ ಉಳಿದೆಲ್ಲ ಸ್ವಾತಂತ್ರ್ಯ ಅವನಿಗೆ ಅಧೀನವಾಗಿರುತ್ತದೆ, ಏಕೆಂದರೆ ದೈವಿಕವಾಗಿ ಮುಕ್ತನಾದವನು ದೈವೀ ಪ್ರಭು, ಅವನನ್ನು ಬಂಧಿಸಿಡಲಾಗದು. ಅವನು ಭ್ರಮೆಯಿಂದ ಮುಕ್ತನಾದಾಗ ಜಗತ್ತಿನ ದೈವೀ ಸಮಾನತೆಯನ್ನು ಗ್ರಹಿಕೆಗೆ



ತಂದುಕೊಳ್ಳುತ್ತಾನೆ, ಅದು ಪ್ರೇಮದ ಹಾಗೂ ನ್ಯಾಯ ವ್ಯವಹಾರದ ಮೂಲಕ ತನ್ನ ನೆರವೇರಿಕೆ ಕಂಡುಕೊಳ್ಳುತ್ತದೆ. ಮತ್ತು ಈ ಗ್ರಹಿಕೆ ಸರಕಾರದ ಹಾಗೂ ಸಮಾಜದ ನಿಯಮದಲ್ಲಿ ವ್ಯಾಪಿಸಿಕೊಳ್ಳುತ್ತದೆ. ಅವನು ಈ ದೈವೀ ಸಮಾನತೆಯನ್ನು ಗ್ರಹಿಸಿದಾಗ ಇಡೀ ಜಗತ್ತಿಗೆ ಅವನು ಸಹೋದರನಾಗಿರುತ್ತಾನೆ ಹಾಗೂ ಅವನನ್ನು ಯಾವುದೇ ಸ್ಥಾನದಲ್ಲಿ ಇರಿಸಿದಾಗ ಅವನು ಎಲ್ಲರನ್ನು ಸಹೋದರರೆಂದು ಭಾವಿಸಿ ಅವರಿಗೆ ಪ್ರೇಮದ ಹಾಗೂ ನ್ಯಾಯ ವ್ಯವಹಾರದ ಮೂಲಕ ಸೇವೆ ಸಲ್ಲಿಸುತ್ತಾನೆ. ಈ ಗ್ರಹಿಕೆ ಧರ್ಮದ, ತತ್ವಜ್ಞಾನದ, ಸಾಮಾಜಿಕ ಚಿಂತನದ, ರಾಜಕೀಯ ಅಭೀಪ್ಸೆಯ ಆಧಾರವಾದಾಗ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಸಮಾಜ ರಚನೆಯಲ್ಲಿ ತಮ್ಮ ಸ್ಥಾನವನ್ನು ಕಂಡುಕೊಳ್ಳುತ್ತವೆ ಮತ್ತು ಸತ್ಯಯುಗ ಮರಳಿ ಬರುತ್ತದೆ. ಇದು ಪ್ರಜಾಪ್ರಭುತ್ವ ಕುರಿತು ಏಶಿಯಾ ದೇಶಗಳ ಅರ್ಥ ವಿವರಣೆ, ಅದನ್ನು ಭಾರತ ಜಗತ್ತಿಗೆ ಕೊಡುವುದಕ್ಕಿಂತ ಮೊದಲು ತನಗಾಗಿ ಮರುಶೋಧ ಮಾಡಬೇಕಾಗಿದೆ. ಪ್ರತಿಯೊಬ್ಬನ ಧರ್ಮ ಆತ್ಮದಲ್ಲಿ ಮುಕ್ತನಾಗಿರುವುದು, ಸೇವೆ ಮಾಡುವ ಬಂಧನಕ್ಕೊಳಗಾಗಿರುವುದು ಒತ್ತಾಯದಿಂದಲ್ಲ, ಆದರೆ ಪ್ರೇಮದ ಮೂಲಕ; ಸಮಾಜಕ್ಕೆ ಸೇವೆ ಸಲ್ಲಿಸುವ ಅವನಲ್ಲಿರುವ ಕ್ಷಮತೆಯಿಂದ ತನ್ನ ಸ್ಥಾನವನ್ನು ಹಂಚಿಕೊಂಡಿರುವುದು, ಇತರರ ಸ್ವಾರ್ಥಪರ ಆಸಕ್ತಿಯಿಂದ ಪಡೆದಿರುವುದಲ್ಲ; ತನ್ನ ಸಹೋದರರಂತಿರುವ ಜನರೊಂದಿಗೆ ಸಾಮರಸ್ಯದ ಸಂಬಂಧ ಹೊಂದಿರುವುದು, ಪರಸ್ಪರರ ಪ್ರೇಮ, ಸೇವೆಗಳೊಂದಿಗೆ ಜೊತೆಗಿರುವುದು, ಅಡಿಯಾಳುತನದ ಸಂಕೋಲೆಗಳಿಂದಲ್ಲ ಇಲ್ಲವೆ ಶೋಷಣೆ ಮಾಡುವವನ ಹಾಗೂ ಶೋಷಣೆಗೊಳಗಾದವನ, ತಿಂದುಹಾಕುವವನ ಹಾಗೂ ತಿಂದುಹಾಕಿಸಿಕೊಳ್ಳುವವನ ಸಂಬಂಧಗಳಲ್ಲಲ್ಲ. ಪ್ರಜಾಪ್ರಭುತ್ವ ಮನುಷ್ಯನ ಹಕ್ಕುಗಳ ಮೇಲೆ ಆಧಾರಿತವಾಗಿದೆ ಎಂದು ಹೇಳಲಾಗಿದೆ, ಹಕ್ಕುಗಳಿಗಿಂತಲೂ ಹೆಚ್ಚಾಗಿ ಕರ್ತವ್ಯಪಾಲನೆಯನ್ನು ಆಧಾರವಾಗಿರಿಸಬೇಕೆಂದು ಉತ್ತರ ನೀಡಲಾಗಿದೆ. ಹಕ್ಕುಗಳ ಜೊತೆಗೆ ಕರ್ತವ್ಯಗಳೂ ಇರಬೇಕೆಂಬುದು ಯುರೋಪಿಯನ್‌ರ ವಿಚಾರ. ಸ್ವಾರ್ಥವನ್ನು ಕ್ರಿಯೆಯ ಬೇರನ್ನಾಗಿ ಮಾಡಿದ ಜಗತ್ತಿನ ದೃಷ್ಟಿಕೋನದಿಂದ ಸೃಷ್ಟಿಯಾದ ಹಕ್ಕುಗಳು ಹಾಗೂ ಕರ್ತವ್ಯಗಳು ಇವುಗಳ ನಡುವಿರುವ ಕೃತ್ರಿಮ ವಿರೋಧವನ್ನು ಧರ್ಮದಲ್ಲಿ ಅವು ಕಳೆದುಕೊಳ್ಳುತ್ತವೆ ಮತ್ತು ಅವುಗಳ ಆಳವಾದ ಮತ್ತು ಸನಾತನ ಏಕತೆಯನ್ನು ಮರಳಿ ಪಡೆಯುತ್ತವೆ.

**(7/931–32)** – **ಶ್ರೀ ಅರವಿಂದರು** (March 16, 1908)

*

## ಪ್ರಾರ್ಥನೆ ಮಾಡಿರಿ ಹಾಗೂ ದೈವೀ ಸತ್ಯದ ಜೊತೆಗಿರಿ

ಇದು ಏಕೆಂದರೆ ಇಡೀ ಜಗತ್ತು ಮಿಥ್ಯೆಯಲ್ಲಿ ಮಗ್ನವಾಗಿ ಹೋಗಿದೆ. – ಹಾಗಾಗಿ ಮೇಲಕ್ಕೆದ್ದು ಬರುವ ಎಲ್ಲ ಕ್ರಿಯೆಗಳು ಮಿಥ್ಯೆಯಾಗಿರುತ್ತವೆ ಮತ್ತು ಈ ಪರಿಸ್ಥಿತಿ ಬಹಳ ಕಾಲದ ವರೆಗೆ ಮುಂದುವರಿದುಕೊಂಡು ಹೋಗಬಹುದು ಮತ್ತು ಅದು ಜನರಿಗೆ ಹಾಗೂ ದೇಶಕ್ಕೆ ಬಹಳಷ್ಟು ವೇದನೆಯನ್ನು ತರುವುದು.

ಕೈಕೊಳ್ಳಬೇಕಾದ ಒಂದೇ ಕಾರ್ಯವೆಂದರೆ ದೈವೀ ಮಧ್ಯಸ್ಥಿಕೆಗಾಗಿ ಹೃದಯದಿಂದ ಪ್ರಾರ್ಥನೆ ಮಾಡುವುದಾಗಿದೆ, ಏಕೆಂದರೆ ಅದೊಂದೇ ನಮಗೆ ರಕ್ಷಣೆ ನೀಡಬಲ್ಲದು. ಇದರ ಬಗ್ಗೆ ಅರಿವು ತಂದುಕೊಳ್ಳಬಲ್ಲ ಎಲ್ಲ ಜನರು ದೈವೀ ಸತ್ಯದ ಪರವಾಗಿ ನಿಲ್ಲುವೆವೆಂಬ ಮತ್ತು ದೈವೀ ಸತ್ಯದಲ್ಲಿ ಕಾರ್ಯ ಕೈಕೊಳ್ಳುವೆವೆಂಬ ದೃಢ ನಿರ್ಧಾರ ಮಾಡಬೇಕು. ಈ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದು ಇರಬಾರದು. ಇದು ಬಹಳ ಅವಶ್ಯವಾದದ್ದು. ಇರುವ ಮಾರ್ಗ ಇದೊಂದೇ.

ನಮಗಾಗಿ ವಿಷಯಗಳು ತಪ್ಪಾಗಿ, ಕೆಟ್ಟ ರೀತಿಯವಾಗಿ ಸಾಗುತ್ತಿವೆ ಎಂದು ತೋರಿಬಂದಾಗಲೂ ಕೂಡ – ಅವು ನಿಜವಾಗಿ ಹಾಗಿರುತ್ತವೆ. ಏಕೆಂದರೆ ಸದ್ಯದ ಮಿಥ್ಯೆ ತನ್ನ ಪ್ರಾಬಲ್ಯ ಮೆರೆಸುತ್ತಿದೆ, – ನಾವು ದೈವೀ ಸತ್ಯದೊಂದಿಗಿರುವ ನಿರ್ಧಾರದಿಂದ ಅಡೆತಡೆಗೊಳಗಾಗಬಾರದು.

ಇರುವ ಮಾರ್ಗ ಇದೊಂದೇ.

**(13/272)** **– ಶ್ರೀಮಾತೆ**

*

## ರಾಷ್ಟ್ರೀಯ ಜೀವನವನ್ನು ಜಾಗ್ರತಗೊಳಿಸುವುದು
### ಪಾರ್ಥಸಾರಥಿ ಅಯ್ಯಂಗಾರ ಅವರಿಗೆ ಶ್ರೀ ಅರವಿಂದರು 13–7–1911 ರಂದು ಬರೆದ ಪತ್ರದಿಂದ ಆಯ್ದ ಭಾಗಗಳು

ಹಳೆಯ ರೀತಿಯ ರಾಜಕಾರಣ ಪದ್ಧತಿಯಿಂದ ತಪ್ಪಿಸಿಕೊಳ್ಳಲು ನನ್ನ ಆದೇಶಗಳನ್ನು ಕಾಳಜಿಪೂರ್ವಕ ಅನುಸರಿಸು. ಆಧ್ಯಾತ್ಮಿಕತೆ ಭಾರತದ ಏಕಮಾತ್ರ ರಾಜಕಾರಣ, ಸನಾತನ ಧರ್ಮ ಮಾತ್ರ ಅದರ ಸ್ವರಾಜ್ಯವಿದ್ದ ಹಾಗೆ. ಪಾರ್ಲಿಮೆಂಟ (ಸಂಸತ್ತು) ಪದ್ಧತಿಯ ಅವಧಿಯೊಳಗಿಂದ ನಾವು ಸಾಗಿ ಹೋಗಬೇಕಾಗುತ್ತದೆ ಎಂಬುದರಲ್ಲಿ ನನಗೆ ಸಂಶಯವಿಲ್ಲ, ಅದು ದೇಶಗಳಿಗೆ ಉಪಕಾರ ಮಾಡುವಾಗ ಆಚರಣೆಯಲ್ಲಿ ಎಷ್ಟೊಂದು ಅಸಹಾಯಕವಾಗಿರುತ್ತದೆ ಎಂಬುದನ್ನು



ಕಂಡುಕೊಂಡು ಪಾಶ್ಚಾತ್ಯರ ಪ್ರಜಾಪ್ರಭುತ್ವದ ವಿಚಾರವನ್ನು ತೊಡೆದು ಹಾಕುವುದು ಸಾಧ್ಯವಾಗುತ್ತದೆ. ಭಾರತ ನಿಜವಾಗಿ ರಾಷ್ಟ್ರೀಯ ಯೋಗದ ಮೊದಲ ಹಂತಗಳಲ್ಲಿ ಸಾಗಿ ಹೋಗುತ್ತಿದೆ, 1905ರಲ್ಲಿ ಒಳನುಗ್ಗಿ ಬಂದ ದೈವೀಶಕ್ತಿಯ ಮೂಲಕ, ಪ್ರಾರಂಭದ ದೆಶೆಯಲ್ಲಿ ಅದರ ಮೇಲೆ ಪ್ರಭುತ್ವ ಪಡೆಯಲಾಯಿತು. ಮತ್ತು ಆ ದೈವೀಶಕ್ತಿ ಆ ಯೋಗವನ್ನು ಸಂಪೂರ್ಣ ತಾಮಸಿಕ ಅಜ್ಞಾನದಿಂದ ಮೇಲಕ್ಕೆಬ್ಬಿಸಿತು. ವ್ಯಕ್ತಿಗಳಿಗೆ ಆಗುವ ಹಾಗೆ, ಅದರೊಡನೆ ದುಷ್ಟವಾದದ್ದೆಲ್ಲ, ಎಲ್ಲ ತಪ್ಪು ಸಂಸ್ಕಾರಗಳು, ತಪ್ಪು ಭಾವನೆಗಳು ಮತ್ತು ಮಾನಸಿಕ, ನೈತಿಕ ರೂಢಿಗಳು ಮೇಲೆದ್ದು ಬಂದವು ಮತ್ತು ದೈವೀಶಕ್ತಿಯನ್ನು ದುರುಪಯೋಗಪಡಿಸಿಕೊಂಡವು. ಆದ್ದರಿಂದ ರಾಜಕೀಯ ವಾಕ್ಪಟುತ್ವ, ಪ್ರಜಾಪ್ರಭುತ್ವದ ಬಗ್ಗೆ ಉತ್ಕಟ ಆಸಕ್ತಿ, ಸಭೆಗಳು, ಮೆರವಣಿಗೆಗಳು, ನಿಷ್ಕ್ರಿಯ ಪ್ರತಿರೋಧ ಇವೆಲ್ಲವುಗಳ ಸ್ವಚ್ಛಂದ ಸಮಾರಂಭ ನಡೆದು ಅವು ಬಾಂಬುಗಳು, ಪಿಸ್ತೂಲುಗಳು, ಬಲ ಪ್ರಯೋಗದ ನಿಯಮಗಳು ಇವೆಲ್ಲವುಗಳಲ್ಲಿ ಕೊನೆಗೊಂಡವು. ಅದು ಶುದ್ಧ ರಾಜಸಿಕ ಚಟುವಟಿಕೆಯ ಅವಧಿಯಾಗಿತ್ತು. ಅದನ್ನನುಸರಿಸಿ ನಿರಾಶೆಗೊಳಗಾದ ರಜಸ್ಸಿನಿಂದ ಅನಿವಾರ್ಯವಾಗಿ ತಾಮಸಿಕ ಪ್ರತಿಕ್ರಿಯೆಯ ಅವಧಿ ಬರಬೇಕಾಯಿತು. ಇಂಗ್ಲೀಷರ ಉದಾರವಾದ (Liberalism)ದ ಜಾರತನದ ಸಂತಾನವಾದ ಮಂದಗಾಮಿತ್ವ (Moderatism), ಯುರೋಪ ಮತ್ತು ಏಶಿಯಾದ ಮಿಶ್ರಣದ ಸಂತಾನ ರಾಷ್ಟ್ರೀಯವಾದ (Nationalism), ಬಾಕುನಿನ್ (Bakunin) ಮತ್ತು ಮಾಝಿನಿ (Mazzini) ಇವರ ಕೈಗೂಡದ ಭಯೋತ್ಪಾದನೆ ಇವೆಲ್ಲವನ್ನು ದೇವ ಹೊಡೆದು ಹಾಕಿದ್ದಾನೆ. ಕೊನೆಯದು ಇನ್ನೂ ಜೀವಿಸುತ್ತಿದೆ, ಆದರೆ ಅದನ್ನು ನಿಧಾನವಾಗಿ ಚೂರು ಚೂರು ಮಾಡಲಾಗುತ್ತಿದೆ. ...ಏಕೆಂದರೆ ಈ ಮೂರ್ಖತನದ ಕಾರ್ಯವನ್ನು ಕೈಕೊಂಡಾದಮೇಲೆ ಸತ್ಯಕ್ಕೆ ಅವಕಾಶ ದೊರಕುತ್ತದೆ, ಭಾರತದ ಸಾತ್ವಿಕ ಮನಸ್ಸು ಹೊರಹೊಮ್ಮುತ್ತದೆ ಮತ್ತು ಭಾರತದ ಪುನರುಜ್ಜೀವನದ ಪೀಠಿಕೆಯ ರೂಪದಲ್ಲಿ ಬಲವತ್ತರವಾದ ಆಧ್ಯಾತ್ಮಿಕ ಚಳುವಳಿ ಪ್ರಾರಂಭವಾಗಬಲ್ಲದು. ನಿಸ್ಸಂಶಯವಾಗಿ ಬಹಳಷ್ಟು ತೊಂದರೆ ಹಾಗೂ ದೋಷಗಳನ್ನು ಎದುರಿಸುವುದಿರುತ್ತದೆ, ಆದರೆ ಸರಿಯಾದ ಮಾರ್ಗದಲ್ಲಿ ಹೆಜ್ಜೆ ಇರಿಸುವುದಕ್ಕೆ ನಮಗೆ ಅವಕಾಶವಿರುತ್ತದೆ. ಎಲ್ಲದರಲ್ಲಿ ಅವಶ್ಯವಾದ ಅನುಭವಗಳನ್ನು ನೀಡುತ್ತ, ಅವಶ್ಯವಾದ ಸ್ಥಿತಿಗಳನ್ನು ತಯಾರಿ ಮಾಡುತ್ತ ದೇವ ನಮಗೆ ಮಾರ್ಗದರ್ಶನ ಮಾಡುತ್ತಿದ್ದಾನೆ ಎಂದು ನಾನು ನಂಬುತ್ತೇನೆ.

**(36/170–71)** **– ಶ್ರೀ ಅರವಿಂದರು**

*

## ಭಾರತಕ್ಕೆ ಆದರ್ಶಪ್ರಾಯವಾದ ಸರಕಾರದ ರೂಪ

(ಶ್ರೀ ಅರವಿಂದರು ತಮ್ಮ ಶಿಷ್ಯರೊಂದಿಗೆ ನಡೆಸಿದ ಔಪಚಾರಿಕ ಮಾತುಕತೆಗಳನ್ನು ಎ.ಬಿ. ಪುರಾಣಿ ಮತ್ತು ನಲಿನೀಕಾಂತ ಗುಪ್ತ ಟಿಪ್ಪಣೆ ಮಾಡಿ ಬರೆದಿಟ್ಟಿದ್ದರು. ಅವುಗಳಿಂದ ಆಯ್ದುಕೊಂಡ ಮೂರು ಅವತರಣಿಕೆಗಳನ್ನು ಇಲ್ಲಿ ಕೊಡಲಾಗಿದೆ.)

ಡಿಸೆಂಬರ 27, 1938

ಭಾರತೀಯ ಪದ್ಧತಿ (ಸರಕಾರದ ಪದ್ಧತಿ) ಜೀವನದ ಮೂಲಕ ಬೆಳೆದು ಬಂದಿತು. ಅದರಲ್ಲಿ ಪ್ರತಿಯೊಂದಕ್ಕೂ, ಪ್ರತಿಯೊಂದು ಹಿತಾಸಕ್ತಿಗೂ ಸ್ಥಾನವಿತ್ತು. ಅಲ್ಲಿ ಏಕ ರಾಜಾಧಿಪತ್ಯ (Monarchy), ಶ್ರೀಮಂತರ ಆಳಿಕೆ (Aristocracy) ಮತ್ತು ಪ್ರಜಾಪ್ರಭುತ್ವ (Democracy) ಇದ್ದವು. ಸರಕಾರದಲ್ಲಿ ಪ್ರತಿಯೊಂದು ಹಿತಾಸಕ್ತಿಗೆ ಪ್ರತಿನಿಧಿತ್ವವಿತ್ತು. ಅದು ಹಾಗಿರುವಾಗ ಪಾಶ್ಚಾತ್ಯ ಪದ್ಧತಿ ಮನಸ್ಸಿನಿಂದ ಜನ್ಮತಾಳಿತ್ತು. ಯುರೋಪಿನ ಜನರಿಗೆ ತರ್ಕ ಮಾರ್ಗದರ್ಶಿಯಾಗಿತ್ತು ಮತ್ತು ಅವರು ಪ್ರತಿಯೊಂದಕ್ಕೆ ಸ್ವಾತಂತ್ರ್ಯ ಹಾಗೂ ವೈವಿಧ್ಯಗಳಿಗೆ ಆಸ್ಪದ ಕೊಡದೆ ಅದನ್ನು ಸಾರವಿಲ್ಲದಂತೆ ಕತ್ತರಿಸಿಟ್ಟ ಹಾಗೆ ಮಾಡಿದರು. ಅದು ಪ್ರಜಾಪ್ರಭುತ್ವವಾಗಿದ್ದರೆ ಕೇವಲ ಪ್ರಜಾಪ್ರಭುತ್ವ, ಅಲ್ಲಿ ಬೇರೆ ಯಾವುದಕ್ಕೂ ಸ್ಥಾನವಿರಲಿಲ್ಲ, ನಮ್ಯತೆಗೆ ಸ್ಥಾನ ಕೊಡುತ್ತಿರಲಿಲ್ಲ.

**ಪ್ರಶ್ನೆ :** *ಹಾಗಾದರೆ ಭಾರತಕ್ಕೆ ಆದರ್ಶಪ್ರಾಯವಾದ ಸರಕಾರ ಕುರಿತು ನಿಮ್ಮ ವಿಚಾರವೇನು?*

**ಶ್ರೀ ಅ :** ರವೀಂದ್ರನಾಥ ಟ್ಯಾಗೋರ ಒಮ್ಮೆ ಬರೆದಿಟ್ಟಿದ್ದ ವಿಚಾರದ ಹಾಗೆ ನನ್ನದಿದೆ. ರಾಜ್ಯನೀತಿ(policy)ಯ ಮುಂದುವರಿಕೆಯನ್ನು, ರಾಷ್ಟ್ರದ ಪ್ರಾತಿನಿಧಿಕ ಶಾಸನ ಸಭೆಯನ್ನು ರಕ್ಷಿಸಲು ಅತ್ಯುಚ್ಚ ಸ್ಥಾನದಲ್ಲಿ ಒಬ್ಬ ರಾಷ್ಟ್ರಪತಿ ಇರಬಹುದಾಗಿದೆ. ಪ್ರಾಂತಗಳು ಉನ್ನತ ಮಟ್ಟದಲ್ಲಿ ಏಕಗೊಂಡು ಒಕ್ಕೂಟಗಳಾಗಿ ಸಂಯೋಜಿತವಾಗುತ್ತವೆ, ಅವುಗಳಿಗೆ ಸ್ಥಾನಿಕ ಮಂಡಲಗಳನ್ನು ರಚಿಸಿಕೊಳ್ಳಲು ಸಾಕಷ್ಟು ಅವಕಾಶ ಮಾಡಿಕೊಡಲಾಗುತ್ತದೆ. ಅವು ಸ್ಥಾನಿಕ ಸಮಸ್ಯೆಗಳಿಗನುಗುಣವಾಗಿ ನಿಯಮಗಳನ್ನು ಮಾಡಿಕೊಳ್ಳಬಹುದಾಗಿದೆ.

(Evening Talks, A.B. Purani, p.65) **– ಶ್ರೀ ಅರವಿಂದರು**



ಜನೆವರಿ 29, 1939

ಸಮಾಜವಾದ(socialism)ವನ್ನು ಪ್ರತಿಪಾದಿಸುವ ರಾಜ್ಯದಲ್ಲಿ ಪ್ರತಿಯೊಂದು ಹೆಜ್ಜೆಯಲ್ಲಿ ಅದು ತನ್ನ ಅಧಿಕಾರಿಗಳೊಂದಿಗೆ ಮಧ್ಯೆ ಪ್ರವೇಶಿಸುತ್ತದೆ, ಆ ಅಧಿಕಾರಿಗಳು ನಿಮ್ಮ ಹಣವನ್ನು ದೋಚುತ್ತಾರೆ. ರಾಜ್ಯದ ಅಧಿಕಾರಶಾಹಿ ಅದರ ರಾಜ್ಯನೀತಿಯನ್ನು ಒತ್ತಾಯಪೂರ್ವಕವಾಗಿ ಆದೇಶಿಸುತ್ತದೆ, ನೀತಿ ಒಳ್ಳೆಯದೇ ಆಗಿರಬೇಕೆಂದಿರುವುದಿಲ್ಲ, ಸಮುದಾಯ ಸ್ವಾತಂತ್ರ್ಯ(communism)ದಲ್ಲಿ ರಾಜ್ಯದ ಭೂಮಿಯನ್ನು ಸಾರ್ವಜನಿಕ ಸ್ವತ್ತೆಂದು ಹಿಡಿದಿಟ್ಟುಕೊಳ್ಳಲಾಗಿರುತ್ತದೆ, ಅಲ್ಲಿರುವ ಪ್ರತಿಯೊಬ್ಬನೂ ಶ್ರಮಪಟ್ಟು ಉತ್ಪಾದನೆಯಾದುದರಲ್ಲಿ ತನ್ನ ಪಾಲನ್ನು ಪಡೆಯಲು ಹಕ್ಕುದಾರನಾಗಿರುತ್ತಾನೆ.

ನಮ್ಮ ದೇಶದ ಹಳ್ಳಿಗಳಲ್ಲಿ ಒಂದು ಬಗೆಯ ಸಮುದಾಯ ಸ್ವಾತಂತ್ರ್ಯವಿತ್ತು. ಇಡೀ ದೇಶ ಒಂದು ಕುಟುಂಬದ ಹಾಗಿತ್ತು. ಕನಿಷ್ಠ ವರ್ಗದವರಿಗೂ ಕುಟುಂಬದ ಸದಸ್ಯರೆಂದು ಅವರ ಪಾಲಿತ್ತು. ಅಗಸ, ಬಡಿಗ, ಕಮ್ಮಾರ ಇವೆಲ್ಲರೂ ತಮಗೆ ಬೇಕಾದುದನ್ನು ಪಡೆಯುತ್ತಿದ್ದರು.

(Evening Talks, Nirodbaran, p.213) **– ಶ್ರೀ ಅರವಿಂದರು**

ಫೆಬ್ರುವರಿ 2, 1938

ಇಂದಿನ ದಿನಗಳಲ್ಲಿ ಜನರು ಆಧುನಿಕ ಮಾದರಿಯ ಪ್ರಜಾಪ್ರಭುತ್ವವನ್ನು ಎಂದರೆ ಪಾರ್ಲಿಮೆಂಟ ಇರುವ ಸರಕಾರವನ್ನು ಬಯಸುತ್ತಾರೆ. ಪಾರ್ಲಿಮೆಂಟ ಪದ್ಧತಿ ಅವನತಿಗೊಳಗಾಗಲಿದೆ, ಅದು ಯುರೋಪನ್ನು ಅದರ ಶೋಚನೀಯ ಸ್ಥಿತಿಗೆ ತಂದಿದೆ.

ಭಾರತದಲ್ಲಿ ಹಳ್ಳಿಗಳಲ್ಲಿ ಹಳೆಯ ಪಂಚಾಯತಿ ಪದ್ಧತಿಯಿಂದ ಪ್ರಾರಂಭಿಸಬೇಕು ಮತ್ತು ಅಲ್ಲಿಂದ ಕಾರ್ಯವನ್ನು ಹೆಚ್ಚಿನ ಮಟ್ಟಕ್ಕೆ ಕೊಂಡೊಯ್ಯಬೇಕು. ಪಂಚಾಯತಿ ಮತ್ತು ಪರಸ್ಪರ ಸಹಾಯಕ ಸಂಘ (guild) ಇವು ಹೆಚ್ಚು ಪ್ರಾತಿನಿಧಿಕವಾಗಿವೆ ಮತ್ತು ಜನರೊಡನೆ ಜೀವಂತ ಸಂಪರ್ಕ ಹೊಂದಿರುತ್ತವೆ. ತದ್ವಿರುದ್ಧವಾಗಿ ಪಾರ್ಲಿಮೆಂಟ ಪದ್ಧತಿ ಅದರ ಸ್ಥಾನಿಕ ಸಂಸ್ಥೆಗಳೊಂದಿಗೆ ಎಂದರೆ ಮುನ್ಸಿಪಲ್ ಕೌನ್ಸಿಲ್ಲುಗಳೊಂದಿಗೆ ಕಾರ್ಯಗತವಾಗುವುದಿಲ್ಲ, ಕೌನ್ಸಿಲ್ಲಿನ ಶಾಸಕರು ಜನರೊಂದಿಗೆ ಜೀವಂತ ಸಂಪರ್ಕ ಹೊಂದಿರುವುದಿಲ್ಲ. ಶಾಸಕರು ಕೇವಲ ವೇದಿಕೆಯ ಮೇಲೆ ನಿಂತು ಭಾಷಣ

ಮಾಡುತ್ತಾರೆ, ಅವರು ಶಾಸಕರಾಗಿರುವ ಮೂರು ಅಥವಾ ನಾಲ್ಕು ವರ್ಷಗಳ ಕಾಲದಲ್ಲಿ ಏನು ಕೈಕೊಳ್ಳುತ್ತಾರೆಂಬುದು ಯಾರಿಗೂ ತಿಳಿಯದು. ಕೊನೆಗೆ ಅವರು ಇಡಿಯದನ್ನು ಪುನರ್ವ್ಯವಸ್ಥೆಗೆ ಒಳಪಡಿಸುತ್ತಾರೆ ಹಾಗೂ ಪುನರ್ರಚಿಸುತ್ತಾರೆ. ತಮ್ಮದೇ ಅಧಿಕಾರದ ಅವಧಿಯಲ್ಲಿ ಭಾರೀ ಸಂಪತ್ತನ್ನು ಕೂಡಿಹಾಕಿಕೊಂಡಿರುತ್ತಾರೆ.

(Evening Talks, Nirodbaran, pp.230, 234-35) – **ಶ್ರೀ ಅರವಿಂದರು**

*

## ಪಕ್ಷರಹಿತ ಸರಕಾರ

ದೇಶವನ್ನು ಅದರ ತೊಂದರೆಯಿಂದ ಮುಕ್ತಗೊಳಿಸಲು ನಾವು ಮಾಡಬೇಕಾದುದೇನು? ಶ್ರೀ ಅರವಿಂದರು ಎಲ್ಲ ತೊಂದರೆಗಳನ್ನು ಪೂರ್ವಭಾವಿಯಾಗಿ ಕಂಡುಕೊಂಡಿದ್ದಾರೆ ಮತ್ತು ಅವುಗಳಿಗೆ ಪರಿಹಾರ ಸೂಚಿಸಿದ್ದಾರೆ.

ಮತ್ತು ಇದು ಎಲ್ಲ ರಾಜಕೀಯಕ್ಕಿಂತ ಮೇಲಿದೆ. ಅದು ಪಕ್ಷವೊಂದರ ಪ್ರಶ್ನೆಯಲ್ಲ, ಏಕೆಂದರೆ ಕೆಲವರು ಅದರ ಪರವಾಗಿ ಇದ್ದಾರೆ, ಇತರರು ಸ್ವಾಭಾವಿಕವಾಗಿ ಅದರ ಪರವಾಗಿ ಇರುವುದಿಲ್ಲ. ಅದು ಎಲ್ಲ ರಾಜಕೀಯ ವಿಷಯಗಳಿಗಿಂತ ಮೇಲಿದೆ. ಅದು ದೇಶವನ್ನು ರಾಜಕೀಯದಿಂದಾಚೆಗೆ ಸಂಘಟಿಸುವುದಾಗಿದೆ. ಇರುವ ಮಾರ್ಗ ಅದೊಂದೇ. ರಾಜಕೀಯದಲ್ಲಿ ಯಾವಾಗಲೂ ಹೋರಾಟ, ಅವಲಕ್ಷಣದ ಹೋರಾಟ – ಅವಲಕ್ಷಣದ್ದು. ಅದು ಅಷ್ಟೊಂದು ಕೆಟ್ಟುಹೋಗಿದೆ. ವಿಷಯಗಳು ಇನ್ನೂ ಹೆಚ್ಚು ಹೆಚ್ಚಾಗಿ ಕೆಟ್ಟವಾಗುತ್ತ ಹೋಗುತ್ತವೆ ಎಂದು ಅವರು ನನಗೆ ಹೇಳುತ್ತಿದ್ದರು, ಏಕೆಂದರೆ ಅದು ಈ ಯುಗದ ಕೊನೆಯಾಗಿದೆ. ಬೇರೆ ರೀತಿಯಲ್ಲಿ ವಿಷಯಗಳನ್ನು ಸಂಘಟಿಸಬೇಕಾದ ಯುಗದಲ್ಲಿ ನಾವು ಪ್ರವೇಶಿಸಿದ್ದೇವೆ, ಆ ಕಾರಣದಿಂದಾಗಿ ಇದು ಕಠಿಣ ಕಾಲವಾಗಿದೆ.

ನಾವು ಪಕ್ಷರಹಿತ ಸರಕಾರವನ್ನು ರಚಿಸಲು ಸಾಧ್ಯವಾಗದೆ ಹೋದರೆ ರಾಜಕಾರಣ, ಯಾವಾಗಲೂ, ಪಕ್ಷದಿಂದ, ಅದರ ವಿಚಾರಗಳು ಹಾಗೂ ಕರ್ತವ್ಯಗಳ ಮೂಲಕ ಸೀಮಿತಗೊಳ್ಳುತ್ತದೆ. ಎಲ್ಲ ಪಕ್ಷಗಳಿಗಿಂತ ಮೇಲಿರುವ ಸರಕಾರ ಎಲ್ಲ ವಿಚಾರಗಳನ್ನು ಒಪ್ಪಿಕೊಳ್ಳುತ್ತದೆ. ಪಕ್ಷ ಎಂದರೆ ಅದೊಂದು ಸೀಮಿತತೆ, ಅದು ಒಂದು ಪೆಟ್ಟಿಗೆ ಇದ್ದ ಹಾಗೆ. ನೀವು ಆ ಪೆಟ್ಟಿಗೆಯೊಳಗೆ ಹೋಗುತ್ತೀರಿ (ಶ್ರೀಮಾತೆಯವರು ನಗುತ್ತಾರೆ). "ನಾವು ಯಾವ ಪಕ್ಷವನ್ನೂ



ಪ್ರತಿನಿಧಿಸುವುದಿಲ್ಲ, ಭಾರತವನ್ನು ಪ್ರತಿನಿಧಿಸುತ್ತೇವೆ" ಎಂದು ಹೇಳುವ ಧೈರ್ಯವುಳ್ಳ ಜನರು ಸರಕಾರದಲ್ಲಿದ್ದರೆ, ಅದು ಅದ್ಭುತವಾಗಿರುತ್ತದೆ.

**(15/405–07)** **– ಶ್ರೀಮಾತೆ**

*

## ಪ್ರಜ್ಞೆಯನ್ನು ಪಕ್ಷದಾಚೆಗೆ ಎಳೆದುಕೊಳ್ಳಿರಿ

ಮತ್ತು ಆಗ, ಸ್ವಾಭಾವಿಕವಾಗಿ, ಕೆಲವು ಜನರು, ರಾಜಕೀಯ ಪಕ್ಷಗಳಲ್ಲಿ ಬರಲಾಗದೆ ಇದ್ದ ಜನರಿರುತ್ತಾರೆ. – ಅದು ನಾಳಿನ ಸಲುವಾಗಿ ಕಾರ್ಯ ಮಾಡುವುದಿರುತ್ತದೆ. ನಾಳೆ ಅದು ಹಾಗಿರುತ್ತದೆ. ಈ ಎಲ್ಲ ಗದ್ದಲ ಇರುವುದೇಕೆಂದರೆ, ಅದನ್ನು ಮೀರಿ ದೇಶ ಮುಂದುವರಿಯಬೇಕಾಗಿದೆ, ಅದು ಈ ಎಲ್ಲ ಹಳೆಯ ರೂಢಿಗಳಾಚೆ ಹೋಗಬೇಕಾಗಿದೆ. ಪಕ್ಷಗಳಿಲ್ಲದ ಸರಕಾರ, ಅದು ಅದ್ಭುತವಾಗಿರುತ್ತದೆ.

**(15/405–07)** **– ಶ್ರೀಮಾತೆ**

*

## ಪರಸ್ಪರರಲ್ಲಿ ಗೌರವ ಹಾಗೂ ಸಹಿಷ್ಣುತೆ ಇರುವ ಸಂಯುಕ್ತ ರಾಜ್ಯಾಡಳಿತದ ಆವಶ್ಯಕತೆ

ಭಾರತದಲ್ಲಿ ದೇಶ – ಕುರಿತಾದ ವಿಚಾರ, ಎಲ್ಲ ವಿಭಾಗಗಳಲ್ಲಿ, ಸಂಯುಕ್ತ ರಾಜ್ಯಾಡಳಿತ ಎನ್ನುವ ರೀತಿಯಲ್ಲಿ ತನ್ನನ್ನು ತಾನೇ ಸಿದ್ಧಿಸಿಕೊಳ್ಳುತ್ತದೆ. ಭಾರತದಲ್ಲಿ ಮಹಮ್ಮದೀಯ, ಹಿಂದು, ಬುದ್ಧಮತದವ, ಕ್ರಿಶ್ಚಿಯನ್ ಇವರೆಲ್ಲರೂ ಭಾರತ ಏಕಗೊಂಡ ಒಂದು ಶ್ರೇಷ್ಠ ಹಾಗೂ ಬಲಿಷ್ಠ ದೇಶವಾಗುವುದಕ್ಕೆ ಮಹಮ್ಮದೀಯ, ಹಿಂದು, ಬುದ್ಧಮತದವ, ಕ್ರಿಶ್ಚಿಯನ್ ಆಗಿರುವುದರಿಂದ ಯಾವುದೇ ಅರ್ಥದಲ್ಲಿ ನಿಂತುಹೋಗಬೇಕಾಗಿಲ್ಲ. ಸಮಾಜದಲ್ಲಿ ತನ್ನದಲ್ಲದ ಇತರರ ಆದರ್ಶಗಳಿಗೆ ಹಾಗೂ ಸಂಸ್ಥೆಗಳಿಗೆ ಸಹಿಷ್ಣುತೆಯಿಂದಿದ್ದು ತನ್ನದೇ ಆದರ್ಶಗಳಿಗೆ ಹಾಗೂ ಸಂಸ್ಥೆಗಳಿಗೆ ನಿಷ್ಠನಾಗಿರುವುದು ಮತ್ತು ಎಲ್ಲರಿಗೆ ಸಾಮಾನ್ಯವಾದ ನಾಗರಿಕ ಜೀವನ ಹಾಗೂ ಆದರ್ಶಗಳಿಗೆ ಉತ್ಸಾಹದಿಂದ ಪ್ರೇಮ ಹಾಗು ಮಮತೆ ವ್ಯಕ್ತಪಡಿಸುವುದು – ಈ ವಿಷಯಗಳನ್ನು ನಿಜವಾದ ಭಾರತ ದೇಶದ ನಿರ್ಮಾಣಕ್ಕಾಗಿ ನಾವು ಈಗ ಬೆಳೆಸಿಕೊಂಡು ಬರಬೇಕು.

**(6/169)** **– ಶ್ರೀ ಅರವಿಂದರು (ಸಪ್ಟಂಬರ 17, 1906)**

*

## ಭಾರತೀಯ ರೀತಿಯಲ್ಲಿ ಪ್ರಜಾಪ್ರಭುತ್ವದ ಮನೋಧರ್ಮವನ್ನು ಮೈಗೂಡಿಸಿಕೊಳ್ಳುವುದು

ನಮ್ಮ ಸಮಾಜದ ರಚನೆಯಲ್ಲಿ, ನಡೆನುಡಿಗಳಲ್ಲಿ, ಸಂಸ್ಥೆಗಳಲ್ಲಿ ನಮ್ಮ ಮನೋಧರ್ಮಕ್ಕೆ ಶಾಶ್ವತ ಮೌಲ್ಯವಿರುವ ಇಲ್ಲವೆ ಸಹಾಯಕವಾಗುವ ಪ್ರತಿಯೊಂದನ್ನು ಜಾಗರೂಕತೆಯಿಂದ ಅತ್ಯಮೂಲ್ಯವೆಂದು ನಾವು ಶೇಖರಿಸಿಡಬೇಕು. ಆದರೆ ಕಳೆದ ನೂರು ವರ್ಷಗಳಲ್ಲಿ ಸೃಷ್ಟಿಯಾಗಿ ವಿಸ್ತರಿಸಿಕೊಳ್ಳುತ್ತಿರುವ ಮತ್ತು ಆಕ್ರಮಣಕಾರಕ ಮನೋವೃತ್ತಿಯನ್ನು ತಾತ್ಕಾಲಿಕ ರೂಪಗಳಲ್ಲಿ ಇಕ್ಕಟ್ಟಿನಲ್ಲಿರಿಸಬಾರದು. ಅದು ವ್ಯರ್ಥ ಹಾಗೂ ವಿನಾಶಕಾರಕ ಪ್ರಯತ್ನವಾಗುವುದು. ಎರಕವನ್ನು ಮುರಿದು ಹಾಕಲಾಗಿದೆ, ನಾವು ವಿಸ್ತರಿಸಿಕೊಂಡ ಬಾಹ್ಯ ರೂಪರೇಖೆಗಳಲ್ಲಿ ಶ್ರೀಮಂತ ವಾಸ್ತವಾಂಶವಿರುವಂತೆ ಮರು ಎರಕ ಕೊಡಬೇಕು. ನಾವು ಪ್ರಜಾಪ್ರಭುತ್ವದ ಸಂಘಟನೆಯೊಡನೆ ಬಹಳ ಹತ್ತಿರ ಬರಬೇಕಾಗಿದ್ದಿತು, ಅದನ್ನು ನಮ್ಮೊಳಗೆ ಎಳೆದುಕೊಳ್ಳಬೇಕಾಗಿದ್ದಿತು, ಪ್ರಜಾಪ್ರಭುತ್ವದ ಮನೋಧರ್ಮವನ್ನು, ವಿಧಾನಗಳನ್ನು ಮೈಗೂಡಿಸಿಕೊಳ್ಳಬೇಕಾಗಿದ್ದಿತು, ಅದರಿಂದಾಗಿ ಅವುಗಳಾಚೆ ಮೇಲೆ ಹೋಗುವಂತಾಗುವುದು. ನಮ್ಮ ಅರ್ಧ–ಶ್ರೀಮಂತಿಕೆಯ, ಅರ್ಧ–ಪುರೋಹಿತಶಾಹಿಯ ಊಳಿಗ ಮಾನ್ಯ (federal) ಪದ್ಧತಿಯನ್ನು ಮುರಿದು ಹಾಕಬೇಕು, ಅದರಿಂದಾಗಿ ವೇದಾಂತದ ಪ್ರಜಾಪ್ರಭುತ್ವದ ಮನೋಧರ್ಮ ಬಿಡುಗಡೆ ಪಡೆಯುತ್ತದೆ ಮತ್ತು ಅರ್ಧ–ಶ್ರೀಮಂತಿಕೆಯ ಹಾಗೂ ಅರ್ಧ–ಪುರೋಹಿತಶಾಹಿಯ ಸಂಸ್ಕೃತಿಯಿಂದ ಅವಶ್ಯವಾದದ್ದನ್ನು ಮೈಗೂಡಿಸಿಕೊಳ್ಳುವುದರ ಮೂಲಕ ಹಿಂದೂ ಜನತೆಗೆ ಒಂದು ಹೊಸ ಮತ್ತು ಸಾಮರ್ಥ್ಯಪೂರ್ಣ ರಾಜಕೀಯ ಹಾಗೂ ಸಾಮಾಜಿಕ ಸಂಘಟನೆಯನ್ನು ಸೃಷ್ಟಿಸಬಹುದಾಗಿದೆ. ನಾವು ವ್ಯಕ್ತಿವೈಶಿಷ್ಟ್ಯತೆ (individualism) ಯನ್ನೂ, ಐಹಿಕ ವಿಷಯಗಳಿಗೆ ಹೆಚ್ಚು ಗಮನ ಕೊಡುವ ಪ್ರವೃತ್ತಿಯನ್ನು ಚೆಲ್ಲಿಕೊಟ್ಟು ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕು.

**(8/247–48)** – **ಶ್ರೀ ಅರವಿಂದರು** (September 25, 1909)

*

## ಶ್ರೀಸಾಮಾನ್ಯರಲ್ಲಿ ರಾಜಕೀಯ ಭಾವನೆಯನ್ನು ಜಾಗ್ರತಗೊಳಿಸುವುದು

ಸ್ವರಾಜ್ಯದ ಇನ್ನೊಂದು ಅವಶ್ಯವಾದ ನಿಬಂಧನೆ ಎಂದರೆ ನಾವು ಶ್ರೀಸಾಮಾನ್ಯರ ರಾಜಕೀಯ ಭಾವನೆಯನ್ನು ಜಾಗ್ರತಗೊಳಿಸುವುದಾಗಿದೆ.



ಇತಿಹಾಸದಲ್ಲಿ ಒಂದು ಸಮಯವಿತ್ತು, ಆಗ ಆಳಿಕೆ ನಡೆಸುವವರು, ಪಂಡಿತರು, ಅತಿ ಹೆಚ್ಚೆಂದರೆ ವರ್ತಕರು ಹೀಗೆ ಸ್ವಲ್ಪ ವರ್ಗದವರು ಜಾಗರೂಕರಾಗಿರುವುದು ಸಾಕಾಗುತ್ತಿತ್ತು. ಆದರೆ ಆಧುನಿಕ ರಾಷ್ಟ್ರ ಸಂಘಟನೆ ಶ್ರೀಸಾಮಾನ್ಯರು ರಾಜಕೀಯ ಭಾವನೆ ತಂದುಕೊಳ್ಳುವುದರಲ್ಲಿ ಜಾಗರೂಕರಾಗಿರುವುದರ ಮೇಲೆ ಅವಲಂಬಿಸಿದೆ. ಇದು ಲಕ್ಷಾನುಗಟ್ಟಲೆ ಇರುವ ಸಾಮಾನ್ಯ ಜನರ ಹಾಗೂ ಪ್ರಜಾಪ್ರಭುತ್ವದ ಯುಗ. ಆಧುನಿಕ ಯುಗದ ಹೋರಾಟದಲ್ಲಿ ಯಾವುದೇ ರಾಷ್ಟ್ರ ಜೀವಂತ ಉಳಿದುಕೊಂಡು ಬರಬೇಕೆಂದು ಬಯಸಿದರೆ, ಅದು ಸ್ವರಾಜ್ಯವನ್ನು ಮರಳಿ ಪಡೆಯಬೇಕು ಇಲ್ಲವೆ ಸ್ವರಾಜ್ಯವನ್ನು ನಿರ್ವಹಿಸಿಕೊಂಡು ಹೋಗಬೇಕು, ಅದು ಜನರು ಜಾಗರೂಕರಾಗಿರುವಂತೆ ಮಾಡಬೇಕು ಮತ್ತು ಅವರನ್ನು ರಾಷ್ಟ್ರದ ಪ್ರಜ್ಞಾಪೂರ್ಣ ಜೀವನದಲ್ಲಿ ತರಬೇಕು, ಅದರಿಂದಾಗಿ ಪ್ರತಿಯೊಬ್ಬ ಮನುಷ್ಯ, ತಾನು ಬದುಕುತ್ತಿರುವ ರಾಷ್ಟ್ರದಲ್ಲಿ, ರಾಷ್ಟ್ರದ ಸಮೃದ್ಧಿಯೊಂದಿಗೆ ತಾನು ಸಮೃದ್ಧಿ ಪಡೆಯುತ್ತಾನೆ, ರಾಷ್ಟ್ರದ ಸ್ವಾತಂತ್ರ್ಯದಲ್ಲಿ ತಾನು ಮುಕ್ತನಾಗಿರುತ್ತಾನೆ ಎಂಬ ಭಾವನೆ ತಂದುಕೊಳ್ಳುವಂತಾಗಬೇಕು. ಈ ಕಾರ್ಯ ಮತ್ತೆ ಗ್ರಾಮ ಸಮಿತಿಯ ಮೇಲೆ ಅವಲಂಬಿಸಿರುತ್ತದೆ. ಹಳ್ಳಿಯಲ್ಲಿ ಏಕಗೊಂಡ ಜೀವನವನ್ನು ನಾವು ಸಂಘಟಿಸದೆ ಇರುವವರೆಗೆ ಶಿಕ್ಷಿತರ ಹಾಗೂ ಶ್ರೀಸಾಮಾನ್ಯರ ನಡುವಿರುವ ಕಂದರದ ಮೇಲೆ ಸೇತುವೆ ನಿರ್ಮಿಸಲಿಕ್ಕಾಗುವುದಿಲ್ಲ. ಇಲ್ಲಿ ಅವರ ಜೀವನಗಳು ಪರಸ್ಪರರನ್ನು ಭೇಟಿ ಮಾಡುತ್ತವೆ ಮತ್ತು ಅವರು ಏಕಗೊಂಡ ಭಾವನೆ ತಂದುಕೊಳ್ಳುತ್ತಾರೆ. ಕೊನೆಯಲ್ಲಿ ಹೇಳುವುದಾದರೆ ಏಕತೆಯಿಲ್ಲದೆ ಸ್ವರಾಜ್ಯ ಅಸಾಧ್ಯವಾಗಿದೆ. ಆದರೆ ಸ್ವರಾಜ್ಯಕ್ಕಾಗಿ ನಮಗೆ ಅವಶ್ಯವಿರುವ ಏಕತೆ ಅಭಿಪ್ರಾಯದ, ಮಾತುಕತೆಯಲ್ಲಿರುವ, ಬುದ್ಧಿಮತ್ತೆಯಿಂದ ಮನವರಿಕೆ ಮಾಡಿಕೊಂಡಿರುವ ಏಕತೆಯಲ್ಲ, ಆ ಏಕತೆ ಪ್ರೇಮದಿಂದ ಮೇಲೆದ್ದು ಬರುವ ಹೃದಯದ ಏಕತೆ.

**(7/1049–50)** – **ಶ್ರೀ ಅರವಿಂದರು** (April 20, 1908)

*

## ವಿಕೇಂದ್ರೀಕರಣ ಮತ್ತು ಹಳ್ಳಿಯ ಜೀವನ

ಸಂವಿಧಾನಕ್ಕೆ ಪಾರ್ಲಿಮೆಂಟಿರುವ ಪದ್ಧತಿ ಅತ್ಯಂತ ಒಳ್ಳೆಯದೆಂದು ನೀನು ಯೋಚನೆ ಮಾಡುತ್ತಿರುವುದು ಯುರೋಪಿಯನ್‌ರ ವಿಚಾರ. (ಪ್ರಾಚೀನ ಭಾರತದಲ್ಲಿ) ಶ್ರೇಷ್ಠಮಟ್ಟದ ಸಾಮಾಜಿಕ ಸ್ವಾತಂತ್ರ್ಯವಿತ್ತು ಮತ್ತು ಸಾಮಾಜಿಕ ಸಂಸ್ಥೆಗಳು ರಾಷ್ಟ್ರದ ಜೀವನದ ಶಕ್ತಿ ಕೇಂದ್ರಗಳಾಗಿದ್ದವು. ಪಂಗಡದ ಹಕ್ಕನ್ನು ರಾಜ

ನಿರ್ಲಕ್ಷಿಸುವಂತಿರಲಿಲ್ಲ. ಈ ಹಕ್ಕುಗಳ ಮಧ್ಯೆ ಪ್ರವೇಶಿಸಿದಾಗ ಜನರು ತಮ್ಮ ಅಸ್ತಿತ್ವದ ಬಗ್ಗೆ ತೀವ್ರ ಭಾವನೆ ಬರುವಂತೆ ಮಾಡುತ್ತಿದ್ದರು. ಆಗಿನ ಮಾನವ ಕುಲದ ಪ್ರತಿಭೆ ಆ ರೂಪ ವಿಕಾಸಗೊಳ್ಳುವಂತೆ ಮಾಡಿತ್ತು.

ಪಾರ್ಲಿಮೆಂಟ ರೀತಿಯ ಸಂವಿಧಾನವಿರುವಂತೆ ಪ್ರತಿಯೊಂದನ್ನು ಕೇಂದ್ರದ ಅಧೀನಕ್ಕೊಳಪಡಿಸುವಂತೆ ಏಕೆ ಮಾಡಬೇಕು ಎಂಬುದು ನನಗೆ ಅರ್ಥವಾಗುತ್ತಿಲ್ಲ. ನಮ್ಮಲ್ಲಿ ಸಂಸ್ಕೃತಿಯ ಮತ್ತು ಆಧಿಕಾರದ ವಿಭಿನ್ನ, ಅಸಂಖ್ಯಾತ ಕೇಂದ್ರಗಳಿರಬೇಕು, ಅವು ರಾಷ್ಟ್ರೀಯ ಜೀವನದಿಂದ ತುಂಬಿಕೊಂಡಿರಬೇಕು, ದೇಶದ ತುಂಬ ಹರಡಿಕೊಂಡಿರಬೇಕು ಮತ್ತು ತಮ್ಮನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವರಿಗೆ ರಾಜಕೀಯ ಸ್ವಾತಂತ್ರ್ಯವಿರಬೇಕು.

**ಪ್ರಶ್ನೆ :** *(ಶಿಷ್ಯನೊಬ್ಬನಿಂದ) ಹಳ್ಳಿಯ ಸಂಘಟನೆ ಇಂತಹ ಕೇಂದ್ರಗಳನ್ನು ಸೃಷ್ಟಿಸುವುದಕ್ಕೆ ಸಹಾಯ ಮಾಡಬಲ್ಲವು.*

**ಶ್ರೀ ಅ :** ಹೌದು, ಆದರೆ ಈಗ ನಾವು ಪ್ರಯತ್ನ ಮಾಡುತ್ತಿರುವ ಹಾಗೆ ಭಾಷಣ ಮಾಡುವುದರ ಮೂಲಕ, ಧರ್ಮೋಪದೇಶ ಮಾಡುವುದರ ಮೂಲಕ ಅದನ್ನು ಮಾಡಲಾಗುವುದಿಲ್ಲ. ನೀನು ಹಳ್ಳಿಯಲ್ಲಿ ಕಾರ್ಯ ಕೈಕೊಳ್ಳಬೇಕೆಂದಿದ್ದರೆ, ನೀನೊಂದು ಸ್ವಾಭಾವಿಕ ವೃತ್ತಿಯನ್ನು ಆಯ್ದುಕೊಳ್ಳಬೇಕು, ಹಳ್ಳಿಯ ಜನರ ಮಧ್ಯೆ ವಾಸಿಸಲು ಹೋಗಿ ಅಲ್ಲಿ ನೆಲೆಸಬೇಕು ಮತ್ತು ಅವರಲ್ಲೊಬ್ಬನಾಗಬೇಕು. ನೀನು ವ್ಯಾವಹಾರಿಕ ಮನುಷ್ಯನೆಂದು ಅವರು ನಿನ್ನನ್ನು ಕಂಡುಕೊಂಡ ನಂತರ ನಿನ್ನನ್ನು ನಂಬಲು ಪ್ರಾರಂಭಿಸುವರು. ನೀನು ಅಲ್ಲಿಗೆ ಹೋಗಿ ಎಂಟು, ಹತ್ತು ವರ್ಷಗಳ ಕಾಲ ಶ್ರಮದಾಯಕ ಕಾರ್ಯವನ್ನು ಕೈಕೊಂಡ ನಂತರ ನಿನ್ನ ಸ್ಥಾನಮಾನವನ್ನು ಕಂಡುಕೊಳ್ಳುವಿ ಮತ್ತು ನಿನಗೆ ಏನನ್ನಾದರೂ ಮಾಡಲು ಸಾಧ್ಯವಾಗುತ್ತದೆ, ಏಕೆಂದರೆ ಅವರು ನಿನಗೆ ಕಿವಿಗೊಡಲು ತಯಾರಾಗಿರುತ್ತಾರೆ.

ನಮ್ಮ ಜನರಿಗೆ ಪಾರ್ಲಿಮೆಂಟ ಪದ್ಧತಿ ಸರಿಹೋಗುವುದಿಲ್ಲ. ಸಹಜವಾಗಿ ಸದ್ಯದ ದಿನಗಳಲ್ಲಿ ಅವಶ್ಯವಾಗಿ ಪ್ರಾಚೀನ ಭಾರತದಲ್ಲಿದ್ದ ಅವೇ ಹಳೆಯ ರೂಪಗಳು ಇರಬೇಕೆಂದಿಲ್ಲ. ಆದರೆ ನೀನು ಉತ್ಕ್ರಾಂತಿಯ ಜಾಡು ಹಿಡಿದು, ಮಾನವ ಕುಲದ ಆ ಪ್ರತಿಭೆಯ ಪ್ರವೃತ್ತಿಯನ್ನು ಅನುಸರಿಸಬಹುದು.

(ನೆನಪಿನಿಂದ ಬರೆದಿಟ್ಟದ್ದು) (April 7, 1926) **– ಶ್ರೀ ಅರವಿಂದರು**

*



## ರಾಷ್ಟ್ರೀಯ ವಿಚಾರದೊಂದಿಗೆ ಹಳ್ಳಿಯ ಜೀವನವನ್ನು ಪುನರ್ಸಂಘಟಿಸುವುದು

ನಾವು ಈ ಸ್ವ–ಸಂರಕ್ಷಣೆಯ ಹುಟ್ಟುಗುಣದಡಿಯಲ್ಲಿ ನಮ್ಮ ದೃಷ್ಟಿಯನ್ನು ಮತ್ತೆ ಹಳ್ಳಿಯತ್ತ ಹೊರಳಿಸುತ್ತಿದ್ದೇವೆ ಮತ್ತು ನಮ್ಮ ಕಾರ್ಯಕ್ರಮದ ಒಂದು ಭಾಗ ಹಳ್ಳಿಯ ಸಂಘಟನೆಯನ್ನು ಪುನರ್ಸೃಷ್ಟಿಸುವುದಾಗಿದೆ. ಹಾಗೆ ಮಾಡುವಾಗ ರಾಷ್ಟ್ರೀಯ ಅಂಟಿಕೊಂಡಿರುವಿಕೆ(cohesion)ಗೆ ಹಳ್ಳಿಯನ್ನು ಸಂಘಟಿಸಿದ್ದು ಗಂಭೀರ ಅಡೆತಡೆಯಾಗಬಹುದೆಂಬುದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ರಾಷ್ಟ್ರೀಯ ಹಾಗೂ ಭಾರತದ ಪರವಾಗಿರುವ ಸ್ವರಾಜ್ಯ ಕುರಿತಾದ ಮಹೋನ್ನತ ಆದರ್ಶದಿಂದ ನಾವು ವಿಚಲಿತರಾಗಲು ಯಾವುದಕ್ಕೂ ಅನುವು ಮಾಡಿಕೊಡಬಾರದು. ಇದು ಯಾವುದೇ ಬಗೆಯ ಪರದೇಶದ ವಿಲಕ್ಷಣವಾದ ಆದರ್ಶವಲ್ಲ. ಅದು ಶ್ರೇಷ್ಠ ಕೇಂದ್ರಗಾಮಿ ಪ್ರವೃತ್ತಿಯ ನೆರವೇರಿಕೆ ಕಂಡುಕೊಳ್ಳುವುದಕ್ಕಾಗಿರುವ ಪ್ರಜ್ಞಾಪೂರ್ಣ ಪ್ರಯತ್ನ ಮಾತ್ರ. ಭಾರತದ ಇತಿಹಾಸದಲ್ಲಿ ಆ ಪ್ರವೃತ್ತಿ ಮಹತ್ತೋದ್ದೇಶವಿದ್ದ ಲಕ್ಷಾನುವರ್ಷಗಳ ಕಾಲ ವ್ಯಾಪಿಸಿಕೊಂಡಿತ್ತು. ಅದು ಶ್ರೀಕೃಷ್ಣ ಪ್ರಾರಂಭಿಸಿದ ಕಾರ್ಯವನ್ನು ಪೂರ್ತಿಗೊಳಿಸುವುದಾಗಿತ್ತು. ಅದನ್ನು ಚಂದ್ರಗುಪ್ತ, ಅಶೋಕ ಮತ್ತು ಗುಪ್ತ ವಂಶದ ರಾಜರು ಮುಂದುವರಿಸಿಕೊಂಡು ಹೋದರು. ಅಕ್ಬರ ಅದನ್ನು ಬಹುಮಟ್ಟಿಗೆ ಸಿದ್ಧಿಸಿಕೊಳ್ಳುವಂತೆ ಮಾಡಿದ. ಅದಕ್ಕಾಗಿ ಶಿವಾಜಿ ಜನ್ಮ ತಾಳಿದ, ಬಾಜಿರಾವ ಹೋರಾಡಿದ, ಯೋಜನೆ ರೂಪಿಸಿದ. ನಮ್ಮ ಹಳ್ಳಿಗಳನ್ನು ಸಂಘಟಿಸುವುದು ಅತ್ಯಗತ್ಯವಾದ ಕಾರ್ಯವಾಗಿದ್ದು ಅದರಲ್ಲಿ ನಾವು ಕೂಡಲೆ ನಮ್ಮನ್ನು ತೊಡಗಿಸಿಕೊಳ್ಳಬೇಕು, ಆದರೆ ನಾವು ಅವುಗಳನ್ನು ಸಂಘಟಿಸುವಾಗ ಅವು ಒಂದೇ ದೇಶದ ಏಕತೆಯ ಅಪರಿಪೂರ್ಣ ಭಾಗಗಳು ಮತ್ತು ಪ್ರತಿಯೊಂದು ಹೊಸ ಹಂತದಲ್ಲೂ ಮೊದಲು ಜಿಲ್ಲೆಯ ಸಹಕಾರದ ಮೇಲೆ, ಎರಡನೆಯದಾಗಿ ಪ್ರಾಂತದ ಮತ್ತು ಕೊನೆಗೆ ರಾಷ್ಟ್ರದ ಸಹಕಾರದ ಮೇಲೆ ಅವಲಂಬಿತವಾಗಿವೆ ಎಂಬ ಭಾವನೆ ಅವುಗಳಿಗೆ ಬರುವಂತೆ ಲಕ್ಷ್ಯಗೊಟ್ಟು ಮಾಡಬೇಕು. ಸ್ವತಂತ್ರವಾಗಿರುವ ಹಳ್ಳಿಯ ಇಲ್ಲವೆ ಹಳ್ಳಿಗಳ ಗುಂಪಿನ ಅಸ್ತಿತ್ವವಿರುವ ದಿನ ಹೊರಟುಹೋಗಿದೆ, ಮತ್ತು ಅದು ಪುನರುಜ್ಜೀವನಗೊಳ್ಳುವಂತೆ ಮಾಡಬಾರದು. ರಾಷ್ಟ್ರ ತನ್ನ ನೆರವೇರಿಕೆಯ ಗಳಿಗೆಯನ್ನು ಒತ್ತಾಯದಿಂದ ಬೇಡುತ್ತದೆ, ಹಳ್ಳಿಯ ಜೀವನವನ್ನು ಹಳ್ಳಿಗಾಡಿನ ಜನ ಸಮೂಹವನ್ನು ಮಹೋನ್ನತ, ಏಕೈಕ ಮತ್ತು ಒತ್ತಾಗಿರುವ ಪ್ರಜಾಪ್ರಭುತ್ವದ ರಾಷ್ಟ್ರೀಯತ್ವವನ್ನು ಅರಸುತ್ತದೆ.

**(7/909–10)** **– ಶ್ರೀ ಅರವಿಂದರು** (March 7, 1908)

*

## ಹಳ್ಳಿ ಮತ್ತು ಪ್ರೇಮದ ಕಾರಂಜಿಗಳು ಬತ್ತಿಹೋಗುವಿಕೆ

ಆದರೆ ಈಗ ನಾವು ಪ್ರತಿಯೊಂದಕ್ಕಾಗಿ ವಿದೇಶೀ ಮೂಲವನ್ನು ನೋಡುತ್ತೇವೆ, ನಮ್ಮ ದೇಶದ ಜನರಿಗಾಗಿ ಈ ಪ್ರೇಮ, ಪರಸ್ಪರರಿಗೆ ಸಹಾಯ ಮಾಡುವ ಈ ರೂಢಿ, ಪರಸ್ಪರರಲ್ಲಿರಬೇಕಾದ ಕರ್ತವ್ಯದ ಭಾವನೆ ಇದೆಲ್ಲ ಮಾಯವಾಗಿದೆ. ಪ್ರತಿಯೊಬ್ಬ ಮನುಷ್ಯ ತನಗಾಗಿ ಇರುತ್ತಾನೆ ಮತ್ತು ನಮ್ಮ ಸಹೋದರರಿಗೆ ಏನನ್ನಾದರೂ ಕೈಕೊಳ್ಳುವುದಿದ್ದರೆ ಅದನ್ನು ಮಾಡುವುದಕ್ಕಾಗಿ ಸರಕಾರ ಇದೆ, ಅದು ನಮಗೆ ಸಂಬಂಧಿಸಿದ ವಿಷಯವಲ್ಲ. ಪರಸ್ಪರರಿಗಾಗಿ ಇರಬೇಕಾದ ವಾತ್ಸಲ್ಯದ ಕಾರಂಜಿಗಳು ಬತ್ತಿಹೋಗುವುದನ್ನು ಹೆಚ್ಚಿನ ರೀತಿಯಲ್ಲಿ ತೆಗೆದು ಹಾಕಬೇಕಾದುದು ಅವಶ್ಯವಾಗಿದೆ ಮತ್ತು ಹೆಚ್ಚು ಒಳ್ಳೆಯ ಸ್ಥಿತಿಗಾಗಿ ಮತ್ತೆ ಗ್ರಾಮ ಸಮಿತಿ ಇರುವುದು ಮೊದಲ ನಿಬಂಧನೆ. ಅದು ನಮ್ಮ ಜೀವನದಲ್ಲಿರುವ ಉದಾಸೀನತೆಯನ್ನು, ಪ್ರತ್ಯೇಕತೆಯನ್ನು ನಾಶಮಾಡುತ್ತದೆ ಮತ್ತು ನಮಗೆ ಸಮುದಾಯದ ಭಾವನೆಯನ್ನು, ಪರಸ್ಪರರಿಗೆ ಸಹಾಯ ಮಾಡುವುದನ್ನು, ಉಪಕಾರ ಮಾಡುವುದನ್ನು ಮತ್ತೆ ತಂದುಕೊಡುತ್ತದೆ. ನೀರಿನ ಕೊರತೆ ಇರುವ ವಿಷಯವನ್ನು ಕೈಗೆತ್ತಿಕೊಂಡು ಅದನ್ನು ನೀಗಿಸುತ್ತದೆ. ಅದು ಪಂಚಾಯಿತಿ ನ್ಯಾಯ ಮಂಡಲಗಳನ್ನು ಜನರೆದುರಿಗೆ ಇರಿಸುತ್ತದೆ ಮತ್ತು ನಮ್ಮ ಕುಟುಂಬದಲ್ಲಿರುವ ಹಗೆತನ, ವ್ಯಕ್ತಿಗತ ತಕರಾರು, ಇವುಗಳನ್ನು ವಾಸಿಮಾಡುತ್ತದೆ, ಕಳೆದುಹೋದ ಭ್ರಾತೃತ್ವದ ಭಾವನೆಯನ್ನು ನವೀಕರಿಸುತ್ತದೆ. ರೋಗ ಪೀಡಿತರಾದವರನ್ನು ಹುಡುಕಿ ತೆಗೆದು ಅವರಿಗೆ ಔಷಧೋಪಚಾರದ ವ್ಯವಸ್ಥೆ ಮಾಡುತ್ತದೆ. ಬರಗಾಲದ ಪರಿಹಾರಕ್ಕೆ ಸಂಘಟನೆಗೆ ಅವಶ್ಯವಿರುವುದನ್ನು ಕೊಡುತ್ತದೆ, ರಕ್ಷಣೆ ನೀಡುತ್ತದೆ ಮತ್ತು ಎಲ್ಲರೂ ಹೀಗೆ ಎಲ್ಲರ ಹಿತಕ್ಕಾಗಿ ಕಾರ್ಯಮಾಡಲು ತೊಡಗಿದಾಗ ಹಳೆಯ ಕಾಲದ ನಮ್ಮ ಏಕತೆಯನ್ನು ಮರಳಿ ಪಡೆಯುತ್ತೇವೆ. ಜನರ ಹೃದಯಗಳನ್ನು ಒಟ್ಟಿಗೆ ಬಂಧಿಸುವುದರಲ್ಲಿ ಸ್ವರಾಜ್ಯದ ಆಧಾರವನ್ನು ಸ್ಥಾಪಿಸಲಾಗಿರುತ್ತದೆ.

**(7/1050–51)** – **ಶ್ರೀ ಅರವಿಂದರು** (April 20, 1908)

*

## ಬಡತನದ ಎರಡು ಮುಖಗಳು

ಈ ದೇಶದಲ್ಲಿ ಬಡವರ್ಗದವರ ಪರಿಸ್ಥಿತಿ ಇಲ್ಲಿಯವರೆಗೆ ನಿರ್ಲಕ್ಷ್ಯಕ್ಕೊಳಗಾದ ವಿಷಯವಾಗಿದೆ, ಆದರೆ ಇನ್ನು ಮುಂದೆ, ಭಗವಂತನ ಆಶೀರ್ವಾದ ನಮ್ಮ ಚಳವಳಿಯೊಂದಿಗೆ ಉಳಿದುಕೊಳ್ಳಬೇಕೆಂದಿದ್ದರೆ, ಅದನ್ನು ನಿರ್ಲಕ್ಷಿಸಲಿಕ್ಕಾಗದು.



ಶ್ರೀಸಾಮಾನ್ಯರ ಹೆಚ್ಚುತ್ತಿರುವ ಬಡತನ ಅಸಂಖ್ಯಾತ ಕರಪತ್ರಗಳಲ್ಲಿದ್ದ, ಭಾಷಣಗಳಲ್ಲಿದ್ದ, ವರ್ತಮಾನ ಪತ್ರಿಕೆಗಳಲ್ಲಿ ವರದಿಯಾದ ವಿಷಯವಾಗಿದೆ. ಆದರೆ ಬಡತನದ ಸಮಸ್ಯೆ ಇದೆ ಎಂದು ನಾವು ತೋರಿಸಿಕೊಟ್ಟ ನಂತರ ನಮ್ಮ ಕರ್ತವ್ಯ ಮುಗಿಯಿತು ಎಂದು ಭಾವಿಸುವ ಸಾಧ್ಯತೆ ಇದೆ, ಮತ್ತು ನಾವು ಅದಕ್ಕೆ ಪರಿಹಾರವನ್ನು ಭವಿಷ್ಯತ್ತಿಗೆ ಬಿಟ್ಟುಕೊಡುತ್ತೇವೆ ಮತ್ತು ಪರಿಹಾರ ಬರುವ ವೇಳೆಗೆ ಶ್ರೀಸಾಮಾನ್ಯರು ಎಂತಹ ಕ್ಷೀಣಿಸಿದ ಸ್ಥಿತಿಯಲ್ಲಿ ಮುಳುಗಿ ಹೋಗಿರುತ್ತಾರೆಂದರೆ ಆ ಸ್ಥಿತಿಯಿಂದ ಹೊರಬರಲು ಹಲವಾರು ದಶಕಗಳೇ ಬೇಕಾಗುತ್ತವೆ. ಈ ಬಡತನದ ಆರ್ಥಿಕ ಬದಿಯೊಂದನ್ನಷ್ಟೇ ವ್ಯವಹಾರದಲ್ಲಿ ಗಮನಿಸುವ ರೂಢಿ ನಮ್ಮಲ್ಲಿದೆ, ಆದರೆ ಅದಕ್ಕೆ ನೈತಿಕ ಬದಿಯೊಂದಿದೆ, ಅದು ಇನ್ನೂ ಹೆಚ್ಚು ಮಹತ್ವದ್ದು. ಭಾರತೀಯ ರೈತಾಪಿ ಜನರಲ್ಲಿ , ಕಡಿಮೆ ಸುಸಂಸ್ಕೃತರಾದ ಯುರೋಪಿಯನ್ ಸಾಮಾನ್ಯ ಜನರಲ್ಲಿ ಕಂಡುಬರದ ಉಚ್ಚಮಟ್ಟದ ಧರ್ಮಶ್ರದ್ಧೆ, ಮೃದು ಸ್ವಭಾವ, ಸಂಯಮ, ಪರಿಶುದ್ಧತೆ, ಮಿತವ್ಯಯ, ಸಹಜ ಬುದ್ಧಿಮತ್ತೆ ಇವೆಲ್ಲ ಇರುತ್ತವೆ. ಅವರು ಈಗ ದೃಷ್ಟಾಂತಕ್ಕೆ ದೊರಕದಷ್ಟು ಕ್ರೌರ್ಯವಿರುವ ದಬ್ಬಾಳಿಕೆಗೆ ಒಳಗಾಗಿದ್ದಾರೆ, ಸೆರೆ ಅಂಗಡಿಗಳತ್ತ ಆಕರ್ಷಿತರಾಗಿದ್ದಾರೆ, ಅಂತಹ ಅಂಗಡಿಗಳನ್ನು ಉಪಕಾರಿ ಸರಕಾರ ಧಾರಾಳವಾಗಿ ಒದಗಿಸುತ್ತದೆ. ಅನೈತಿಕ ಶ್ರೀಮಂತ ವರ್ಗದವರ ಉದಾಹರಣೆಯಿಂದ ಅವರು ಪಶುಪ್ರಾಯರಾಗುತ್ತಿದ್ದಾರೆ. ಕ್ರಮೇಣ ಅವರದೇ ಸ್ವೇಚ್ಛಾಚಾರ, ಕ್ರೌರ್ಯಗಳತ್ತ ಎಳೆತಕ್ಕೊಳಗಾಗಿದ್ದಾರೆ. ಈ ಅವನತಿ ಹೆದರಿಕೆ ಹುಟ್ಟಿಸುವಷ್ಟು ತೀವ್ರಗತಿಯಿಂದ ಮುಂದುವರಿಯುತ್ತಿದೆ. ದೇಶದ ಕೆಲವು ಭಾಗಗಳಲ್ಲಿ ಅದೆಷ್ಟರಮಟ್ಟಿಗೆ ಆಗಿದೆಯೆಂದರೆ ಪೂರ್ವಸ್ಥಿತಿಗೆ ಬರುವುದು ಅಸಾಧ್ಯವೆಂದು ತೋರಿಬರುತ್ತದೆ. ನಾವು ಕೇಳಿದ ಪ್ರಕಾರ ಕೆಲವು ಜಿಲ್ಲೆಗಳಲ್ಲಿ ರೈತಾಪಿ ಜನರು ಎಷ್ಟೊಂದು ಬಡತನಕ್ಕೀಡಾಗಿದ್ದಾರೆ ಎಂದರೆ, ಜಮೀನುದಾರರು, ತೋಟದ ಮಾಲಿಕರು (planters), ಪೋಲೀಸರು ಬಲವಂತವಾಗಿ ವಸೂಲಿ ಮಾಡುವುದರಿಂದಾಗಿ ಆ ರೈತಾಪಿ ಜನರಲ್ಲಿರುವ ದಷ್ಟಪುಷ್ಟ ಜನರು ಜೀವನಕ್ಕಾಗಿ ಸಾಧನಗಳೆಂದು ರಾಜಮಾರ್ಗಗಳಲ್ಲಿ ದರೋಡೆ, ಕಳ್ಳತನ ಮಾಡುವುದು ಏಕೈಕ ಮಾರ್ಗವೆಂದು ಅದಕ್ಕೆ ಮೊರೆ ಹೋಗಿದ್ದಾರೆ. ಇಪ್ಪತ್ತೈದು ವರ್ಷಗಳ ಹಿಂದೆ ಇರದಿದ್ದ ಸೆರೆ ಅಂಗಡಿಗಳು, ವೇಶ್ಯಾ ಗೃಹಗಳು, ಸಂಸ್ಥೆಗಳು ಇವುಗಳ ಪ್ರಭುತ್ವಕ್ಕೊಳಗಾದ ಅತ್ಯಂತ ಬಡತನದಲ್ಲಿರುವ ಹಳ್ಳಿಗಳ ಬಗ್ಗೆ ನಾವು ಕೇಳಿದ್ದೇವೆ. ಇಂತಹ ದುಷ್ಟತನವನ್ನು ದೂರ ಮಾಡಲು ಏನನ್ನಾದರೂ ಕೈಕೊಳ್ಳದಿದ್ದರೆ ಇಂತಹದಿರುವ ಅತ್ಯಂತ ಕೆಟ್ಟ ಜಿಲ್ಲೆಗಳ ಪರಿಸ್ಥಿತಿಗಳು ಸರ್ವಸಾಮಾನ್ಯವಾಗುವ ಪ್ರವೃತ್ತಿ ಹೊಂದುತ್ತವೆ, ಅದು ಭಾರತದ ಆತ್ಮವನ್ನು ತನ್ನ ಕದಡಿಹೋದ

ಪ್ರವಾಹದಲ್ಲಿ ಗುಡಿಸಿಕೊಂಡು ಹೋಗುತ್ತದೆ ಮತ್ತು ಮಾನವ ಸ್ವಭಾವದಲ್ಲಿರುವ, ಅತಿ ಕೆಟ್ಟದಾಗಿರುವ ಆಕಾರರಹಿತ ಅತಿಘೋರತೆ(monstrosity)ಯನ್ನು ಮಾತ್ರ ಉಳಿಸುತ್ತದೆ.

ಶಿಕ್ಷಣ ಪಡೆದ ವರ್ಗಗಳು ಈಗ ಪುನರುಜ್ಜೀವನದ ಭರವಸೆಯನ್ನು ಇಟ್ಟುಕೊಂಡ ಭಾಂಡಾರಿಗಳಾಗಿದ್ದಾರೆ. ಅವರಲ್ಲಿ ಚೈತನ್ಯ ಪ್ರವೇಶಿಸಿದೆ, ಶ್ರೀಸಾಮಾನ್ಯರು ಮಾರ್ಗದರ್ಶನಕ್ಕಾಗಿ ಅವರತ್ತ ನೋಡುತ್ತಾರೆ. ತುಳಿತಕ್ಕೊಳಗಾದ ನಮ್ಮ ದೇಶ ಬಾಂಧವರ ಜೀವನದಲ್ಲಿ ಭರವಸೆ, ಬಲ ಮತ್ತು ಪ್ರಕಾಶ ಇವುಗಳನ್ನು ತರುವ ಅವರ ಕರ್ತವ್ಯ ಅವರ ಮಣಿಹದಷ್ಟೇ ಯೋಗ್ಯವಾಗಿದೆ. ನಾವು ಇಲ್ಲಿಯವರೆಗೆ 'ಸ್ವದೇಶಿ' ಜನರನ್ನು ರಕ್ಷಿಸುವ ಆರ್ಥಿಕ ಸಾಧನವೆಂದು ಅದರಲ್ಲಿ ಮಗ್ನರಾಗಿದ್ದೇವೆ. ಈಗ ನಾವು ನೈತಿಕಮಟ್ಟವನ್ನು ಪುನರುಜ್ಜೀವನಗೊಳಿಸುವ ಕಾರ್ಯದಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕು. ಅದಕ್ಕಾಗಿ ನಾವು ದಯೆ, ನ್ಯಾಯಪರತೆ, ನಿಸ್ವಾರ್ಥ, ಸಹಾಯ ನೀಡುವ ಮನೋಭಾವ, ಮತ್ತು ಜನರಿಗಾಗಿ ತಾಳ್ಮೆಯಿಂದ ಕಾರ್ಯ ಕೈಕೊಳ್ಳುವಿಕೆ ಇವುಗಳಿರುವ ಉದಾಹರಣೆಯಾಗಬೇಕು.

**(7/985–86)** **– ಶ್ರೀ ಅರವಿಂದರು**

*

## ಮಧ್ಯಮ ವರ್ಗದವರನ್ನು ಪರಿವರ್ತಿಸಬೇಕಾದ ಆವಶ್ಯಕತೆ

ಈಗ ಭಾರತವನ್ನು ಮಧ್ಯಮ ವರ್ಗದವರು ಮುನ್ನಡೆಸುತ್ತಿದ್ದಾರೆ, ಅದು ಒಳ್ಳೆಯದಕ್ಕಾಗಿದೆಯೋ ಅಥವಾ ಕೆಟ್ಟದಕ್ಕಾಗಿದೆಯೋ ತಿಳಿಯದು. ಮತ್ತು ರಕ್ಷಣೆ ಮಾಡುವ ಯಾವುದೇ ಬಗೆಯ ಪ್ರಚೋದನೆ ರಾಷ್ಟ್ರಕ್ಕೆ ಬರುತ್ತಿದ್ದರೆ, ಅದು ಮಧ್ಯಮ ವರ್ಗದಿಂದ ಬರುತ್ತದೆ, ಪ್ರಾರಂಭಗೊಂಡ ಯಾವುದೇ ಬಗೆಯ ಮೇಲ್ಮುಖ ಚಲನೆಯನ್ನು ಮಧ್ಯಮ ವರ್ಗ ಮುನ್ನಡೆಸಿಕೊಂಡು ಹೋಗಬೇಕು. ಅದು ಸಂಭವಿಸಬೇಕಾದರೆ ಮಧ್ಯಮ ವರ್ಗ ಪವಾಡವೆನ್ನುವ ರೀತಿಯಲ್ಲಿ ರೂಪಪರಿವರ್ತನೆ ಪಡೆಯಬೇಕು ಮತ್ತು ಅದನ್ನು ಅದರ ಮಟ್ಟದಿಂದ ಮೇಲಕ್ಕೆತ್ತಬೇಕು. ಮಧ್ಯಮ ವರ್ಗದ ನಾಗರಿಕನನ್ನು ಪ್ರಸವಿಸುವ ಸ್ವಾಭಾವಿಕ ಕ್ಷೇತ್ರ ಮಧ್ಯಮ ವರ್ಗದಲ್ಲಿ ಜಪಾನಿನ ಸೈನಿಕ ವರ್ಗ(Samurai)ಕ್ಕೆ ಸೇರಿದಂತಹ ಕ್ಷತ್ರಿಯನನ್ನು ಪ್ರಸವಿಸುವ ಕ್ಷೇತ್ರವಾಗಬೇಕು. ಅದು ಮಧ್ಯಮ ವರ್ಗವಾಗಿರುವುದು ನಿಂತು ಹೋಗಬೇಕು, ಮತ್ತು ಶ್ರೀಮಂತ ವರ್ಗವಾಗುವ ತಿರುವು ಪಡೆಯಬೇಕು. ಆ ಶ್ರೀಮಂತಿಕೆ ಹುಟ್ಟಿನಿಂದ, ಬಹಳಷ್ಟು ಭೂಪ್ರದೇಶದ ಮೇಲೆ ಒಡೆತನ ಹೊಂದಿರುವುದರಿಂದ, ಬುದ್ಧಿಮತ್ತೆಯಿಂದ, ಸಂಪತ್ತು ಇಲ್ಲವೆ ಉದ್ದಿಮೆಯಿಂದ



ಬಂದಂತಹದಲ್ಲ, ಆದರೆ ಚಾರಿತ್ರ್ಯದಿಂದ, ಕ್ರಿಯೆಯಿಂದ ಬಂದಂತಹದಾಗಿರಬೇಕು. ಭಾರತ ಸ್ವಾರ್ಥತ್ಯಾಗ, ಧೈರ್ಯ ಮತ್ತು ಉಚ್ಚ ಅಭೀಪ್ಸೆಗಳಿರುವ ತನ್ನ ಸಹಜ ಶಕ್ತಿಯನ್ನು ಮರಳಿ ಪಡೆಯಬೇಕು. ಇಂತಹ ಪರಿವರ್ತನೆಯನ್ನು ತಂದುಕೊಡುವ ಕಾರ್ಯವನ್ನು ಹೊಸ ರಾಷ್ಟ್ರೀಯತೆ ತನ್ನ ಮುಂದೆ ಇರಿಸಿಕೊಂಡಿದೆ. ಇದು ಅದರ ಎಲ್ಲ ಉತ್ಸಾಹ, ಕೆಚ್ಚೆದೆ ಮತ್ತು ಕೋಲಾಹಲಗಳ ಹಿಂದಿದೆ ಮತ್ತು ಬಂಗಾಲದ ಚಳುವಳಿಯಲ್ಲಿ ತೊಡಗಿಕೊಂಡಿದ್ದ ಎಲ್ಲ ಜಾಣ ಜನರನ್ನು, ಹಿರಿಯರನ್ನು ಆಘಾತಕ್ಕೊಳಪಡಿಸಿದುದಕ್ಕೆ ವಿವರಣೆ ನೀಡುತ್ತದೆ. ಹೊಸ ರಾಷ್ಟ್ರೀಯತೆ ಒಂದು ಪಂಥ, ಆದರೆ ಅದು ಒಂದು ಪಂಥಕ್ಕಿಂತ ಹೆಚ್ಚಿನದಾಗಿದೆ, ಅದೊಂದು ವಿಧಾನ, ಆದರೆ ವಿಧಾನಕ್ಕಿಂತಲೂ ಅದು ಹೆಚ್ಚಿನದಾಗಿದೆ. ಹೊಸ ರಾಷ್ಟ್ರೀಯತೆ ಹತ್ತೊಂಬತ್ತನೆಯ ಶತಮಾನದ ಭಾರತೀಯನನ್ನು ಆಧ್ಯಾತ್ಮಿಕವಾಗಿ ಪರಿವರ್ತನೆ ಗೊಳಿಸುವ ಒಂದು ಪ್ರಯತ್ನ, ಅದು ಮಧ್ಯಮ ವರ್ಗದವನನ್ನು ಮತ್ತು ಅವನ ಎಲ್ಲ ವಿಚಾರಗಳನ್ನು, ಕಾರ್ಯ ಕೈಕೊಳ್ಳುವ ರೀತಿಗಳನ್ನು ವಿಸರ್ಜನ ಮಾಡುವಿಕೆ, ಇಲ್ಲವೆ ಕನಿಷ್ಠ ಪಕ್ಷ ಅದನ್ನೆಲ್ಲ ಅಮಾನತ್ತಿನಲ್ಲಿ ಇಡುವುದಾಗಿದೆ. ಅದು ಅಸಾಧ್ಯವೆನಿಸುವಂತಹದನ್ನು, ವಿಪರೀತವಾದದ್ದನ್ನು ಧೈರ್ಯದಿಂದ ಕೈಕೊಳ್ಳುವ ಜನರಿಗೆ, ನಂಬಿಕೆಯಿದ್ದ ಜನರಿಗೆ, ಪ್ರವಾದಿಗಳಿಗೆ, ಕಷ್ಟ ನಿಷ್ಠುರಗಳನ್ನು ಅನುಭವಿಸುವವನಿಗೆ, ಧರ್ಮಯುದ್ಧ ಮಾಡುವವನಿಗೆ, ಕ್ರಾಂತಿಕಾರಿಗಳಿಗೆ, ಭಂಡಧೈರ್ಯದ ಸಾಹಸೋದ್ಯಮಿಗಳಿಗೆ, ಹತಾಶೆಯಿಂದ ಕಾರ್ಯ ಕೈಕೊಳ್ಳುವವರಿಗೆ, ಕ್ರಾಂತಿಗಳನ್ನು ಹುಟ್ಟುಹಾಕುವವರಿಗೆ ಕರೆಕೊಡುವುದಾಗಿದೆ. ಅದು ಕ್ಷತ್ರಿಯರಿಂದಾಗಬೇಕಾದ ಭಾರತದ ಪುನರ್ಜನ್ಮ.

**(7/1107–8)** **– ಶ್ರೀ ಅರವಿಂದರು** (1907-08)

*

## ಔದ್ಯೋಗಿಕ ಹಾಗೂ ಸಾಮಾಜಿಕ ಜೀವನವನ್ನು ಪುನರ್ರಚಿಸುವುದು

ಪುನರುಜ್ಜೀವನಗೊಳಿಸುವ ಈ ಶ್ರೇಷ್ಠ ಶಕ್ತಿಯನ್ನು ನಮ್ಮ ಜೀವನದ ಯಾವ ವಿಭಾಗವೂ ತಪ್ಪಿಸಿಕೊಳ್ಳಲಾರದು. ನಮ್ಮ ಸಮಾಜ, ಕ್ರಾಂತಿ ಎನಿಸುವ ಮಟ್ಟಿಗಿನ ಪುನರ್ರಚನೆಗೆ ಒಳಗಾಗಬೇಕಾಗಿದೆ ಎಂಬುದರಲ್ಲಿ ಕಿಂಚಿತ್ತೂ ಸಂಶಯವಿಲ್ಲ. ಆದರೆ ಅದು ಸಾಧಾರಣ ಸುಧಾರಕನೊಬ್ಬ ಕುರುಡಾಗಿ ಭರವಸೆ ತಂದುಕೊಂಡಿರುವ ಯುರೋಪೀಕರಣ ಹೊಂದಿದ ರೀತಿಯದಲ್ಲ, ಆದರೆ ಆ ಪುನರ್ರಚನೆ ಸಮಾಜದಲ್ಲಿ ಹೆಚ್ಚು ಶ್ರೇಷ್ಠವಾದ, ಪರಿಪೂರ್ಣವಾದ ರಾಷ್ಟ್ರೀಯ ಮನೋಧರ್ಮವನ್ನು ಸಿದ್ಧಿಸಿಕೊಳ್ಳುವುದಾಗಿದೆ. ವೈಯಕ್ತಿಕ ಸ್ವಾರ್ಥಸಾಧನೆಯಲ್ಲ

ಮತ್ತು ಪರಸ್ಪರರನ್ನು ಹಾಳುಮಾಡುವ ಹೋರಾಟವಲ್ಲ, ಆದರೆ ಪ್ರೇಮ ಮತ್ತು ವ್ಯಕ್ತಿಗಳನ್ನು ಒಟ್ಟುಗೂಡಿಸುವ ಏಕೈಕ, ಪ್ರತ್ಯೇಕಿಸಲಾಗದ ಜೀವನ ರಾಷ್ಟ್ರೀಯ ಪ್ರಚೋದನೆಯಾಗಿದೆ. ರಾಷ್ಟ್ರೀಯ ಪ್ರಚೋದನೆ, ಗತಕಾಲದಲ್ಲಿ, ತನ್ನ ನೆರವೇರಿಕೆಯನ್ನು ಅವಿಭಕ್ತ ಕುಟುಂಬದ ರಕ್ತ ಸಂಬಂಧದ ಬಂಧನದಲ್ಲಿ, ಭಾಗಶಃ ಸಮಾಜವಾದವಿರುವ ಹಳ್ಳಿಯ ಪದ್ಧತಿಯಲ್ಲಿ, ಜನ್ಮದಿಂದಾಗಿ ಹಾಗೂ ಗೌರವದ ಸಂಸ್ಥೆಯೆಂದಾಗಿ ಜಾತಿ ಪದ್ಧತಿಯಲ್ಲಿ ಕಂಡುಕೊಂಡಿತ್ತು. ಭವಿಷ್ಯತ್ತಿನಲ್ಲಿ ಹೆಚ್ಚು ಪರಿಪೂರ್ಣವಾದ ಹಾಗೂ ಆಧ್ಯಾತ್ಮಿಕವಾದ ಬಂಧನವನ್ನು ಅದು ಅರಸಬಹುದು. ವ್ಯಾಪಾರದ ಕ್ಷೇತ್ರದಲ್ಲಿಯೂ ಕೂಡ ನಾವು ಯುರೋಪಿಯನ್ ಮನೋಧರ್ಮವನ್ನು ಮತ್ತು ಮಾದರಿಯನ್ನು, ವ್ಯಕ್ತಿವಿಶಿಷ್ಟ ಸ್ಪರ್ಧಾತ್ಮಕ ಸ್ವಾರ್ಥವನ್ನು, ಕೂಡು ಬಂಡವಾಳ ಸಂಸ್ಥೆ (joint-stock company) ಯಲ್ಲಿರುವ ಆಸಕ್ತಿಯ ಬಂಧನವನ್ನು ಇಲ್ಲವೆ ಅತ್ಯಂತ ಕೆಟ್ಟ ಹಾಗೂ ಅಪಾಯಕಾರಿ ಸಹಕಾರಿ ಬಂಡವಾಳಶಾಹಿ (capitalism) ಯ ಬೆಳವಣಿಗೆಯನ್ನು, ದೈತ್ಯಾಕಾರದ, ಹಾನಿಕಾರಕ ನ್ಯಾಸ ವಿನ್ಯಾಸ (Trust) ಹಾಗೂ ವಾಣಿಜ್ಯ ಸಂಸ್ಥೆಗಳ ಕೂಟ ಇವುಗಳನ್ನು ಅನುಸರಿಸುತ್ತಿರುವ ವರೆಗೆ ನಾವು ಎಂದಿಗೂ ಆರೋಗ್ಯಕರ, ಔದ್ಯೋಗಿಕ ಜೀವನವನ್ನು ಪುನರ್ನಿರ್ಮಾಣ ಮಾಡುವುದರಲ್ಲಿ ಯಶಸ್ವಿಯಾಗಲಾರೆವು. ಈ ಬಂಧನಗಳು ಭಾರತೀಯರನ್ನು ಒಟ್ಟಿಗೆ ಬೆಸೆಯಲಾರವು. ಜಗತ್ತು ಈವರೆಗೆ ಸಾಧ್ಯವಿದೆ ಎಂದು ಕಲ್ಪಿಸಿಕೊಳ್ಳಲು ಆಗದಿರುವಷ್ಟು ಹೆಚ್ಚು ಆಳವಾದ ಹಾಗೂ ಶ್ರೇಷ್ಠತರ ಜೀವನದತ್ತ ಭಾರತ ಚಲಿಸುತ್ತಿದೆ. ಮತ್ತು ಈ ವೈವಿಧ್ಯಮಯ ಚಟುವಟಿಕೆಗಳಲ್ಲಿ ತನ್ನನ್ನು ಅಭಿವ್ಯಕ್ತಗೊಳಿಸುವ ರಹಸ್ಯವನ್ನು ಅದು ಕಂಡುಕೊಂಡಾಗ ಅದರ ಔದ್ಯೋಗಿಕ ಹಾಗೂ ಸಾಮಾಜಿಕ ಜೀವನ ಬಲವತ್ತರವಾದದ್ದು, ವಿಕಸನ ಸಾಧ್ಯವಾದದ್ದು ಆಗುತ್ತದೆ.

**(8/65–66)** – **ಶ್ರೀ ಅರವಿಂದರು**

*

## ಬಂಡವಾಳಶಾಹಿ ಹಾಗೂ ತೆರಿಗೆ ವಿಧಿಸುವುದು

ಸಮಾಜವಾದಿಗಳು ಬಯಸುವಂತೆ ಬಂಡವಾಳಶಾಹಿ (capitalist) ವರ್ಗವನ್ನು ನಾಶಮಾಡುವುದು ಒಳ್ಳೆಯದೇನಲ್ಲ, ಅವರು ರಾಷ್ಟ್ರೀಯ ಸಂಪತ್ತಿನ ಮೂಲವಾಗಿದ್ದಾರೆ. ತೆರಿಗೆ ವಿಧಿಸುವುದು ಸರಿಯಾದದ್ದೇ, ಆದರೆ ನೀವು ಉತ್ಪಾದನೆಯನ್ನು ಹೆಚ್ಚಿಸಬೇಕು, ಹೊಸ ಉದ್ಯೋಗಗಳನ್ನು ಪ್ರಾರಂಭಿಸಬೇಕು,



ಅದಿಲ್ಲದೆ ಇದ್ದಾಗ ಹೆಚ್ಚಿನ ತೆರಿಗೆ ವಿಧಿಸಿದರೆ ನಿರಾಶಾದಾಯಕ ಸ್ಥಿತಿ ಉಂಟಾಗುತ್ತದೆ.

(Evening Talks ...) – **ಶ್ರೀ ಅರವಿಂದರು**

*

## ಏಪ್ರಿಲ್ 16, 1949

ಸದ್ಯದ ಜಗತ್ತಿನ ಸಂಸ್ಥೆಗಳು ಇಲ್ಲವೆ ಚಾಲ್ತಿಯಲ್ಲಿರುವ ವಿಚಾರಗಳು ಅವು ರಾಜಕೀಯವಾಗಿರಲಿ, ಸಾಮಾಜಿಕ ಇಲ್ಲವೆ ಆರ್ಥಿಕ ಕ್ಷೇತ್ರದಲ್ಲಿರಲಿ ಅವುಗಳನ್ನು ಶ್ರೀ ಅರವಿಂದರು ಒಪ್ಪಿಕೊಳ್ಳುವ ಇಲ್ಲವೆ ತಿರಸ್ಕರಿಸುವ ಯಾವುದೇ ಬಂಧನಕ್ಕೊಳಗಾಗಿಲ್ಲ.* ಬಂಡವಾಳಶಾಹಿಯನ್ನಾಗಲಿ ಇಲ್ಲವೆ ಸಾಂಪ್ರದಾಯಿಕ ಸಮಾಜವಾದವನ್ನಾಗಲಿ ಜಗತ್ತಿನ ಭವಿಷ್ಯತ್ತಿಗೆ ಸರಿಯಾದ ಪರಿಹಾರವೆಂದು ಅವರು ಪರಿಗಣಿಸುವುದಿಲ್ಲ. ಖಾಸಗಿ ಉದ್ಯೋಗವನ್ನು ಒಪ್ಪಿಕೊಳ್ಳುವಿಕೆಯೇ ಸ್ವತಃ ಸಮಾಜವನ್ನು ಬಂಡವಾಳಶಾಹಿಯನ್ನಾಗಿ ಮಾಡುತ್ತದೆಂದೂ ಅವರು ಒಪ್ಪಿಕೊಳ್ಳುವುದಿಲ್ಲ. ಸಮಾಜವಾದಿ ಆರ್ಥಿಕ ವ್ಯವಸ್ಥೆ ಸ್ವಲ್ಪಮಟ್ಟಿಗಿನ ನಿಯಂತ್ರಿತ ಇಲ್ಲವೆ ಗೌಣವಾಗಿರಿಸಿದ ಖಾಸಗಿ ಉದ್ಯೋಗವನ್ನು, ತನ್ನದೇ ಕಾರ್ಯಕ್ಕೆ ಸಹಾಯಕವೆಂದು ಇಲ್ಲವೆ ಭಾಗಶಃ ಅನುಕೂಲಕರವೆಂದು, ಸಮಾಜವಾದಿಯಾಗಿರುವುದನ್ನು ಬಿಟ್ಟುಕೊಡದೆ, ಒಪ್ಪಿಕೊಳ್ಳಬಹುದು. ಕಾಂಗ್ರೆಸ್ಸಿನ ಆಡಳಿತ ವ್ಯವಸ್ಥೆ ಎಷ್ಟರಮಟ್ಟಿಗೆ ನಿಜವಾಗಿ ಸಮಾಜವಾದಿಯಾಗಿರಬೇಕೆಂಬುದರ ಬಗ್ಗೆ ಇಲ್ಲವೆ ಅದು ಕೇವಲ ಒಂದು ಆವರಣವಾಗಿರಬೇಕು ಎಂಬುದರ ಬಗ್ಗೆ ಶ್ರೀ ಅರವಿಂದರಿಗೆ ತಮ್ಮದೇ ಆದ ದೃಷ್ಟಿಕೋನವಿದೆ, ಆದರೆ ಸದ್ಯ ಆ ವಿಷಯ ಕುರಿತು ತಮ್ಮ ದೃಷ್ಟಿಕೋನವನ್ನು ವ್ಯಕ್ತಪಡಿಸಲು ಅವರು ಇಷ್ಟಪಡುವುದಿಲ್ಲ.

**(35/222)** – **ಶ್ರೀ ಅರವಿಂದರು**

ಬಂಡವಾಳಶಾಹಿಯ ಹಾಗೂ ವ್ಯಾಪಾರದ ಯುಗ ಮುಕ್ತಾಯಗೊಳ್ಳುವತ್ತ ಸಾಗುತ್ತಿದೆ.

ಆದರೆ ಸಾಮುದಾಯಿಕ ಸಿದ್ಧಾಂತ (communism) ದ ಯುಗವೂ ಕೂಡ ಸಾಗಿ ಹೋಗುವುದು. ಏಕೆಂದರೆ ಸಾಮುದಾಯಿಕ ಸಿದ್ಧಾಂತ, ಅದನ್ನು ಉಪದೇಶಿಸಿದ ಹಾಗೆ, ರಚನಾತ್ಮಕವಾಗಿಲ್ಲ. ಅದು ಧನಿಕರ ಪ್ರಭುತ್ವದ ವಿರುದ್ಧ

* ಈ ಟಿಪ್ಪಣಿಯನ್ನು ಶ್ರೀ ಅರವಿಂದರು ತಮ್ಮ ಕಾರ್ಯದರ್ಶಿಗೆ ಬಾಯಿಂದ ಹೇಳಿ ಬರೆಸಿದ್ದರು, ಅದನ್ನು ಆಧಾರವಾಗಿರಿಸಿಕೊಂಡು ಕಾರ್ಯದರ್ಶಿ ಪತ್ರಕರ್ತನಿಗೆ ಉತ್ತರ ನೀಡಿದ್ದ.

ಹೋರಾಡಲು ಒಂದು ಆಯುಧವಿದ್ದ ಹಾಗೆ. ಆದರೆ ಕಾಳಗ ಮುಗಿದ ನಂತರ ಮತ್ತು ಉದ್ಯೋಗಕ್ಕೆ ಅವಕಾಶವಿಲ್ಲದಂತಾಗಿ ಸೈನ್ಯಗಳನ್ನು ವಿಸರ್ಜಿಸಿದ ನಂತರ ಸಾಮುದಾಯಿಕ ಸಿದ್ಧಾಂತಕ್ಕೆ ಯಾವ ಉಪಯುಕ್ತತೆಯೂ ಇರುವುದಿಲ್ಲ, ಅದು ಇನ್ನಾವುದೋ ಆಗಿ ಪರಿವರ್ತನೆ ಹೊಂದುತ್ತದೆ ಮತ್ತು ಅದು ಉಚ್ಚತರ ಸತ್ಯವನ್ನು ಅಭಿವ್ಯಕ್ತಪಡಿಸುತ್ತದೆ.

ಈ ಸತ್ಯ ನಮಗೆ ತಿಳಿದಿದೆ ಮತ್ತು ನಾವು ಅದಕ್ಕಾಗಿ ಕಾರ್ಯ ಕೈಕೊಳ್ಳುತ್ತಿದ್ದೇವೆ, ಅದರಿಂದಾಗಿ ಪೃಥ್ವಿಯ ಮೇಲೆ ಅದು ಆಳಿಕೆ ನಡೆಸುವಂತಾಗುತ್ತದೆ.

**(ಮಾರ್ಚ 21, 1956)** **– ಶ್ರೀಮಾತೆ**

*

## ವಾಕ್ ಸ್ವಾತಂತ್ರ್ಯ, ಸತ್ಯದ ಹಾಗೂ ನಿಷ್ಕಾಪಟ್ಯದ ಆದರ್ಶ

ಪ್ರಾಚೀನ ಕಾಲದ ರೋಮನ್ ಜನರು ಗುಲಾಮರ ಒಂದು ವರ್ಗವನ್ನಿರಿಸಿಕೊಳ್ಳುತ್ತಿದ್ದರು. ಕುಟುಂಬದಲ್ಲಿಯೇ ಜನಿಸಿದ ಅವರನ್ನು ಬಾಲ್ಯಕಾಲದಲ್ಲಿ ಅವರ ಯಜಮಾನರು ಅತಿ–ಲಾಲನೆಯಿಂದ ನೋಡಿಕೊಳ್ಳುತ್ತಿದ್ದರು ಮತ್ತು ಅವರನ್ನು ವೆರ್ನೇಯ (vernae) ಎಂದು ಕರೆಯುತ್ತಿದ್ದರು. ಪರವಾನಿಗೆ (licence) ದೊರೆತ ಹಾಗೂ ಅಧೀನತೆಗೆ ಒಳಗಾದ ಒಂದು ಬಗೆಯ ಮಿಶ್ರಣಗೊಂಡ ಸ್ಥಾನವನ್ನು ಅವರಿಗೆ ಕೊಡಲಾಗುತ್ತಿತ್ತು. ಯಾವ ಕಟ್ಟುನಿಟ್ಟಿಲ್ಲದೆ ಏನನ್ನಾದರೂ ಮಾತನಾಡಲು ಅವರಿಗೆ ಪರವಾನಿಗೆ ಇತ್ತು, ತಮ್ಮ ಯಜಮಾನನನ್ನು ಹಳಿಯಬಹುದಾಗಿತ್ತು, ಅವನಿಗೆ ಹಾನಿಕಾರಕವೆನಿಸುವ ಕುತಂತ್ರ ಮಾಡಬಹುದಾಗಿತ್ತು, ಹಾಗಿದ್ದಾಗ್ಯೂ ಯಜಮಾನ ಪ್ರಸನ್ನಚಿತ್ತನಾಗಿದ್ದಾಗ ಅವರಿಗೆ ಲೋಲುಪತೆ ತೋರಿಸಲಾಗುತ್ತಿತ್ತು – ಯಜಮಾನನ ಮನೋಭಾವ ಕಹಿಯಾಗಿದ್ದಾಗ ಅವರು ಚಾಟಿ ಏಟಿಗೆ ಒಳಗಾಗುವಂತೆ ಆದೇಶ ನೀಡಲಾಗುತ್ತಿತ್ತು. ನಮಗೆ ಕೊಡಲಾದ ವಾಕ್‌ಸ್ವಾತಂತ್ರ್ಯ ನಿರಾಂಕುಶಾಧಿಕಾರಿ ಆಡಳಿತದ ಇಚ್ಛೆಯಡಿಯಲ್ಲಿ ನಿಖರವಾಗಿ ಅದೇ ಬಗೆಯದಾಗಿದೆ, ಅದನ್ನು ಯಾವುದೇ ಕ್ಷಣದಲ್ಲಿ ಹಿಂತೆಗೆದುಕೊಳ್ಳಬಹುದು ಇಲ್ಲವೆ ಮೊಟಕು ಮಾಡಬಹುದು. ಯಾವುದೇ ಕ್ಷಣದಲ್ಲಿ ಕಾಯಿದೆಯ ಚಾಟಿ ಏಟು ಟೀಕಾಕಾರನ ಮೇಲೆ ಬೀಳಬಹುದು. ಈ ಸ್ವಾತಂತ್ರ್ಯ ರಸಿಯನ್‌ರ ಕತ್ತರಿ ಪ್ರಯೋಗ(censorship)ಕ್ಕಿಂತ ಅತ್ಯಂತ ಕೆಟ್ಟದಾಗಿತ್ತು, ಏಕೆಂದರೆ ರಸಿಯಾದಲ್ಲಿ ಸಂಪಾದಕ ಯಾವ ಭ್ರಮೆಯಡಿಯಲ್ಲಿ ಶ್ರಮಿಸುತ್ತಿದ್ದಿಲ್ಲ. ವಾಕ್‌ಸ್ವಾತಂತ್ರ್ಯ ಅವನಿಗೆ ಇಲ್ಲವೆಂಬುದು ಅವನಿಗೆ ತಿಳಿದಿತ್ತು.



ಅವನು ಆಡಳಿತದ ವಿರುದ್ಧ ಏನನ್ನಾದರೂ ಬರೆದರೆ ಅದು ಅವನ ಸ್ವಂತ ಜವಾಬ್ದಾರಿಯ ಮೇಲೆ ಆಗಿರುತ್ತಿತ್ತು, ಅಲ್ಲಿ ನಟನೆಗೆ ಅವಕಾಶವಿರಲಿಲ್ಲ, ಎರಡೂ ಬದಿಯಲ್ಲಿ ಯಾವುದನ್ನೂ ಮರೆಮಾಚಿ ಇಡುವುದಿರುತ್ತಿರಲಿಲ್ಲ. ಆದರೆ ನಮ್ಮ ವಾಕ್‌ಸ್ವಾತಂತ್ರ್ಯ ಗುಲಾಮಗಿರಿಯ ಮನೋಭಾವ ಮತ್ತು ಪರವಾನಿಗೆಯ, ಅತಿನಮ್ರತೆಯಿಂದ ಅಂಗಲಾಚುವಿಕೆ ಮತ್ತು ಉದ್ಧಟತನ ಇವುಗಳ ಕೀಳುಮಟ್ಟದ ಮಿಶ್ರಣವನ್ನು ಪೋಷಿಸಿಕೊಂಡು ಬಂದಿದೆ, ಇದು ಗುಲಾಮನ ಮನೋಭಾವದ್ದೇ ಆಗಿದೆ.

...ನಮ್ಮ ಸಾರ್ವಜನಿಕ ಅಭಿವ್ಯಕ್ತಿಗಳು ತಪ್ಪಿಸಿಕೊಳ್ಳುವ ಮಾರ್ಗಗಳು, ಮಿಥ್ಯೆಗಳು, ಬ್ರಿಟಿಷರ ಆಳಿಕೆ ಕುರಿತು ಪ್ರಶಂಸೆಗಳು ಇವುಗಳಿಂದ ತುಂಬಿಕೊಂಡಿದ್ದವಲ್ಲದೆ ಅದರೊಂದಿಗೆ ದ್ವೇಷಕಾರುವ ಮತ್ತು ಹಾಳುಮಾಡುವ ಆಕ್ರಮಣಗಳು ಯಾವುದನ್ನು ಆಕಾಶದೆತ್ತರಕ್ಕೆ ಹಾಡಿ ಹೊಗಳಿದ್ದವೋ ಅವುಗಳ ಮೇಲಿದ್ದವು. ಅಂಜುಬುರುಕುತನದಿಂದ ಕೂಡಿದ ಕಪಟತನದ ರೂಢಿ ನಮ್ಮಲ್ಲಿ ಅವಿತುಕೊಂಡಿತು, ಅದು ಹೃದಯದ ಗಟ್ಟಿಗತನಕ್ಕೆ ಮಾರಕವಾಗಿತ್ತು, ಆ ಕಪಟತನ ಆಳಿಕೆ ನಡೆಸುವವರಿಗೆ ಸೀಮಿತಗೊಳ್ಳುವುದನ್ನು ತಿರಸ್ಕರಿಸಿ, ನಮ್ಮ ರಾಷ್ಟ್ರದ ಜನರೊಂದಿಗಿನ ಸಂಬಂಧಗಳಲ್ಲಿ ಬೆಂಬತ್ತಿತು. ಅದೇ ಬಗೆಯ ಶುಷ್ಕ ಕಪಟತನದ ಕೊಳಕುತನ ನಮ್ಮ ಎಲ್ಲ ಸಾರ್ವಜನಿಕ ಕ್ರಿಯೆಯನ್ನು ಕಲುಷಿತಗೊಳಿಸಿತು, ನಮ್ಮ ರಾಜಕೀಯವನ್ನು ನಗೆಪಾಟಲಿಗೆ ಒಳಪಡಿಸಿತು, ನಮ್ಮ ಸಾಮಾಜಿಕ ಸುಧಾರಣೆಯನ್ನು ಒಂದು ಹಾಸ್ಯನಾಟಕವಾಗುವಂತೆ, ನಾವು ಮನುಷ್ಯರಾಗಿರದೆ ಮುಖವಾಡಗಳಾಗಿರುವಂತೆ ಮಾಡಿತು. ...

ರಾಷ್ಟ್ರೀಯತಾವಾದಿ (Nationalist) ಪಕ್ಷಕ್ಕೆ ಈ ಭಯಾನಕವಾಗಿ ದುಷ್ಟವಾದುದರ ಬೇರಿಗೆ ಏಟುಕೊಟ್ಟು ಹೆಮ್ಮೆ ಪಟ್ಟುಕೊಳ್ಳುವ ಭಾಗ್ಯ ದೊರಕಿತ್ತು. ಸ್ವದೇಶೀ ಚಳುವಳಿಯಿಂದಾದ ಮೊದಲ ಸ್ಫೋಟದಿಂದ, ಅದರ ಭಾಷಣಕಾರರು, ಲೇಖಕರು, ಇನ್ನು ಮುಂದೆ, ಮುಖವಾಡಗಳಾಗಿರುವುದರ ಬದಲಾಗಿ ಮನುಷ್ಯರಾಗೋಣ, ತಮ್ಮ ಮನಸ್ಸುಗಳಲ್ಲಿರುವ ಸತ್ಯವನ್ನು, ತಮ್ಮ ಹೃದಯಗಳಲ್ಲಿದ್ದ ಭಾವನೆಗಳನ್ನು ಮುಖವಾಡವಿರಿಸದೆ, ದ್ವಂದ್ವಾರ್ಥವಿಲ್ಲದಂತೆ ಮಾತನಾಡೋಣ, ಬರೆಯೋಣ, ನಮ್ಮ ಸ್ವಾತಂತ್ರ್ಯವನ್ನು ಸಮರ್ಥಿಸಿಕೊಳ್ಳೋಣ ಎಂದು ನಿರ್ಧರಿಸಿದರು. ಆ ಸ್ವಾತಂತ್ರ್ಯ ದಾನ ಪಡೆದ ರೀತಿಯಲ್ಲಿರದೆ ಆಂತರಿಕವಾಗಿ ಜನ್ಮ ತಾಳಿದ ಹಾಗಿರಬೇಕಿತ್ತು.

**(7/970–71)** **– ಶ್ರೀ ಅರವಿಂದರು** (March 26, 1908)

*

## ಸಾಮಾನ್ಯ ಮನುಷ್ಯನ ಅಭಿರುಚಿಯನ್ನು ಅತಿ ಲಾಲನೆ ಮಾಡುವ ಮಾಧ್ಯಮ

**ಪ್ರಶ್ನೆ :** *(ಶಿಷ್ಯನೊಬ್ಬನಿಂದ) ಈ ವಾರ್ತಾಪತ್ರಿಕೆಗಳು ತಮಗೆ ಬೇಕಿನಿಸಿದ್ದನ್ನೆಲ್ಲ ಮುದ್ರಿಸುತ್ತಾರೆ. ಯಾರೊಬ್ಬರ ಮನೆಯಲ್ಲಿ ನಡೆಯುವ ಮಾತುಕತೆಯನ್ನು ಅವರು ಮುದ್ರಿಸಬಹುದೇ?*

**ಶ್ರೀ ಅ :** ಆಧುನಿಕ ವಾರ್ತಾಪತ್ರಿಕೆಗಳಿಂದ ಒಳ್ಳೆಯ ನಡವಳಿಕೆಯನ್ನು ನೀನು ನಿರೀಕ್ಷಿಸಿದರೆ, ಪ್ರಜಾಪ್ರಭುತ್ವದ, ಈ ದಿನಗಳಲ್ಲಿ ಅತ್ಯಂತ ನಿರಾಶೆಗೊಳಗಾಗುವಿ. ಅದು ಆಧುನಿಕ ಪ್ರಜಾಪ್ರಭುತ್ವದ ಆಶೀರ್ವಾದಗಳಲ್ಲಿ ಒಂದು! ನೀನು ಅಮೇರಿಕೆಯಲ್ಲಿದ್ದರೆ ಮತ್ತು ಅಲ್ಲಿ ಯಾವ ಸಂದರ್ಶನವನ್ನೂ ಕೊಡದಿದ್ದರೆ, ಅವರು ನಿನಗಾಗಿ ಒಂದು ಸಂದರ್ಶನವನ್ನು ಶೋಧಿಸುತ್ತಾರೆ. ಮುದ್ರಣಾಲಯ ಸಾರ್ವಜನಿಕ ಸಂಸ್ಥೆ, ಮೊದಲಿನ ದಿನಗಳಲ್ಲಿ ಅದು ಬಹಳ ಗೌರವಪೂರ್ಣವಾಗಿದ್ದಿತು. ಆದರೆ ಈಗ ವಾರ್ತಾಪತ್ರಿಕೆಗಳು ಮಾನವ ಜೀವನದ ನಿಷ್ಫಲತೆಯ ನಿಖರ ಪ್ರಮಾಣ ಒದಗಿಸುತ್ತವೆ. ಮುದ್ರಣಾಲಯ, ಥೇಟರ, ರೇಡಿಯೋ ಇತ್ಯಾದಿ ಎಲ್ಲ ಆಧುನಿಕ ಸಾಧನಗಳಿಗೂ ಇದೇ ಮಾತು ಅನ್ವಯಿಸುತ್ತದೆ. ಇವು ಪ್ರತಿಯೊಂದನ್ನು ಸಾಮಾನ್ಯ ಮನುಷ್ಯನ ಅಭಿರುಚಿಯ ಮಟ್ಟಕ್ಕೆ ಎಳೆದು ತರುತ್ತವೆ. ಸಾಮಾನ್ಯ ಮನುಷ್ಯನ ಅಭಿರುಚಿಯನ್ನು ಅತಿ–ಲಾಲನೆ ಮಾಡಿದರೆ ಮಾತ್ರ ಅವು ಯಶಸ್ವಿಯಾಗುತ್ತವೆ.

ಶ್ರೀಸಾಮಾನ್ಯರನ್ನು ಉಚ್ಚತರವಾದ ಏನೋ ಒಂದರಿಂದ ಮೇಲಕ್ಕೆ ಎಳೆಯಬೇಕಾದ, ಅದೇ ಹಳೆಯ, ಪ್ರಶ್ನೆ ಇದಾಗಿದೆ. ಆದರೆ, ಯಾವಾಗಲೂ ಸಂಭವಿಸುವ ಹಾಗೆ ಮೇಲಕ್ಕೆತ್ತಲ್ಪಡದೆ ಶ್ರೀಸಾಮಾನ್ಯರು ಪ್ರತಿಯೊಂದನ್ನು ತಮ್ಮ ಮಟ್ಟಕ್ಕೆ ಕೆಳಗೆಳೆದು ತರುತ್ತಾರೆ.

**(ನೆನಪಿನಿಂದ ಟಿಪ್ಪಣಿ ಮಾಡಿಟ್ಟದ್ದು)** **– ಶ್ರೀ ಅರವಿಂದರು**

*

## ಅಭಿರುಚಿಯನ್ನು ಕೀಳುಮಟ್ಟಕ್ಕೆ ಇಳಿಸುವಿಕೆ ಮತ್ತು ಕಲಾತ್ಮಕ ಗ್ರಹಿಕೆ

ನಮ್ಮ ಮನಸ್ಸು, ಚಾರಿತ್ರ್ಯ ಮತ್ತು ಅಭಿರುಚಿಗಳನ್ನು ಒರಟಾದ ವ್ಯಾವಹಾರಿಕ, ಪ್ರಾಪಂಚಿಕ ಮತ್ತು ಸಾಕಷ್ಟಾಗಿರದ ಯುರೋಪಿಯನ್ ರೀತಿಯ ಶಿಕ್ಷಣದ ಮೂಲಕ ಕೀಳುಮಟ್ಟಕ್ಕಿಳಿಸಿದುದರ ಮೇಲೆ ತರುಣ ರಾಷ್ಟ್ರೀಯತಾವಾದ ಯಾವಾಗಲೂ



ಒತ್ತುಕೊಟ್ಟು ಹೇಳಿದೆ. ನಮ್ಮ ಕಲಾತ್ಮಕ ಗ್ರಹಿಕೆಗಳು, ನಮ್ಮ ಕೌಶಲ, ಕಣ್ಣು ಕಿವಿಗಳ ಉತ್ಕೃಷ್ಟತೆ ಇವು ಒಂದಾನೊಂದು ಕಾಲದಲ್ಲಿ ನಮ್ಮ ಉತ್ಪನ್ನಗಳಿಗೆ ಸರ್ವಶ್ರೇಷ್ಠತೆ, ಗೌರವ ಮತ್ತು ಯುರೋಪಿಯನ್‌ರ ಕೊಂಡುಕೊಳ್ಳುವ ಸ್ಥಾನ(Market)ಗಳ ಮೇಲೆ ಪ್ರಭುತ್ವ ಪಡೆದಿದ್ದವು, ಇದೆಲ್ಲವನ್ನೂ ಹಾಳುಮಾಡುವುದನ್ನು ಕಾರ್ಯ ರೂಪದಲ್ಲಿ ತರಲಾಗಿದೆ. ಎಲ್ಲದಕ್ಕಿಂತಲೂ ಅತಿಮುಖ್ಯವಾದ ವಿಷಯವೆಂದರೆ ಸದ್ಯದ ಶಾಲೆ ಕಾಲೇಜುಗಳು, ವಿಶ್ವವಿದ್ಯಾಲಯಗಳು ಗತಕಾಲದ ಆಧ್ಯಾತ್ಮಿಕ ಹಾಗೂ ಬೌದ್ಧಿಕ ವಿಷಯಗಳೊಂದಿಗೆ ವಿಚ್ಛೇದನ ಪರಿಣಾಮಕಾರಿಯಾಗುವಂತೆ ಮಾಡಿವೆ, ದೇಶ ಶ್ರೇಷ್ಠ ಹಾಗೂ ಮುಕ್ತವಾಗುವಂತೆ ಮಾಡಬಹುದಾದ ಗುಣಗಳನ್ನು ಎಂದರೆ ಸೃಜನಶೀಲತೆ(originality), ಉಚ್ಚ ಅಭೀಪ್ಸೆ ಮತ್ತು ಶಕ್ತಿಯುತ ಸಾಮರ್ಥ್ಯ ಇವುಗಳನ್ನು ಕಳೆದುಕೊಂಡು ದರಿದ್ರವಾಗುವಂತೆ ಮಾಡಿವೆ. ಈ ವಿಧಾನ ಹಿಮ್ಮೊಗವಾಗಿ ತಿರುಗುವಂತೆ ಮತ್ತು ನಾವು ಕಳೆದುಕೊಂಡದ್ದನ್ನು ಮರಳಿ ದೊರಕಿಸುವಂತೆ ಮಾಡುವುದಕ್ಕಾಗಿ ನಿಷ್ಠೆಯಿಂದ ಮೊದಲು ಗಮನ ಹರಿಸಬೇಕಾದುದು ಅವಶ್ಯವಾಗಿದೆ. ಸೃಜನಶೀಲತೆ, ಅಭೀಪ್ಸೆ ಮತ್ತು ಚೈತನ್ಯ ಇವುಗಳನ್ನು ಕಳೆದುಕೊಂಡದ್ದು ನಾವು ಅನುಭವಿಸಿದ ನಷ್ಟಗಳಲ್ಲಿ ಅತಿ ಮುಖ್ಯವಾಗಿರುವುದರಿಂದ ಅವುಗಳನ್ನು ಮರಳಿ ದೊರಕಿಸುವುದು ನಮ್ಮ ಆದ್ಯ, ಅತಿ ಮುಖ್ಯವಾದ ಗುರಿಯಾಗಬೇಕು. ಮನಸ್ಸು, ಚಾರಿತ್ರ್ಯ ಮತ್ತು ಜನರ ಅಭಿರುಚಿಗಳನ್ನು ಮೇಲಕ್ಕೆತ್ತಲು, ಪೃಥ್ವಿಯ ಮೇಲಿನ ಜೀವನವನ್ನು ಸುಂದರ ಹಾಗೂ ಅದ್ಭುತವಾದದ್ದನ್ನಾಗಿ ಮಾಡಿದ ಪ್ರಾಚೀನ ಕಾಲದ ಮನೋಭಾವದ ಔದಾರ್ಯವನ್ನು, ಬಲವತ್ತರವಾದ ಆರ್ಯರ ಚಾರಿತ್ರ್ಯವನ್ನು ಮತ್ತು ಆರ್ಯರ ಉಚ್ಚ ದೃಷ್ಟಿಕೋನವನ್ನು, ಪೃಥ್ವಿಯ ಮೇಲಿನ ಜೀವನವನ್ನು ಸುಂದರ ಹಾಗೂ ಅದ್ಭುತ ಆಗುವಂತೆ ಮಾಡಿದ ಗ್ರಹಿಕೆಗಳನ್ನು, ನಮ್ಮನ್ನು ಆಳಾತಿ ಆಳದ ಹೃದಯವಂತರು, ಯೋಚನಾಪರರು ಮತ್ತು ಜೀವನದಲ್ಲಿ ಪೃಥ್ವಿಯ ಮೇಲಿನ ಎಲ್ಲ ಜನರಲ್ಲಿ ಅತ್ಯಂತ ಸೂಕ್ಷ್ಮತರವಾದ ಗಾಢತೆಯನ್ನು ಹೊಂದಿದವರನ್ನಾಗಿ ಮಾಡಿದ ಮಹತ್ತಾದ ಆಧ್ಯಾತ್ಮಿಕ ಅನುಭವಗಳು, ಸಿದ್ಧಿಗಳು ಮತ್ತು ಅಭೀಪ್ಸೆಗಳನ್ನು ಮರಳಿ ಪಡೆಯುವುದು ನಂತರ ಕೈಕೊಳ್ಳಬೇಕಾದ ಮಹತ್ವದ ಹಾಗೂ ತುರ್ತಿನ ಕಾರ್ಯ.

**(8/245–46)** **– ಶ್ರೀ ಅರವಿಂದರು** (Sept. 25, 1909)

*

## ಸೌಂದರ್ಯಾಭಿರುಚಿಯನ್ನು ಜಾಗ್ರತಗೊಳಿಸುವುದು

ಪೃಥ್ವಿಯನ್ನು ಒಂದು ಬಗೆಯಲ್ಲಿ ಭವ್ಯವಾಗಿರಿಸಿದ ಇರುವೆಗಳ ಹುತ್ತ ಇಲ್ಲವೆ ಜೇನುಗೂಡಾಗಿಸುವ ತಿರುವು ಕೊಡುವಂತೆ ಜೀವನದ ಅರ್ಥವನ್ನು ಅಪಹರಿಸಿದ ಈ ಯುಗಕ್ಕೆ ಪ್ರಾಚೀನ ಕಾಲದ ಜನರು ಸಂಗೀತ, ಕಲೆ ಮತ್ತು ಕಾವ್ಯ ಇವುಗಳಿಗೆ ಅಂಟಿಸಿದ್ದ ಮೌಲ್ಯವನ್ನು ತಿಳಿದುಕೊಳ್ಳದಂತಾಗಿದೆ.

**(1/433)** **– ಶ್ರೀ ಅರವಿಂದರು**

ತಮ್ಮ ಮಧ್ಯೆ ಸಂಗೀತ, ಕಲೆ ಮತ್ತು ಕಾವ್ಯ ಇವು ಆತ್ಮಕ್ಕೆ ಪರಿಪೂರ್ಣವಾದ ಶಿಕ್ಷಣ ನೀಡುತ್ತವೆ, ಅವು ಆ ಶಿಕ್ಷಣದ ಚಲನೆಗಳನ್ನು ಪರಿಶುದ್ಧ ಹಾಗೂ ಸ್ವ–ನಿಯಂತ್ರಣದಲ್ಲಿರುವಂತೆ, ಆಳ ಹಾಗೂ ಸಾಮರಸ್ಯಗಳಿರುವಂತೆ ಮಾಡುತ್ತವೆ ಹಾಗೂ ಕಾಪಾಡಿಕೊಂಡು ಬರುತ್ತವೆ. ಹಾಗಾಗಿ ಇವು ಕಾರ್ಯನಿರ್ವಾಹಕಗಳು, ಅವುಗಳನ್ನು ಲಾಭ ಮಾಡಿಕೊಳ್ಳುವ ರೀತಿಯಲ್ಲಿ ಮಾನವತೆ ತನ್ನ ಮುನ್ನಡೆಯ ಮಾರ್ಗದಲ್ಲಿ ನಿರ್ಲಕ್ಷಿಸಬಾರದು ಇಲ್ಲವೆ ಕೇವಲ ಇಂದ್ರಿಯಗಳ ತೃಪ್ತಿಗಾಗಿ ಕೀಳುದರ್ಜೆಗಿಳಿಸಬಾರದು, ಕೀಳುದರ್ಜೆಗಿಳಿಸಿದರೆ ಅವುಗಳು ಚಾರಿತ್ರ್ಯವನ್ನು ನಿರ್ಮಾಣ ಮಾಡುವುದಕ್ಕಿಂತಲೂ ಹೆಚ್ಚಾಗಿ ವಿಘಟನೆಗೆ ಒಳಪಡಿಸುವವು. ಅವುಗಳನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಿದಾಗ ಅವು ಶಿಕ್ಷಣ ನೀಡುವ, ಆತ್ಮೋದ್ಧಾರಕ್ಕೆ ದಾರಿ ತೋರಿಸುವ, ನಾಗರಿಕತೆಗೊಳಪಡಿಸುವ ಶಕ್ತಿಗಳಾಗಿರುತ್ತವೆ.

**(1/448)** **– ಶ್ರೀ ಅರವಿಂದರು**

ಪ್ರತಿಯೊಬ್ಬನೂ ಕಲಾವಿದನಾಗಿರಬೇಕಾದ ಆವಶ್ಯಕತೆ ಇಲ್ಲ. ಪ್ರತಿಯೊಬ್ಬ ಮನುಷ್ಯನಿಗೆ ತನ್ನ ಕಲಾತ್ಮಕ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳುವುದು, ತನ್ನ ಅಭಿರುಚಿಗೆ ತರಬೇತು ನೀಡುವುದು, ತನ್ನ ಸೌಂದರ್ಯಾಭಿರುಚಿಯ ಭಾವನೆ ಹಾಗೂ ಅಂತರ್ದೃಷ್ಟಿಯನ್ನು ರೂಪದಲ್ಲಿ ಹಾಗೂ ವರ್ಣದಲ್ಲಿ ಅಭಿವೃದ್ಧಿಪಡಿಸಿಕೊಳ್ಳುವುದು ಮತ್ತು ರೂಪದಲ್ಲಿ ಹಾಗೂ ವರ್ಣದಲ್ಲಿ ಅಭಿವ್ಯಕ್ತವಾದದ್ದು ರೂಢಿಗತವಾಗಿ ಕ್ರಿಯಾಶೀಲವಾಗುವಂತೆ ಸರಿಯಾಗಿರುವಂತೆ ಹಾಗೂ ಸೂಕ್ಷ್ಮ ಸಂವೇದಿಯಾಗುವಂತೆ ಮಾಡುವುದು ಇದೆಲ್ಲ ಅವಶ್ಯವಾಗಿರುತ್ತದೆ. ಸೃಜನಶೀಲರಾದ ಜನರು, ತಾವು ಸೃಷ್ಟಿಸುವುದು ದೊಡ್ಡದಾಗಿರಲಿ ಇಲ್ಲವೆ ಚಿಕ್ಕದಾಗಿರಲಿ, ರೂಢಿಯಲ್ಲಿ ಇಲ್ಲದ ಕಲೆ ಅಥವಾ ಪ್ರತಿಭೆಯ ಮೇರು ಕೃತಿಯಾಗಿರಲಿ ಇಲ್ಲವೆ ಮನುಷ್ಯನ ಸುತ್ತಲಿರುವ ದಿನೋಪಯೋಗಿ ವಸ್ತುಗಳಾಗಿರಲಿ ಅದನ್ನು ರೂಢಿಸಿಕೊಳ್ಳಬೇಕು ಮತ್ತು ರಾಷ್ಟ್ರ ಅಸಹ್ಯವಾದದ್ದಕ್ಕೆ



ಆದ್ಯತೆ ಕೊಡದೆ ಸುಂದರವಾದುದನ್ನು, ಅಸಭ್ಯವಾದುದಕ್ಕೆ ಆದ್ಯತೆ ನೀಡದೆ ಉದಾರವಾದದ್ದನ್ನು, ಒರಟಾದುದಕ್ಕೆ ಆದ್ಯತೆ ಕೊಡದೆ ನಾಜೂಕಾದುದನ್ನು, ಆಡಂಬರಕ್ಕೆ ಆದ್ಯತೆ ನೀಡದೆ ಸಾಮರಸ್ಯವುಳ್ಳದ್ದನ್ನು ನಿರೀಕ್ಷಿಸುವುದನ್ನು ರೂಢಿಸಿಕೊಳ್ಳಬೇಕು. ಯಾವ ದೇಶವನ್ನು ಸುಂದರವಾದ, ಉದಾರವಾದ, ನಾಜೂಕಿನ ಮತ್ತು ಸಾಮರಸ್ಯದಿಂದ ಕೂಡಿದ ವಿಷಯಗಳು ದಿನಾಲು ಸುತ್ತುವರಿದಿರುತ್ತವೆಯೋ ಆ ದೇಶ ತಾನು ಚಿಂತನ ಮಾಡುವುದನ್ನು ರೂಢಿಸಿಕೊಳ್ಳುವ ರೀತಿಯದಾಗುತ್ತದೆ, ಮತ್ತು ತನ್ನಲ್ಲಿ ದಿವ್ಯಾತ್ಮನ ವಿಸ್ತರಿಸಿಕೊಳ್ಳುತ್ತಿರುವ ಪೂರ್ಣತೆಯನ್ನು ಸಿದ್ಧಿಸಿಕೊಳ್ಳುತ್ತದೆ.

**(1/453)** **– ಶ್ರೀ ಅರವಿಂದರು**

ಭಾರತ ದೇಶದ ಕಲೆ, ಕಲಾವಿದ ವಸ್ತು–ವಿಷಯಗಳ ಆತ್ಮದೊಂದಿಗೆ ಸಂಸರ್ಗ ಹೊಂದಿರುವುದನ್ನು, ಭೌತಿಕ ಸೌಂದರ್ಯಕ್ಕಿಂತ ಆಧ್ಯಾತ್ಮಿಕ ಭಾವನೆಗೆ ಅಗ್ರಸ್ಥಾನ ಕೊಡುವುದನ್ನು, ಆಳಾತಿಆಳದ ದರ್ಶನಕ್ಕೆ ಸತ್ಯನಿಷ್ಠನಾಗಿರುವುದನ್ನು ಒತ್ತಾಯದಿಂದ ಬೇಡುತ್ತದೆ.

**(1/467)** **– ಶ್ರೀ ಅರವಿಂದರು**

ಸೌಂದರ್ಯದಿಂದ ದೂರವಿರುವುದನ್ನು ನಿಮಗೆ ಕಲಿಸಿಕೊಟ್ಟಾಗ ಅಸುರನ ಅತ್ಯಂತ ಶ್ರೇಷ್ಠ ಆಯುಧಗಳಲ್ಲಿ ಒಂದು ಕಾರ್ಯನಿರತವಾಗಿರುತ್ತದೆ. ಭಾರತ ಹಾಳಾಗುವುದಕ್ಕೆ ಅದು ಕಾರಣವಾಗಿದೆ.

**(13/372)** **– ಶ್ರೀಮಾತೆ**

*

## ಏಕತೆಯ ಸಮಸ್ಯೆ ಮತ್ತು ಪರಿಹಾರ

### ರಾಷ್ಟ್ರೀಯ ಭಾಷೆಯಾಗಿ ಏಕತೆಯನ್ನುಂಟು ಮಾಡಬಹುದಾದ ಸಂಸ್ಕೃತ ಭಾಷೆ

ಭಾರತದ ಪ್ರಾತಿನಿಧಿಕ ಭಾಷೆಯೆಂದು ಸಂಸ್ಕೃತವನ್ನು ಪುನರುಜ್ಜೀವನಗೊಳಿಸುವುದು ಆದರ್ಶಪ್ರಾಯವಾದದ್ದು, ಎಂದರೆ ಭಾರತದ ಎಲ್ಲ ಭಾಷೆಗಳಿಗೆ ಆಧಾರವಾಗಿರುವ ಸಂಸ್ಕೃತ ಆ ರೀತಿಯಲ್ಲಿ ಆಡುಭಾಷೆಯಾಗಬೇಕು. ನಾವು ಭಾಷೆ ಕುರಿತು ಮಾತನಾಡುತ್ತಿದ್ದಾಗ ಇದು ಶ್ರೀ ಅರವಿಂದರ ವಿಚಾರವಾಗಿತ್ತು. ಈಗ ಇಂಗ್ಲೀಷ್ ಇಡೀ ದೇಶದ ಭಾಷೆಯಾಗಿರುವುದು ಅಸಹಜವಾಗಿದೆ. ಇತರ ದೇಶಗಳೊಡನೆ ಸಂಬಂಧ ಹೊಂದಿರುವುದಕ್ಕೆ ಇಂಗ್ಲೀಷ್

ಬಹಳ ಸಹಾಯಕಾರಿಯಾದದ್ದು, ಆದರೆ ಪ್ರತಿಯೊಂದು ದೇಶ ಅದರದೇ ಭಾಷೆ ಹೊಂದಿರುವ ರೀತಿಯಲ್ಲಿ ಭಾರತವೂ ಹೊಂದಿರಬೇಕು. ಆದರೆ ಇಲ್ಲಿ ನಾವು ರಾಷ್ಟ್ರೀಯ ಭಾಷೆಯ ಆವಶ್ಯಕತೆ ಕುರಿತು ಮಾತನಾಡತೊಡಗಿದ ಕೂಡಲೆ ಪ್ರತಿಯೊಬ್ಬನೂ ಜಗಳಾಡಲು ಪ್ರಾರಂಭಿಸುತ್ತಾನೆ, ಪ್ರತಿಯೊಬ್ಬನೂ ತನ್ನ ಭಾಷೆಯೇ ರಾಷ್ಟ್ರ ಭಾಷೆಯಾಗಬೇಕೆಂದು ಬಯಸುತ್ತಾನೆ ಮತ್ತು ಅಂತಹ ಬಯಕೆ ಮೂರ್ಖತನದ್ದು. ಆದರೆ ಯಾರೂ ಸಂಸ್ಕೃತಕ್ಕೆ ಅಡ್ಡಿಪಡಿಸಲಾರರು. ಅದು ಯಾವುದೇ ಇತರ ಭಾಷೆಗಿಂತ ಅತ್ಯಂತ ಪ್ರಾಚೀನವಾದದ್ದು. ಅದು ಬಹಳಷ್ಟು ಶಬ್ದಗಳ ಧ್ವನಿಗಳನ್ನು, ಮೂಲಶಬ್ದಗಳನ್ನು ಒಳಗೊಂಡಿದೆ. ...

ಹಾಗಾಗಿ ಇಲ್ಲಿ (ಆಶ್ರಮದಲ್ಲಿ) ಸಾಧ್ಯವಿದ್ದಷ್ಟು ಸರಳ ಸಂಸ್ಕೃತ ಭಾಷೆಯನ್ನು ಮಕ್ಕಳು ಕಲಿಯುವಂತಾಗಲಿ ಎಂದು ನಾನು ಬಯಸುತ್ತೇನೆ, ಆದರೆ ಸರಳೀಕೃತಗೊಂಡಂತಹದಲ್ಲ – ಮೂಲಕ್ಕೆ ತಿರುಗಿ ಹೋಗುವುದರಿಂದ ದೊರಕಬಹುದಾದ ಸರಳ ಭಾಷೆ.

**(12/416–17)** **– ಶ್ರೀಮಾತೆ**

*

### ರಾಷ್ಟ್ರಗೀತೆಯಾಗಿ 'ವಂದೇ ಮಾತರಮ್' ಇರುವುದನ್ನು ಕುರಿತು

**ಪ್ರಶ್ನೆ :** *(ಶಿಷ್ಯನೊಬ್ಬನಿಂದ) 'ವಂದೇ ಮಾತರಮ್' ರಾಷ್ಟ್ರಗೀತೆಯಾಗಿರುವುದನ್ನು ವಿರೋಧಿಸುವವರು ಕೆಲವರಿದ್ದಾರೆ. ಆ ಗೀತೆಯ ಕೆಲವು ಭಾಗಗಳನ್ನು ತೆಗೆದು ಹಾಕುವುದಕ್ಕೆ ಕಾಂಗ್ರೆಸ್ಸಿನ ಕೆಲವರು ಬೆಂಬಲ ನೀಡುತ್ತಾರೆ.*

**ಶ್ರೀ ಅ :** ಹಾಗಿದ್ದ ಪಕ್ಷದಲ್ಲಿ ಹಿಂದೂಗಳು ತಮ್ಮ ಸಂಸ್ಕೃತಿಯನ್ನು ಬಿಟ್ಟುಕೊಡ–ಬೇಕಾಗುತ್ತದೆ.

**ಪ್ರಶ್ನೆ :** *ಅದಕ್ಕಾಗಿರುವ ವಾದವೆಂದರೆ ಆ ಗೀತೆಯಲ್ಲಿ 'ದುರ್ಗಾ' ದೇವಿಯಂತಹ ಹಿಂದೂ ದೇವತೆಗಳ ಹೆಸರುಗಳಿರುವುದಾಗಿದೆ, ಅದು ಮುಸ್ಲಿಮರಿಗೆ ಮನ ನೋಯಿಸುವ ವಿಷಯವಾಗಿದೆ.*

**ಶ್ರೀ ಅ :** ಆದರೆ ಅದು ಧಾರ್ಮಿಕ ಗೀತೆಯಲ್ಲ, ರಾಷ್ಟ್ರೀಯ ಗೀತೆ, ದುರ್ಗಾ ಎಂದು ಭಾರತ ಮಾತೆಯನ್ನು ಸಂಬೋಧಿಸಲಾಗಿದೆ. ಮುಸ್ಲಿಮರು ಅದನ್ನೇಕೆ ಒಪ್ಪಿಕೊಳ್ಳಬಾರದು? ಅದು ಕಾವ್ಯದಲ್ಲಿ ಉಪಯೋಗಿಸಲಾದ ಪ್ರತೀಕ. ರಾಷ್ಟ್ರೀಯತೆಯನ್ನು ಕುರಿತು ಇರುವ ಭಾರತೀಯ ಕಲ್ಪನೆಯಲ್ಲಿ ಹಿಂದುಗಳ



ದೃಷ್ಟಿಕೋನ ಇದ್ದೇ ಇರುತ್ತದೆ. ಅದು ಅಲ್ಲಿ ಸ್ಥಾನ ಪಡೆಯದಿದ್ದರೆ ಹಿಂದೂಗಳಿಗೆ ತಮ್ಮ ಸಂಸ್ಕೃತಿಯನ್ನು ಬಿಟ್ಟುಕೊಡಿರೆಂದು ಹೇಳಬೇಕಾಗುತ್ತದೆ. "ಅಲ್ಲಾ–ಹೋ–ಅಕ್ಬರ" ಪ್ರಾರ್ಥನೆಗೆ ಹಿಂದೂಗಳು ವಿರೋಧ ವ್ಯಕ್ತಪಡಿಸುವುದಿಲ್ಲ. ...

ಹಿಂದೂ ಮನುಷ್ಯ ತನ್ನ ದೇವನನ್ನು ಏಕೆ ಪೂಜಿಸಬಾರದು? ಹಾಗಿಲ್ಲದೆ ಹೋದರೆ ಅವನು ಮುಸ್ಲಿಮ ಧರ್ಮವನ್ನಾಗಲಿ, ಯುರೋಪಿನ ಸಂಸ್ಕೃತಿಯನ್ನಾಗಲಿ ಸ್ವೀಕರಿಸಬೇಕಾಗುತ್ತದೆ ಇಲ್ಲವೆ ನಾಸ್ತಿಕನಾಗಬೇಕಾಗುತ್ತದೆ. ...

ಬ್ರಿಟಿಷರು ನಮ್ಮನ್ನು ಬಿಟ್ಟು ಹೋಗುವುದಕ್ಕಿಂತ ಮೊದಲೇ ಈ ಹಿಂದೂ–ಮುಸ್ಲಿಮ್ ಪ್ರಶ್ನೆಯನ್ನು ಪರಿಹರಿಸಬೇಕಾಗುತ್ತದೆ, ಹಾಗಿಲ್ಲದೆ ಹೋದರೆ ಅಂತರ್ಯುದ್ಧ(civil war)ದ ಅಪಾಯವಿರುತ್ತದೆ ಎಂದು ನಾನು 1923ರಲ್ಲಿ ಸಿ.ಆರ್. ದಾಸ ಅವರಿಗೆ ಹೇಳಿದ್ದೆ, ಅವರು ಅದನ್ನು ಒಪ್ಪಿಕೊಂಡಿದ್ದರು ಮತ್ತು ಆ ಪ್ರಶ್ನೆಗೆ ಪರಿಹಾರ ಕಂಡುಕೊಳ್ಳಲು ಬಯಸಿದ್ದರು.

**– ಶ್ರೀ ಅರವಿಂದರು** (Dec. 30, 1939)

*

### ರಾಷ್ಟ್ರೀಯ ಪ್ರಜ್ಞೆಯ ಆವಶ್ಯಕತೆ

ದೇಶಭಕ್ತಿ ಸ್ವಭಾವದಲ್ಲಿ ಸಾತ್ವಿಕವಾದದ್ದು, ಅದು ಹಾಗಿರುವಾಗ ರಾಷ್ಟ್ರೀಯ ಪ್ರಜ್ಞೆ ರಾಜಸಿಕವಾಗಿರುತ್ತದೆ. ತನ್ನ ಅಹಂಕಾರವನ್ನು ರಾಷ್ಟ್ರೀಯ ಅಹಂಕಾರದಲ್ಲಿ ಕಳೆದುಕೊಳ್ಳಬಲ್ಲ ಮನುಷ್ಯ ಆದರ್ಶ ದೇಶಭಕ್ತನಾಗಿರುತ್ತಾನೆ. ದೇಶದ ಅಹಂಕಾರ ಹೆಚ್ಚಾಗಿ ಕಾಣುವಂತೆ ಮಾಡುವವನು, ಅದೇ ವೇಳೆಗೆ ತನ್ನ ಅಹಂಕಾರವನ್ನು ಕುಂದಿಲ್ಲದಂತೆ ಇಟ್ಟುಕೊಳ್ಳುವವನು ರಾಷ್ಟ್ರೀಯ ಪ್ರಜ್ಞೆಯುಳ್ಳ ವ್ಯಕ್ತಿ. ಆ ಯುಗದ ಭಾರತೀಯರು ರಾಷ್ಟ್ರೀಯ ಪ್ರಜ್ಞೆಯಲ್ಲಿ ಕೊರತೆಯುಳ್ಳವರಾಗಿದ್ದರು. ಸಂಪೂರ್ಣ ರಾಷ್ಟ್ರೀಯ ಪ್ರಜ್ಞೆ ಎಲ್ಲೆಡೆಗೆ ಪಸರಿಸಿದಾಗ, ವಿಭಜನೆಯ ಬೇಗುದಿಗೊಳಗಾದ ಈ ದೇಶದಲ್ಲಿ ಏಕತೆಯನ್ನು ಸಿದ್ಧಿಸಿಕೊಳ್ಳಬಹುದು. "ನಮಗೆ ಏಕತೆ ಬೇಕು, ನಮಗೆ ಏಕತೆ ಬೇಕು" ಎಂದು ಕೇವಲ ಶಬ್ದಗಳಲ್ಲಿ ಪುನರಾವರ್ತನೆ ಮಾಡುವುದು ಸಾಕಾಗದು.

(Bengali Writings p. 218) **– ಶ್ರೀ ಅರವಿಂದರು**

*

## ಏಕತೆಯ ಆವಶ್ಯಕತೆ ಮತ್ತು ಅದಕ್ಕಾಗಿ ಮಾರ್ಗ

ನಮ್ಮ ದೇಶದಲ್ಲಿ ಈ ಮೊದಲು ಎಂದಿಗೂ ಏಕತೆ ಇರಲಿಲ್ಲ, ಆದರೆ ಯಾವಾಗಲೂ ಏಕತೆಯತ್ತ ಒಂದು ಎಳೆತ, ಅದರತ್ತ ಸಾಗುವ ಪ್ರವಾಹ ಇದ್ದವು. ಈ ಸ್ವಾಭಾವಿಕ ಪ್ರಯತ್ನ ಕುರಿತು ಕೆಲವು ಪ್ರಧಾನ ಅಡೆತಡೆಗಳಿದ್ದವು: ಮೊದಲನೆಯದಾಗಿ ಪ್ರಾದೇಶಿಕ ಭಿನ್ನತೆಗಳು, ಎರಡನೆಯದಾಗಿ ಹಿಂದೂ–ಮುಸ್ಲಿಮ್ ಸಂಘರ್ಷ, ಮೂರನೆಯದಾಗಿ ದೇಶ ಮಾತೆಯೆನ್ನುವ ದರ್ಶನದ ಕೊರತೆ, ದೇಶದ ವಿಸ್ತಾರವಾದ ಕ್ಷೇತ್ರ, ವ್ಯವಹಾರ ಸಂಪರ್ಕದಲ್ಲಿ ನಿಧಾನಗತಿ ಮತ್ತು ತೊಂದರೆಗಳು ಮತ್ತು ಭಾಷೆಗಳಲ್ಲಿ ಭಿನ್ನತೆ ಇವೆಲ್ಲ ಪ್ರಾದೇಶಿಕ ಏಕತೆ ಇಲ್ಲದಿರುವಿಕೆಗೆ ಕೆಲವು ಕಾರಣಗಳಾಗಿದ್ದವು. ಆಧುನಿಕ ವಿಜ್ಞಾನಕ್ಕೆ ಧನ್ಯವಾದಗಳು. ಕೊನೆಯ ವಾಸ್ತವಾಂಶವನ್ನು ಹೊರತುಪಡಿಸಿ ಉಳಿದವೆಲ್ಲ ಪ್ರತ್ಯೇಕಗೊಳಿಸುವ ತಮ್ಮ ಸತ್ವವನ್ನು ಕಳೆದುಕೊಂಡಿವೆ.

ನಮ್ಮ ರಾಷ್ಟ್ರಮಾತೆಯ ನಿಜವಾದ, ಅವಿಭಜಿತ ಪ್ರತೀಕವನ್ನು, ಅವಳ ಸೌಂದರ್ಯ ಹಾಗೂ ಘನತೆಗಳನ್ನು ನೋಡಿದ ದಿನದಂದು, ನಾವು ಆನಂದದಿಂದ ಅವಳ ಸೇವೆಗಾಗಿ ಪ್ರಾಣಗಳನ್ನು ಅರ್ಪಿಸಲು ಕಾತರರಾಗುವೆವು. ಆಗ ಈ ಅಡೆತಡೆ ಮಾಯವಾಗುತ್ತದೆ ಮತ್ತು ಭಾರತದ ಏಕತೆ, ಸ್ವಾತಂತ್ರ್ಯ ಮತ್ತು ಪ್ರಗತಿ ಇವುಗಳನ್ನು ಸಿದ್ಧಿಸಿಕೊಳ್ಳುವುದು ಸುಲಭವಾಗುತ್ತದೆ. ಭಾಷೆಯ ಅಡ್ಡಗೋಡೆ ಇನ್ನು ಮುಂದೆ ವಿಭಜನೆಗೆ ಕಾರಣವಾಗುವುದಿಲ್ಲ. ಹಿಂದಿಯನ್ನು ಸಂಪರ್ಕ ಭಾಷೆಯನ್ನಾಗಿ ಮಾಡಿಕೊಂಡು, ಆದರೆ ಅದೇ ವೇಳೆಗೆ ಪ್ರಾದೇಶಿಕ ಭಾಷೆಗೆ ಸಾಕಷ್ಟು ಗಮನ ಹರಿಸಿ ಈ ಅಸಾಮರ್ಥ್ಯವನ್ನು ತೊಡೆದು ಹಾಕಬಹುದು. ಹಿಂದೂ–ಮುಸ್ಲಿಮರ ಈ ಸಂಘರ್ಷಕ್ಕೆ ನಿಜವಾದ ಪರಿಹಾರ ಕಂಡುಕೊಳ್ಳುವುದರಲ್ಲಿ ನಾವು ಯಶಸ್ವಿಯಾಗುವೆವು. ರಾಷ್ಟ್ರ ಒಬ್ಬ ಮಾತೆಯೆಂಬ ದರ್ಶನದ ಕೊರತೆಯಿಂದಾಗಿ ಈ ಅಡೆತಡೆಗಳನ್ನು ತೊಡೆದು ಹಾಕುವುದಕ್ಕೆ ಉತ್ಕಟೇಚ್ಛೆಯ ಭಾವನೆ ಬಲವಾಗಿ ಬರುತ್ತಿಲ್ಲ. ಆ ಕಾರಣದಿಂದಾಗಿ ಸಾಧನವನ್ನು ಕಂಡುಕೊಳ್ಳಲಾಗಿಲ್ಲ ಮತ್ತು ಸಂಘರ್ಷ ಇನ್ನೂ ಹೆಚ್ಚು ಕೆಟ್ಟದ್ದಾಗಿ ಬೆಳೆಯುತ್ತಿದೆ. ದೇಶವನ್ನು ಕುರಿತು ನಿಜವಾದ, ವಿಭಜನೆಗೊಂಡಿರದ ಪ್ರತಿಮೆ ಬೇಕಾಗಿದೆ, ಆದರೆ ನಿಜವಾದ ದರ್ಶನದ ಭ್ರಮೆಯಡಿಯಲ್ಲಿ ನಾವು ಹಿಂದೂಗಳ ಮಾತೆಯನ್ನು ಇಲ್ಲವೆ ಹಿಂದೂಗಳ ರಾಷ್ಟ್ರೀಯತ್ವವನ್ನು ಇಷ್ಟಪಡುತ್ತಿದ್ದರೆ, ಹಳೆಯ ದೋಷದಲ್ಲಿ ಬಿದ್ದುಬಿಡುತ್ತೇವೆ ಮತ್ತು



ರಾಷ್ಟ್ರೀಯತ್ವವೇ ಸ್ವತಃ ಪೂರ್ತಿ ಅರಳಿಕೊಳ್ಳುವುದನ್ನು ನಾವೇ ತಪ್ಪಿಸಿಕೊಳ್ಳುತ್ತೇವೆ.

(Bengali Writings p. 225-26) – **ಶ್ರೀ ಅರವಿಂದರು** (June 19, 1909)

*

## ಹಿಂದೂ–ಮುಸ್ಲಿಮರ ಸಮಸ್ಯೆ

ಮುಸ್ಲಿಮರ ವಿರೋಧಕ್ಕೆ ನಾವು ಭಯಪಡುವುದಿಲ್ಲ, ಲೇಖನ ಪ್ರಾಮಾಣಿಕ ಹಾಗೂ ಸ್ವದೇಶೀ ಆಗಿರುವವರೆಗೆ, ಶಿಲ್ಲಾಂಗ ಹಾಗೂ ಸಿಮ್ಲಾದಲ್ಲಿ ತಯಾರಾಗಿರದೆ ಇದ್ದರೆ ನಾವು ಅದನ್ನು ಜೀವನದ ಸಂಕೇತ ಹಾಗೂ ಅಭೀಪ್ಸೆಯೆಂದು ಸ್ವಾಗತಿಸುತ್ತೇವೆ. ನಾವು ಇಸ್ಲಾಮನ್ನು ದೂರವಿರಿಸುವುದಿಲ್ಲ, ಅದರ ಎಚ್ಚತ್ತುಕೊಳ್ಳುವುದರಲ್ಲಿ ಒರಟಾದ ಮೊದಲು ಪ್ರಯತ್ನಗಳು ತಪ್ಪು ನಿರ್ದೇಶನಕ್ಕೊಳಗಾಗಿದ್ದರೂ, ಅದು ಎಚ್ಚತ್ತುಕೊಳ್ಳುವುದನ್ನು ನಾವು ಬಯಸುತ್ತೇವೆ, ಏಕೆಂದರೆ ಎಲ್ಲ ಬಲ, ಎಲ್ಲ ಚೈತನ್ಯ, ಎಲ್ಲ ಕ್ರಿಯೆ ರಾಷ್ಟ್ರ ನಿರ್ಮಾಪಕನ ಗಿರಣಿಗೆ ಬೀಸುವ ಕಾಳಿದ್ದ ಹಾಗೆ. ಆ ನಂಬಿಕೆಯಲ್ಲಿ ಮುಸಲ್ಮಾನನ ಜೊತೆಗೆ ರಾಜಕೀಯ ಕ್ಷೇತ್ರದಲ್ಲಿ ಅವನು ಆಯ್ದುಕೊಂಡ ಸಹೋದರನ ಕೈಯಪ್ಪುಗೆಯ ಇಲ್ಲವೆ ಕುಸ್ತಿಪಟುವಿನ ದೃಢ ನಿಶ್ಚಯದ ಹಿಡಿತದ ಪ್ರಕಾರ ವಿನಿಮಯ ಮಾಡಿಕೊಳ್ಳಲು ನಾವು ತಯಾರಾಗಿದ್ದೇವೆ. ...

ಮಹಮ್ಮದೀಯನು ಈವರೆಗೆ ಪ್ರಗತಿ ಕಂಡಿಲ್ಲ. ಅವನು ರಾಜಕೀಯ ಸವಲತ್ತುಗಳ ಸಿಹಿಯ ರುಚಿ ನೋಡಿಲ್ಲ ಮತ್ತು ಅವು ತನ್ನ ಬಾಯಲ್ಲಿ ಬೂದಿಯಾಗಿ ತಿರುವು ಪಡೆಯುವುದನ್ನೂ ಕಂಡುಕೊಂಡಿಲ್ಲ. ತನ್ನ ಭರವಸೆಗಳ ಮಿಥ್ಯೆ ಹಾಗೂ ಅಸಾಧ್ಯತೆಗಳನ್ನು ಪೂರ್ತಿ ಶೋಧಿಸುವವರೆಗೆ ಅವನು ತನ್ನ ಒತ್ತಾಯದ ಬೇಡಿಕೆಗಳಿಗೆ ಸೂತ್ರರೂಪ ಕೊಡಬೇಕು, ಆಶ್ವಾಸನೆ ದೊರೆತುದಕ್ಕಾಗಿ ಸಂತೋಷಪಡಬೇಕು, ದ್ರೋಹವಾದಾಗ ಸಿಡಿಮಿಡಿಗೊಳ್ಳಬೇಕು. ...

ಹಿಂದೂ–ಮಹಮ್ಮದೀಯರ ಏಕತೆ ರಾಜಕೀಯ ಹೊಂದಾಣಿಕೆಗಳಿಂದ ಇಲ್ಲವೆ ಕಾಂಗ್ರೆಸ್ಸಿಗರ ಹೊಗಳಿಕೆಗಳಿಂದ ಪರಿಣಾಮಕಾರಿಯಾಗುವುದು ಸಾಧ್ಯವಿಲ್ಲ ಎಂಬುದರ ಬಗ್ಗೆ ನಾವು ನಿಶ್ಚಿತತೆ ಹೊಂದಬಹುದು. ಆ ಏಕತೆಯನ್ನು ಹೃದಯದ ಹಾಗೂ ಮನಸ್ಸಿನ ಆಳಾತಿಆಳದಲ್ಲಿ ಅರಸಬೇಕು, ಏಕೆಂದರೆ ಏಕತೆ ಇಲ್ಲದಿರುವುದಕ್ಕೆ ಕಾರಣವಿರುವಲ್ಲಿ ಉಪಾಯಗಳನ್ನು ಹುಡುಕಬೇಕು. ಸಮಸ್ಯೆಯನ್ನು ಬಗೆಹರಿಸುವಾಗ, ಭಿನ್ನಾಭಿಪ್ರಾಯ ಉಂಟಾಗುವುದಕ್ಕೆ ತಪ್ಪು ಗ್ರಹಿಕೆ ಅತ್ಯಂತ ಫಲಪ್ರದ ಕಾರಣ ಎಂಬುದನ್ನು, ಪ್ರೇಮ ಒತ್ತಾಯದಿಂದ ಪ್ರೇಮವನ್ನುಂಟು

ಮಾಡುತ್ತದೆ, ಬಲಿಷ್ಠರಾದವರಿಗೆ ಬಲ ಸಮಾಧಾನ ನೀಡುತ್ತದೆ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಒಳ್ಳೆಯದು. ಪರಸ್ಪರರ ಬಗ್ಗೆ ಜ್ಞಾನ ಹಾಗೂ ಸಹಾನುಭೂತಿ ಇವುಗಳ ಮೂಲಕ ನಾವು ತಪ್ಪು ಗ್ರಹಿಕೆಯನ್ನು ತೆಗೆದುಹಾಕಲು ಶ್ರಮಿಸಬೇಕು. ನಮ್ಮ ಮುಸಲ್ಮಾನ ಸಹೋದರನಲ್ಲಿಯೂ ಕೂಡ ನಾರಾಯಣ ವಾಸಿಸುತ್ತಾನೆ, ಮತ್ತು ಅವನಿಗೂ ಕೂಡ ಜಗನ್ಮಾತೆ ತನ್ನೆದೆಯಲ್ಲಿ ಶಾಶ್ವತ ಸ್ಥಾನ ಕೊಟ್ಟಿದ್ದಾಳೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಂಡು ಅವನಿಗೆ ದೇಶಭಕ್ತನ ತಪ್ಪಡಿಯಿಡದ ಪ್ರೇಮವನ್ನು ನೀಡಬೇಕು. ಆದರೆ ಸ್ವಾರ್ಥದ ದೌರ್ಬಲ್ಯದಿಂದ ಮತ್ತು ಅಂಜುಬುರುಕತನದಿಂದ ಅವನನ್ನು ಮಿಥ್ಯಾರೂಪದಲ್ಲಿ ಸಮೀಪಿಸುವುದನ್ನು ನಿಲ್ಲಿಸಬೇಕು. ಸಮಸ್ಯೆಯನ್ನು ಬಗೆಹರಿಸಲು ಇದೊಂದೇ ವ್ಯಾವಹಾರಿಕವಾದ ರೀತಿ ಎಂದು ನಾವು ನಂಬುತ್ತೇವೆ. ಬೌದ್ಧಿಕ ಸಹಾನುಭೂತಿ ಕೇವಲ ಜನರನ್ನು ಒಟ್ಟಿಗೆ ತರಬಲ್ಲದು, ಹೃದಯದ ಸಹಾನುಭೂತಿಯೊಂದೇ ಜನರಲ್ಲಿ ಏಕತೆಯನ್ನುಂಟು ಮಾಡಬಲ್ಲದು. ಆದರೆ ಒಂದು ಇನ್ನೊಂದಕ್ಕಾಗಿ ಒಳ್ಳೆಯ ತಯಾರಿ ಮಾಡಿಕೊಳ್ಳುವುದಾಗಿರುತ್ತದೆ.

**(8/30–31)** **– ಶ್ರೀ ಅರವಿಂದರು**

*

ಸದ್ಯದ ಸಮಯದಲ್ಲಿ ಸರಕಾರ ಎರಡು ಅತ್ಯಂತ ದೊಡ್ಡವಾದ ಸಮುದಾಯಗಳಲ್ಲಿ ಪ್ರತ್ಯೇಕತೆಯನ್ನುಂಟು ಮಾಡುವುದರಲ್ಲಿ ಯಶಸ್ವಿಯಾಗಿದೆ. ಮುಸ್ಲಿಮರನ್ನು ಬೇರೆಡೆ ಎಳೆದು ತರುವುದರಲ್ಲಿ ಅದು ಯಶಸ್ವಿಯಾಗಿದೆ, ಏಕೆಂದರೆ ಅವರಲ್ಲಿ ಶಿಕ್ಷಣ, ಅರಿವು ಮತ್ತು ರಾಜಕೀಯ ಅನುಭವದ ಕೊರತೆಯಿದೆ, ಅದು ಕಿವಿಗಳಿಗಷ್ಟೇ ಯೋಗ್ಯವಾದ ಆಶ್ವಾಸನೆಗಳ ಮೂಲಕ, ಸರಕಾರ ತನ್ನದೇ ಗುರಿಗಳಿಗೆ ಹಾನಿ ಮಾಡಿಕೊಳ್ಳದೆ ಕೊಡಲಾಗದ ವಿನಾಯಿತಿಗಳನ್ನು ನೀಡುವ ಆಶ್ವಾಸನೆಗಳ ಮೂಲಕ ಅವರನ್ನು ದೂರ ಕರೆದೊಯ್ಯಲು ಅನುವು ಮಾಡಿಕೊಡುತ್ತದೆ. ಕಹಿ ಅನುಭವದ ಮೂಲಕ ಮಹಮ್ಮದೀಯರು ತಮಗಿತ್ತ ಭರವಸೆ ಕುರಿತು ಇರುವ ಮಿಥ್ಯೆಯನ್ನು ಮತ್ತು ಅವರು ಅನುಸರಿಸಲೆಂದು ಪ್ರಚೋದನೆಗಳೊಳಪಡಿಸಿದ ರಾಜಕೀಯ ಸಾಧನಗಳಲ್ಲಿಯ ಮಿಥ್ಯೆಯನ್ನು ಕಂಡುಕೊಳ್ಳುವವರೆಗೆ ಈ ಎರಡೂ ಸಮುದಾಯಗಳು ಒಟ್ಟಿಗೆ ಸೇರುವುದು ಮತ್ತು ಅವರ ಸಾಮಾನ್ಯ ಹಿತಾಸಕ್ತಿಗಾಗಿ ಏಕಗೊಂಡು ನಿಲ್ಲುವುದು ಕಠಿಣವಾದದ್ದು.

**(8/46)** **– ಶ್ರೀ ಅರವಿಂದರು**

*



## ಮಹಮ್ಮದೀಯರ ಪ್ರಾತಿನಿಧ್ಯ

ಮಹಮ್ಮದೀಯರ ಸಲುವಾಗಿ ಪ್ರತ್ಯೇಕ ಪ್ರಾತಿನಿಧ್ಯದ ಪ್ರಶ್ನೆ ಅವಸರದಿಂದ ಕೈಗೆತ್ತಿಕೊಂಡ ವಾದದ ಅಂಶವಿರುವ ಸಂಗತಿಗಳಲ್ಲಿ ಒಂದು. ಅದನ್ನು ತಾನು ವ್ಯವಹರಿಸುತ್ತಿರುವ ಶಕ್ತಿಗಳ ಆಳವನ್ನರಿಯದ ರಾಜಕಾರಣಿಯೊಬ್ಬ ಕೈಕೊಂಡಿದ್ದಾನೆ. ಅದು ಯಾರೂ ನಿರೀಕ್ಷಿಸದ ಫಲವನ್ನು ಕೊಡುತ್ತದೆ, ಅದರಲ್ಲೂ ಮೊದಲು ಅದರ ಸೃಷ್ಟಿಗೆ ಕೆಟ್ಟ ಸಲಹೆ ಪಡೆದು ಅವನು ಫ್ರಾಂಕೆನ್ ಸ್ಟಾಯಿಸ್‌ನಂತೆ* ಆಗುತ್ತಾನೆ. ಸರಕಾರ ಭಾರತೀಯರಲ್ಲಿ ಮಹಮ್ಮದೀಯರ ಅಂಶವನ್ನು ಮೇಲಕ್ಕೆತ್ತಿ ಹಿಡಿದು ಹಿಂದೂ ಅಂಶವನ್ನು ಕುಗ್ಗಿಸಲು ನಿರ್ಧಾರ ಮಾಡಿದೆ ಎಂಬುದು ಹಿಂದೂಗಳ ನಂಬಿಕೆಯಾಗಿದೆ. ಅದನ್ನು ಸರಕಾರ ಮಹಮ್ಮದೀಯರ ಮತ(vote)ಗಳನ್ನು ಆದ್ಯತೆ ನೀಡುವುದರ ಮೂಲಕ ಖರೀದಿಸುವ ಆಸರೆ ಪಡೆದು ತಮ್ಮದು ನಿರಂತರ ಮೇಲುಗೈಯಾಗುವುದನ್ನು ನಿಶ್ಚಿತಗೊಳಿಸಲು ಬಯಸಿದೆ. ಅಲ್ಪ ಸಂಖ್ಯಾತರ ಹಕ್ಕು ಬಾಧ್ಯತೆಗಳನ್ನು ಲಕ್ಷ್ಯಗೊಟ್ಟು ಪರಿಗಣಿಸುವುದರ ಮೂಲಕ ಸರಕಾರದ ಆಡಳಿತದಲ್ಲಿ ಉಚ್ಚ ಸ್ಥಾನಗಳಲ್ಲಿರುವ ಅಧಿಕಾರಿಗಳು ಪುನಃ ರೂಪಿಸುವ ಯೋಜನೆ(Reform Scheme)ಯಲ್ಲಿ ಮಹಮ್ಮದೀಯರ ಪ್ರಾತಿನಿಧ್ಯವನ್ನು ಅವಶ್ಯವಾದ ಘಟಕವನ್ನಾಗಿ ಮಾಡಿದ್ದಾರೆ, ಅದು ಪಕ್ಷಪಾತ ಮಾಡುವುದಕ್ಕಾಗಿ ಅಲ್ಲ ಎಂದು ಅವರು ನಿರಾಕರಿಸುವುದು, ಹಿಂದೂಗಳಲ್ಲಿ ಯಾರ ಮನಸ್ಸಿಗೂ ಮನವರಿಕೆ ಮಾಡಿಕೊಡುವುದು ಸಾಧ್ಯವಿಲ್ಲ, ಏಕೆಂದರೆ ಅದಕ್ಕೆ ಹಿಂದೂಗಳ ಸ್ಪಷ್ಟ ಪ್ರತ್ಯುತ್ತರವೆಂದರೆ ಅಲ್ಪ ಸಂಖ್ಯಾತರ ಒಂದೇ ಗುಂಪಿಗೆ ವಿಶೇಷ ಕಾಳಜಿ ತೋರಿಸಲಾಗಿದೆ, ಈ ಕಾಳಜಿಯನ್ನು ಆ ಜನರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರಾಂತಗಳಿಗೂ ವಿಸ್ತರಿಸಲಾಗಿದೆ ಎಂಬುದು. ಹಿಂದೂ ಅಲ್ಪ ಸಂಖ್ಯಾತರಿಗೆ, ಪಾರ್ಸಿಗಳಿಗೆ, ಶಿಖ್‌ರಿಗೆ, ಕ್ರಿಶ್ಚಿಯನ್ನರಿಗೆ ಹಾಗೂ ಇತರ ಅಲ್ಪ ಸಂಖ್ಯಾತರಿಗೆ ರಕ್ಷಣೆಯ ಯಾವ ಅವಕಾಶವನ್ನೂ ಕಲ್ಪಿಸಿಲ್ಲ, ಅವರು ಮಹಮ್ಮದೀಯರಿಗಿಂತ ಕಡಿಮೆಯಲ್ಲದ ರೀತಿಯಲ್ಲಿ ಭಾರತೀಯರೂ, ಬ್ರಿಟಿಶ್ ಸಾಮ್ರಾಜ್ಯದ ನಾಗರಿಕರೂ ಆಗಿದ್ದಾರೆ. ...

ನಮ್ಮ ಮನೋಭಾವ ಸ್ಪಷ್ಟವಾಗಿದೆ. ಪುನಃ ರೂಪಿಸುವ ಯೋಜನೆಗಳಲ್ಲಿ ನಮ್ಮ ಯಾವ ಪಾತ್ರವೂ ಇರುವುದಿಲ್ಲ. ಅವುಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸಾಮಾನ್ಯ ಜನರ ಬೆಂಬಲವಿರುವುದಿಲ್ಲ, ಭಾರತೀಯ ಕ್ಷಮತೆ ಮತ್ತು ರಾಜತಂತ್ರಜ್ಞತೆಗೆ

* ಫ್ರಾಂಕೆನ್‌ಸ್ಟಾಯಿಸ್–ಸೃಷ್ಟಿಸಿದವನಿಗೇ ಎದುರಿಸಲು ಕಷ್ಟವಾದ ಯಾವುದೇ ಸಮಸ್ಯೆ.

ಅವಕಾಶವಿರುವುದಿಲ್ಲ. ಪ್ರಜಾಪ್ರಭುತ್ವದ ರೀತಿಯಲ್ಲಿ ವಿಸ್ತರಿಸುವ ಬೀಜವನ್ನು ಅವು ಹೊಂದಿರುವುದಿಲ್ಲ. ಒಂದು ಕ್ಷಣಕ್ಕಾದರೂ ಮತದಾರರ ಪ್ರತ್ಯೇಕ ಸಮುದಾಯವನ್ನಾಗಲಿ, ಇಲ್ಲವೆ ಪ್ರತ್ಯೇಕ ಪ್ರಾತಿನಿಧ್ಯವನ್ನಾಗಲಿ ನಾವು ಸ್ವೀಕರಿಸುವುದಿಲ್ಲ, ಅದಕ್ಕೆ ಕಾರಣ ಜನಸಾಮಾನ್ಯರ ಶಾಸನ ಸಭೆಯಲ್ಲಿ ಭವ್ಯ ರೀತಿಯಲ್ಲಿ ಉಂಟಾಗಬಹುದಾದ ಮಹಮ್ಮದೀಯರ ಪ್ರಭಾವವನ್ನು ವಿರೋಧಿಸುತ್ತೇವೆ ಎಂದಲ್ಲ, ಆದರೆ ಹಿಂದೂಗಳು ಹಾಗೂ ಮಹಮ್ಮದೀಯರು ಶಾಶ್ವತವಾಗಿ ಪ್ರತ್ಯೇಕ ರಾಜಕೀಯ ಘಟಕಗಳೆಂದು ಗುರುತಿಸಿಕೊಳ್ಳುವುದರಲ್ಲಿ ನಾವು ಭಾಗೀದಾರರಾಗಲು ಬಯಸುವುದಿಲ್ಲ, ಏಕೆಂದರೆ ಅದು ಏಕೈಕವಾದ ಹಾಗೂ ವಿಭಜಿಸಲಾಗದ ಭಾರತ ದೇಶದ ಬೆಳವಣಿಗೆಯನ್ನು ಹೊರಗಿರಿಸುತ್ತದೆ. ಇಂತಹ ಪ್ರಯತ್ನ ದಿಗ್ಭ್ರಮೆಗೊಳಗಾದ ಸರಕಾರ ರಾಜಕೀಯ ಆಧಾರ ದೊರಕಿಸುವುದನ್ನು ಅರಸುವುದರಿಂದ ಉಂಟಾಗಲಿ ಇಲ್ಲವೆ ಕಹಿಮನಸ್ಸಿಗೊಳಗಾದ ಹಿಂದೂ ಸಮುದಾಯದ ಸದ್ಯದ ಭಾವೋದ್ರೇಕಗಳಿಂದ ಭವಿಷ್ಯತ್ತಿಗಾಗಿ ಇರಬೇಕಾದ ದೃಷ್ಟಿ ಮಬ್ಬಾಗುವುದರಿಂದ ಉಂಟಾಗಲಿ ನಾವದನ್ನು ವಿರೋಧಿಸುತ್ತೇವೆ.

**(8/287–89)** – **ಶ್ರೀ ಅರವಿಂದರು** (Nov. 6, 1909)

*

## ಹಿಂದೂ ರಾಷ್ಟ್ರೀಯತೆ ಮತ್ತು ಭಾರತದ ಏಕತೆ

ಹಿಂದುತ್ವವನ್ನು ಏಕಗೊಳಿಸಲು ಬಲವತ್ತರವಾದ ಎರಡು ಸಂಗತಿಗಳಿವೆ, ವೇದಾಂತದ ಆಧಾರವಿರುವ ಹೊಸ ಆಧ್ಯಾತ್ಮಿಕ ಪ್ರಚೋದನೆ, ಮನುಷ್ಯನ ಸಾರಭೂತ ಏಕತೆ, ಸಂಸ್ಥೆಗಳ ನಶ್ವರತೆ ಹಾಗೂ ಉದ್ದೇಶ ಸಾಧನೆಗೆ ಅನುಕೂಲವಾಗಿರುವಿಕೆ, ಭ್ರಾತೃತ್ವ, ಸ್ವಾತಂತ್ರ್ಯ, ಸಮಾನತೆ ಇವುಗಳನ್ನು ಕುರಿತಾದ ಉದಾತ್ತ ಆದರ್ಶಗಳು ಮತ್ತು ಹಿಂದೂ ಆಧ್ಯಾತ್ಮಿಕ ವಿಚಾರಗಳ ಹಾಗೂ ಶಿಸ್ತುಪಾಲನೆಯ ಶ್ರೇಷ್ಠ ಮಣಿಹ ಮತ್ತು ಬಲವತ್ತರವಾದ ಭವಿಷ್ಯತ್ತನ್ನು ಗುರುತಿಸುವಿಕೆ – ಇಲ್ಲವೆ ತಮ್ಮ ಸಮುದಾಯದ ಉನ್ನತಿಗಾಗಿ ಹಾಗೂ ರಕ್ಷಣೆಗಾಗಿ ಹಿಂದೂ ಜನರನ್ನು ಒಂದುಗೂಡಿಸಲು ಸಾಕಷ್ಟು ಬಲಿಷ್ಠವಾದ ರಾಜಕೀಯ ಪ್ರಚೋದನೆ. ...

ಶ್ರೇಷ್ಠತರ ಭಾರತೀಯ ರಾಷ್ಟ್ರೀಯತೆಗೆ ಹಿಂದೂ ರಾಷ್ಟ್ರೀಯತೆ ಅವಶ್ಯವಾದ ಪ್ರಾಥಮಿಕ ವಿಷಯವೆಂದು ಲಾಲಾ ಲಜಪತರಾಯ ಉಚ್ಚತರ ವಿಚಾರವನ್ನು



ಮುಂದಿರಿಸಿದರು. ಈ ಆದರ್ಶದಲ್ಲಿ ನಮಗೆ ವಿಶ್ವಾಸವಿಲ್ಲ. ವಾಸ್ತವತೆಗಳ ಬಗ್ಗೆ ನಾವು ಕುರುಡರಾಗಿದ್ದೇವೆ ಎಂದಲ್ಲ – ಹಿಂದೂ ಮುಸಲ್ಮಾನರ ನಡುವಿರುವ ಪೈಪೋಟಿಯನ್ನು ನಾವು ಗುರುತಿಸುವುದಿಲ್ಲ ಎಂದಲ್ಲ, ಪರಂಪರಾಗತವಾಗಿ ಬಂದ ಗತಕಾಲದ ಆ ಪೈಪೋಟಿ ಬ್ರಿಟಿಶರ ಏಳ್ಗೆಯಿಂದಾಗಿ ಹೆಚ್ಚಿಕೊಂಡಿದೆ, ಕಡಿಮೆಯಾಗಿಲ್ಲ. ಅದು ನಾವು ಎದುರಿಸಬೇಕಾದ ವಿಷಯ. ಪರಸ್ಪರರಿಗೆ ವಿನಾಯಿತಿ ತೋರಿಸುವುದರ ಮೂಲಕ ಇಲ್ಲವೆ ರಾಷ್ಟ್ರೀಯತೆ ಮತ್ತು ಪ್ರತ್ಯೇಕತೆ ಇವುಗಳ ನಡುವಿನ ಸಂಘರ್ಷದ ಮೂಲಕ ಆ ಪೈಪೋಟಿಯನ್ನು ಬಗೆಹರಿಸಬೇಕು. ಆದರೆ ಆಧುನಿಕ ಪರಿಸ್ಥಿತಿಗಳಲ್ಲಿ ಹಿಂದೂ ರಾಷ್ಟ್ರೀಯತೆ ಸಾಧ್ಯವಾಗುವ ವಿಷಯವೆಂದು ನಾವು ತಿಳಿದಿರುವುದಿಲ್ಲ. ಶಿವಾಜಿ, ರಾಮದಾಸರ ಕಾಲದಲ್ಲಿ ಹಿಂದೂ ರಾಷ್ಟ್ರೀಯತೆಗೆ ಒಂದು ಅರ್ಥವಿತ್ತು. ಆಗ ಮಹಮ್ಮದೀಯರ ಪ್ರಾಬಲ್ಯವನ್ನು ಅವರನ್ನು ಅಧಿಕಾರದಿಂದ ಉರುಳಿಸುವುದರ ಮೂಲಕ ಮೊಟಕುಗೊಳಿಸುವುದು ಗುರಿಯಾಗಿತ್ತು. ಒಮ್ಮೆ ಭಾರತೀಯರ ಏಕತೆ ಮತ್ತು ಸಹನಶೀಲತೆಗಳ ಪ್ರವೃತ್ತಿ ಹೊಂದಿದ್ದ ಆ ಪ್ರಾಬಲ್ಯ ದಬ್ಬಾಳಿಕೆಯದು ಮತ್ತು ಪೀಡಿಸುವಂತಹದು ಆಗಿತ್ತು. ಹಿಂದೂ ರಾಷ್ಟ್ರೀಯತೆ ಆಗ ಸಾಧ್ಯವಿತ್ತು, ಏಕೆಂದರೆ ಆಗ ಭಾರತ ತನ್ನದೇ ಒಂದು ಜಗತ್ತಾಗಿತ್ತು. ಇಡಿಯಾಗಿ ಹಿಂದೂ ಆಗಿದ್ದ ಮಹಾರಾಷ್ಟ್ರ ಮತ್ತು ರಜಪುತಾನಾ ಎಂಬ ಎರಡು ಭೌಗೋಳಿಕ ಘಟಕಗಳು ಅದಕ್ಕೆ ಒಂದು ಆಧಾರ ಒದಗಿಸಿದವು. ಅದು ಅವಶ್ಯವಾಗಿತ್ತು, ಏಕೆಂದರೆ ಮಹಮ್ಮದೀಯರ ಅಂಶ ತಮ್ಮ ಪ್ರಾಬಲ್ಯದ ದುರುಪಯೋಗದಿಂದ ಭಾರತದ ಭವಿಷ್ಯತ್ತಿಗೆ ಮಾರಕವಾಗಿತ್ತು. ಹಿಂದೂ ಪುನರ್ಜಾಗೃತಿ ಮತ್ತು ಪ್ರಾಬಲ್ಯಗಳ ಮೂಲಕ ಅದಕ್ಕೆ ಶಿಕ್ಷೆ ನೀಡಿ ಸರಿಪಡಿಸಬೇಕಾಗಿತ್ತು ಮತ್ತು ಅದು ಸಾಧ್ಯವಿತ್ತು ಹಾಗೂ ಅವಶ್ಯವಾಗಿತ್ತು ಎಂಬ ಕಾರಣದಿಂದ ಅಸ್ತಿತ್ವದಲ್ಲಿ ಬಂದಿತು. ಆದರೆ ಆಧುನಿಕ ಪರಿಸ್ಥಿತಿಗಳಲ್ಲಿ ಭಾರತ ಇಡಿಯಾಗಿರುವುದರ ಮೂಲಕ ಅಸ್ತಿತ್ವದಲ್ಲಿರಬಹುದು. ...

ಮಹಮ್ಮದೀಯರು, ಮೊದಲನೆಯದಾಗಿ, ತಾವು ಭಾರತೀಯರೆಂದು ಪರಿಗಣಿಸುವುದನ್ನು ತಿರಸ್ಕರಿಸಿ ಅದನ್ನು ಪ್ರತ್ಯೇಕತೆಗೆ ಆಧಾರವನ್ನಾಗಿ ಮಾಡಿಕೊಳ್ಳುತ್ತಾರೆ ಮತ್ತು ನಂತರ, ಭಾರತದಲ್ಲಿ ನಮ್ಮ ಮಧ್ಯೆ ಜನ್ಮ ತಾಳಿ, ನಮ್ಮ ರಕ್ತ ಹಂಚಿಕೊಂಡಿದ್ದರೂ ತಾವು ಅಸ್ತಿತ್ವದಲ್ಲಿರುವ ಮಹಮ್ಮದೀಯರ ದೇಶಗಳಿಗೆ ನಮಗಿಂತ ಹೆಚ್ಚು ಹತ್ತಿರವಾದವರು ಎಂದು ಭಾವಿಸುತ್ತಾರೆ. ಹಿಂದೂಗಳಿಗೆ ಅಂತಹ ಸಂಪನ್ಮೂಲವಿಲ್ಲ. ಒಳ್ಳೆಯದಕ್ಕಾಗಲಿ, ಕೆಟ್ಟದಕ್ಕಾಗಲಿ ಹಿಂದೂಗಳು

ಭಾರತದ ಮಣ್ಣಿಗೆ ಕಟ್ಟುಬಿದ್ದವರು, ಅವರು ತಮ್ಮ ಭೂಮಾತೆಯನ್ನು ತಿರಸ್ಕರಿಸಲಾರರು ಇಲ್ಲವೆ ಅವಳನ್ನು ತುಂಡುಮಾಡಿ ಹಾಕಲಾರರು. ಆದ್ದರಿಂದ ಭಾರತೀಯ ರಾಷ್ಟ್ರೀಯತೆ ನಮ್ಮ ಆದರ್ಶ, ಅದರ ಮನೋಭಾವದಲ್ಲಿ, ಸಂಪ್ರದಾಯಗಳಲ್ಲಿ ಹೆಚ್ಚಿನ ಮಟ್ಟಿಗೆ ಹಿಂದುವಾಗಿರುತ್ತದೆ, ಏಕೆಂದರೆ ಈ ಭೂಮಿ ಹಿಂದುಗಳಿಂದ ರೂಪುಗೊಂಡಿದೆ, ಹಿಂದುಗಳ ಗತಕಾಲದ ಶ್ರೇಷ್ಠತೆಯಿಂದ ಅದು ಪಟ್ಟು ಹಿಡಿದು ಉಳಿದುಕೊಂಡಿದೆ. ಅದನ್ನು ಗಟ್ಟಿಯಾಗಿ ಹಿಡಿದುಕೊಳ್ಳುವುದರಲ್ಲಿ ಹಿಂದೂ ಮನುಷ್ಯನ ನಾಗರಿಕತೆ, ಸಂಸ್ಕೃತಿ, ಅವನ ಜಯಿಸಲಾಗದ ವೀರ್ಯವತ್ತತೆ ಇವೆ, ಆದರೆ ಅದು ಮುಸ್ಲಿಮನನ್ನು ಅವನ ಸಂಸ್ಕೃತಿ, ಸಂಪ್ರದಾಯಗಳೊಂದಿಗೆ ಒಳಗೊಳ್ಳಲು ಮತ್ತು ಅದೆಲ್ಲವನ್ನು ತನ್ನಲ್ಲಿ ಹೀರಿಕೊಳ್ಳಲು ಸಾಕಷ್ಟು ವಿಶಾಲವಾದದ್ದೂ ಇದೆ. ಮಹಮ್ಮದೀಯನಿಗೆ ಅನಿವಾರ್ಯವಾದ ಭವಿಷ್ಯತ್ತನ್ನು ಗುರುತಿಸುವುದು ಸಾಧ್ಯವಾಗದೆ ಹೋಗಬಹುದು ಮತ್ತು ಅವನು ತನ್ನನ್ನು ತಕ್ಕಡಿಯಲ್ಲಿ ವಿರುದ್ಧ ಸ್ಥಾನದಲ್ಲಿ ಇರಿಸಿಕೊಳ್ಳಬಹುದು.

**(8/302–05)** – **ಶ್ರೀ ಅರವಿಂದರು** (Nov. 6, 1909)

*

## ಎಲ್ಲ ಧಾರ್ಮಿಕ ಮತಾಂಧತೆ ಮಿಥ್ಯೆಯಾದದ್ದು

ಕೇವಲ ದೈವೀಸತ್ಯ ಬೇಕೆಂದು ಹೇಳುತ್ತೀ, ಆದಾಗ್ಯೂ ನೀನು ಸಂಕುಚಿತ, ಅಜ್ಞಾನದ ಮತಾಂಧನ ಹಾಗೆ ಮಾತನಾಡುತ್ತೀ, ಮತಾಂಧ ತಾನು ಜನ್ಮತಾಳಿದ ಧರ್ಮವೊಂದನ್ನು ಹೊರತುಪಡಿಸಿ ಬೇರಾವುದರ ಮೇಲೆ ನಂಬಿಕೆ ಇರಿಸುವುದನ್ನು ತಿರಸ್ಕರಿಸುತ್ತಾನೆ. ಎಲ್ಲ ಮತಾಂಧತೆ ಮಿಥ್ಯೆಯದಾಗಿರುತ್ತದೆ, ಏಕೆಂದರೆ ಅದು ಭಗವಂತನ ಸ್ವಭಾವ ಹಾಗೂ ದೈವೀಸತ್ಯದ ವಿರುದ್ಧವಾಗಿರುತ್ತದೆ. ದೈವೀಸತ್ಯವನ್ನು ಬೈಬಲ್, ವೇದ ಇಲ್ಲವೆ ಕೊರಾನ್‌ಗಳಂತಹ ಏಕೈಕ ಗ್ರಂಥದಲ್ಲಿ ಇಲ್ಲವೆ ಏಕೈಕ ಧರ್ಮದಲ್ಲಿ ಮುಚ್ಚಿಡಲಾಗುವುದಿಲ್ಲ. ಭಗವಂತ ಸನಾತನ, ವಿಶ್ವಂಭರ ಮತ್ತು ಅನಂತನಾಗಿದ್ದಾನೆ ಮತ್ತು ಅವನು ಕೇವಲ ಮುಸಲ್ಮಾನರ ಇಲ್ಲವೆ ಯಹೂದ್ಯರ ಧರ್ಮದ ಸ್ವತ್ತಾಗಲು ಸಾಧ್ಯವಿಲ್ಲ – ಆ ಧರ್ಮಗಳು ಬೈಬಲ್ಲಿನ ಮಾರ್ಗದಲ್ಲಿದ್ದು ಅವುಗಳ ಸ್ಥಾಪಕರು ಯಹೂದ್ಯರು ಇಲ್ಲವೆ ಅರೇಬಿಯನ್ ಪ್ರವಾದಿಗಳಾಗಿದ್ದರು. ಹಿಂದುಗಳು, ಕನ್ಫೂಷಿಯನ್‌ರು, ತಾವೋಯಿಸ್ಟರು ಮತ್ತು ಉಳಿದವರೆಲ್ಲರು ಇವರಿಗೆ ಭಗವಂತನೊಡನೆ ಸಂಬಂಧ ಹೊಂದಿರುವುದಕ್ಕೆ ಮತ್ತು ತಮ್ಮದೇ ರೀತಿಯಲ್ಲಿ ದೈವೀಸತ್ಯವನ್ನು ಕಂಡುಕೊಳ್ಳುವುದಕ್ಕೆ ಸಮಾನ ಹಕ್ಕಿರುತ್ತದೆ. ಎಲ್ಲ



ಧರ್ಮಗಳಲ್ಲಿ ಒಂದಿಷ್ಟು ಸತ್ಯವಿರುತ್ತದೆ, ಆದರೆ ಯಾವ ಧರ್ಮದಲ್ಲಿಯೂ ಇಡಿಯಾದ ಸತ್ಯವಿರುವುದಿಲ್ಲ, ಅವೆಲ್ಲವೂ ಕಾಲಕ್ರಮದಲ್ಲಿ ಸೃಷ್ಟಿಯಾದವುಗಳು ಮತ್ತು ಕೊನೆಗೆ ಕುಂದಿಹೋಗುತ್ತವೆ, ನಾಶವಾಗುತ್ತವೆ. ಮಹಮ್ಮದನೇ ಸ್ವತಃ ಕೋರಾನ ಭಗವಂತನ ಕೊನೆಯ ಸಂದೇಶ ಮತ್ತು ಬೇರೆ ಯಾವ ಸತ್ಯವೂ ಇರುವುದಿಲ್ಲ ಎಂಬ ನಟನೆ ಮಾಡುತ್ತಿರಲಿಲ್ಲ. ಭಗವಂತ ಮತ್ತು ದೈವೀಸತ್ಯ ಈ ಧರ್ಮಗಳನ್ನು ಮೀರಿ ಉಳಿದುಕೊಳ್ಳುತ್ತವೆ ಮತ್ತು ಭಗವಂತನ ವಿವೇಕ ಆಯ್ದುಕೊಂಡ ರೂಪ ಹಾಗೂ ರೀತಿಗಳಲ್ಲಿ ತಮ್ಮನ್ನು ಪ್ರಕಟಿಸುತ್ತವೆ. ಭಗವಂತನನ್ನು ನಿನ್ನ ಸಂಕುಚಿತ ಮಿದುಳಿನ ಸೀಮಿತತೆಯಲ್ಲಿ ಮುಚ್ಚಿ ಹಾಕಲಾರೆ ಇಲ್ಲವೆ ದೈವೀ ಸಾಮರ್ಥ್ಯಕ್ಕೆ ಮತ್ತು ಪ್ರಜ್ಞೆಗೆ ಅದು ಹೇಗೆ, ಎಲ್ಲಿ ಮತ್ತು ಯಾರ ಮೂಲಕ ಪ್ರಕಟವಾಗಬೇಕು ಎಂಬುದನ್ನು ಕುರಿತು ಆದೇಶ ನೀಡಲಾರೆ. ದೈವೀ ಸರ್ವಸಾಮರ್ಥ್ಯದ ವಿರುದ್ಧ ನಿನ್ನ ನಿಶ್ಶಕ್ತ ಅಡೆತಡೆಗಳನ್ನು ಇರಿಸಲಾರೆ. ಇವು ಸರಳ ಸತ್ಯಗಳು, ಇವುಗಳನ್ನು ಈಗ ಜಗತ್ತಿನಾದ್ಯಂತ ಗುರುತಿಸಲಾಗುತ್ತದೆ, ಕೇವಲ ಮನಸ್ಸಿನಲ್ಲಿ ಬಾಲಿಶರಾದವರು ಯಾವುದೋ ಒಂದು ಗತಕಾಲದ ಸೂತ್ರದಲ್ಲಿ ಸಸ್ಯಗಳಂತೆ ಬೆಳೆಯುತ್ತ ಅವುಗಳನ್ನು ನಿರಾಕರಿಸುತ್ತಾರೆ.

*

ಅಲ್ಲದೆ ಮತಾಂಧತೆಯಲ್ಲಿ ಉದಾತ್ತವಾದದ್ದು ಯಾವುದೂ ಇರುವುದಿಲ್ಲ. – ಉದ್ದೇಶದ ಉದಾತ್ತತೆ ಇರುವುದಿಲ್ಲ, ಆದಾಗ್ಯೂ ಉದ್ದೇಶಕ್ಕಾಗಿ ಅಲ್ಲಿ ಭೀಕರ ಉತ್ಸಾಹವಿರಬಹುದು. ಧಾರ್ಮಿಕ ಮತಾಂಧತೆ ಮನಶ್ಶಾಸ್ತ್ರೀಯ ರೀತಿಯಲ್ಲಿ ನೀಚ ಜನ್ಮ ತಾಳಿದ್ದು ಮತ್ತು ಅಜ್ಞಾನದ್ದು – ಸಾಮಾನ್ಯವಾಗಿ ಅದರ ಕ್ರಿಯೆಯಲ್ಲಿ ಭೀಕರವಾದದ್ದು, ಕ್ರೂರ ಹಾಗೂ ನೀಚವಾದದ್ದು. ತನ್ನನ್ನು ಮಾತ್ರ ಬಲಿಕೊಡುವ ಹುತಾತ್ಮನ ಧಾರ್ಮಿಕ ಉತ್ಸಾಹ ಬೇರೆ ರೀತಿಯದಾಗಿರುತ್ತದೆ.

**(22/490)** – **ಶ್ರೀ ಅರವಿಂದರು** (23-10-1929)

*

## ಧಾರ್ಮಿಕ ಮತಾಂತರ ಕುರಿತು

ಆ ಹೇಳಿಕೆಯಿಂದ ಧರ್ಮದ ರೂಪ ಶಾಶ್ವತವಾದ ಏನೋ ಒಂದು, ಅದನ್ನು ಬದಲಾಯಿಸಲಾಗದು ಎಂಬ ಅರ್ಥವಿದ್ದರೆ, ಅದನ್ನು ಒಪ್ಪಿಕೊಳ್ಳಲಾಗದು. ಆದರೆ ಧರ್ಮದ ಅರ್ಥ ಇಲ್ಲಿ ಮನುಷ್ಯ ಭಗವಂತನೊಡನೆ ಸಂಸರ್ಗದಲ್ಲಿರುವ ರೀತಿ

ಎಂಬ ಅರ್ಥ ಹೊಂದಿದ್ದರೆ, ಆಗ ಅದು ಆಂತರಿಕ ಸತ್ತೆಗೆ ಸೇರಿದ ಏನೋ ಒಂದು ಎಂದಾಗಿರುತ್ತದೆ, ಅದನ್ನು ವೈಯಕ್ತಿಕ ಇಲ್ಲವೆ ಸಾಮಾಜಿಕ ಇಲ್ಲವೆ ಭೌತಿಕ ಅನುಕೂಲಕ್ಕಾಗಿ ಮನೆಯನ್ನಾಗಲಿ, ವಸ್ತ್ರಗಳನ್ನಾಗಲಿ ಬದಲಿಸಿದ ಹಾಗೆ ಬದಲಾಯಿಸಲಾಗುವುದಿಲ್ಲ. ಬದಲಾವಣೆ ಮಾಡಬೇಕಿದ್ದರೆ ಅದು ಆಂತರಿಕ ಆಧ್ಯಾತ್ಮಿಕ ಕಾರಣಕ್ಕಾಗಿರಬೇಕು, ಏಕೆಂದರೆ ಆಂತರಿಕವಾಗಿ ಒಂದಿಷ್ಟು ಅಭಿವೃದ್ಧಿಯಾಗುವುದು ಇರುತ್ತದೆ. ಯಾರನ್ನೂ ಒಂದು ಬಗೆಯ ಧರ್ಮಕ್ಕೆ ಇಲ್ಲವೆ ವಿಶಿಷ್ಟ ಪಂಥಕ್ಕೆ ಇಲ್ಲವೆ ಪದ್ಧತಿಗೆ ಕಟ್ಟಿ ಹಾಕಲಾಗುವುದಿಲ್ಲ, ಆದರೆ ಅವನು ಬಾಹ್ಯಕಾರಣಗಳಿಗಾಗಿ ಅವನು ಒಮ್ಮೆ ಸ್ವೀಕರಿಸಿದ ಧರ್ಮವನ್ನು ಇನ್ನೊಂದಕ್ಕಾಗಿ ಬದಲಾವಣೆ ಮಾಡಿದರೆ ಅವನಿಗೆ ಆಂತರಿಕವಾಗಿ ಯಾವ ಧರ್ಮವೂ ಇರುವುದಿಲ್ಲ, ಅವನ ಹೊಸ ಹಾಗೂ ಹಳೆಯ ಧರ್ಮಗಳು ಕೇವಲ ಶೂನ್ಯ ಸೂತ್ರಗಳಾಗಿರುತ್ತವೆ. ಆ ಹೇಳಿಕೆಯ ತಳಕ್ಕೆ ಅದು ನಮ್ಮನ್ನು ಎಳೆದೊಯ್ಯುತ್ತದೆ ಎಂದು ನಾನು ಭಾವಿಸುತ್ತೇನೆ. ದೈವೀಸತ್ಯಕ್ಕೆ ಭಿನ್ನವಾದ ರೀತಿಯಲ್ಲಿ ಸಮೀಪಿಸುವುದಕ್ಕಾಗಲಿ ಇಲ್ಲವೆ ಆಂತರಿಕ ಆಧ್ಯಾತ್ಮಿಕ ಅಭಿವ್ಯಕ್ತಿ ಬಯಸುವುದಕ್ಕಾಗಲಿ ಆದ್ಯತೆ ನೀಡುವುದು ಉದ್ದೇಶವಾಗಿದ್ದಾಗ ಬದಲಾವಣೆಗೆ ಸಲಹೆ ನೀಡುವುದಕ್ಕೆ ಮಹಾತ್ಮರು ಆಕ್ಷೇಪ ವ್ಯಕ್ತಪಡಿಸಿಲ್ಲ, ಪ್ರಸ್ತಾಪಿಸಿದ ಉದ್ದೇಶ ಸಾಮಾಜಿಕವಾಗಿ ಸ್ಥಾನಮಾನದಲ್ಲಿ ಹೆಚ್ಚಳ ಪಡೆಯುವುದಾಗಿದೆ, ಇದು ಧನಕ್ಕಾಗಿ ಇಲ್ಲವೆ ಲಗ್ನ ಮಾಡಿಕೊಳ್ಳುವುದಕ್ಕಾಗಿ ಮತಾಂತರಕ್ಕೆ ಒಳಗಾಗುವುದಕ್ಕಿಂತ ಹೆಚ್ಚು ಆಧ್ಯಾತ್ಮಿಕವಾದ ಉದ್ದೇಶವಲ್ಲ. ಮನುಷ್ಯ ತನ್ನೊಳಗೆ ಯಾವ ಧರ್ಮವನ್ನೂ ಹೊಂದಿರದಿದ್ದರೆ ಅವನು ತನ್ನ ಮತೀಯ ವೃತ್ತಿಯನ್ನು ಯಾವುದೇ ಉದ್ದೇಶಕ್ಕಾಗಿ ಬದಲಾಯಿಸಬಲ್ಲ. ಅವನಲ್ಲಿ ಧರ್ಮವೆಂಬುದು ಇದ್ದರೆ, ಅವನು ಹಾಗೆ ಮಾಡಲಾರನು, ಆಂತರಿಕ ಆಧ್ಯಾತ್ಮದ ಆವಶ್ಯಕತೆಗೆ ಉತ್ತರ ನೀಡುವ ರೂಪದಲ್ಲಿ ಹಾಗೆ ಮಾಡಬಲ್ಲನು. ಶ್ರೀಕೃಷ್ಣನ ರೂಪದಲ್ಲಿರುವ ಭಗವಂತನ ಬಗೆ ಭಕ್ತಿ ಹೊಂದಿರುವ ಮನುಷ್ಯ "ಸಮಾಜದಲ್ಲಿ ಗೌರವ ಹೆಚ್ಚಿಸಿಕೊಳ್ಳುವುದಕ್ಕಾಗಿ ಶ್ರೀಕೃಷ್ಣನ ಸ್ಥಾನದಲ್ಲಿ ಕ್ರಿಸ್ತನನ್ನಿರಿಸುತ್ತೇನೆ" ಎಂದು ಹೇಳಲಾರನು.

**(35/189–90)** – **ಶ್ರೀ ಅರವಿಂದರು** (October 19, 1935)

*



## SRI AUROBINDO SOCIETY

### Notice for the Annual General Meeting

The Annual General Meeting of the members of Sri Aurobindo Society will be held on Saturday, the 21st September 2013, at 4.00 p.m. at its registered office, **Sri Aurobindo Bhavan, 8, Shakespeare Sarani, Kolkata - 700 071,** to transact the following business:

1. To confirm the minutes of the last Annual General Meeting held on 22nd September 2012.
2. To consider and approve the audited Balance Sheet and Income & Expenditure Account of the Society for the year ended 31.03.2013.
3. To consider and adopt the Executive Committee's Annual Report of Activities for the year 2012-2013.
4. To appoint an auditor for the Society for the year 2013-2014.
5. To consider any other matter with the permission of the chair.

Sd/-

**28th May, 2013** (Pradeep Narang)
Puducherry Chairman

**Note :** The members are entitled to appoint proxy. Proxies must be deposited at the Registered Office of the Society, No.8, Shakespeare Sarani, Kolkata-700071, during office hours, in advance but not less than 48 hours before the time of the meeting. The proxy should be a member of the Society. Proxy forms is printed overleaf.



*"The path is long, but self-surrender makes it short,*
*the way is difficult, but perfect trust makes it easy."*

**- The Mother**

RNI No. 22511/1971
No. of Pages **56 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು–ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಅ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು – 560 078
ದೂರವಾಣಿ : 080–22449882, 22459268

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.